ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 22 | ಮೇ 27–ಜೂನ್ 2, 2019 | ಪುಟ 16 | ರೂ.10/-



2019ರ ಚುನಾವಣಾ ತೀರ್ಪು:
ಬಲಪಂಥೀಯ ದಾಳಿಯ ಕ್ರೋಢೀಕರಣದ ಸೂಚನೆ



ಅವರು ಪುರಾಣಗಳನ್ನು ಇತಿಹಾಸ ಎನ್ನುತ್ತಾರೆ
– ರೊಮಿಲ್ಲಾ ಥಾಪರ್



ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ – ಯುಕೆಜಿ

ಬಹುಮತ ಕ್ಯಾನ್ಸರ್‌ನಂತಹ ಬೆಳವಣಿಗೆ ಆಗದಿರಲಿ



ಸಾಮರಸ್ಯವನ್ನು ಕಾಯ್ದುಕೊಳ್ಳಬೇಕು ಮತ್ತು ಭವಿಷ್ಯದ ಸವಾಲುಗಳನ್ನು ಎದುರಿಸಲು ಐಕ್ಯತೆಯಿಂದ ಮುಂದೆ ಬರಬೇಕು

– ಚುನಾವಣಾ ಫಲಿತಾಂಶಗಳ ಹಿನ್ನೆಲೆಯಲ್ಲಿ ಜನತೆಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಕರೆ

17ನೇ ಲೋಕಸಭಾ ಚುನಾವಣೆಗಳ ಫಲಿತಾಂಶಗಳ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ಕೆಳಗಿನ ಹೇಳಿಕೆಯನ್ನು ನೀಡಿದೆ:

ಭಾರತದ ಮತದಾರರು ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಪರವಾಗಿ ಒಂದು ನಿರ್ಣಾಯಕ ತೀರ್ಪನ್ನು ನೀಡಿದ್ದಾರೆ.

ಸಿಪಿಐ(ಎಂ) ಈ ಚುನಾವಣೆಗಳಲ್ಲಿ ಒಂದು ತೀವ್ರ ಹಿನ್ನಡೆಯನ್ನು ಅನುಭವಿಸಿದೆ. ನಾವು ಇದರ ಕಾರಣಗಳ ಬಗ್ಗೆ ಆತ್ಮಾವಲೋಕನ ಮಾಡುತ್ತೇವೆ ಮತ್ತು ಭವಿಷ್ಯಕ್ಕೆ ಸರಿಯಾದ ಪಾಟಗಳನ್ನು ಕಲಿಯುತ್ತೇವೆ.

ಸಿಪಿಐ(ಎಂ) ತನ್ನ ಅಭ್ಯರ್ಥಿಗಳಿಗೆ ಮತನೀಡಿರುವ ಎಲ್ಲ ಜನರಿಗೂ ಧನ್ಯವಾದಗಳನ್ನು ಸಲ್ಲಿಸುತ್ತದೆ. ಈ ಚುನಾವಣೆಗಳಲ್ಲಿ ಸಿಪಿಐ(ಎಂ)ನ ಸಂದೇಶವನ್ನು ಜನತೆಯ ಬಳಿ ಒಯ್ಯಲು ದುಡಿದಿರುವ ಎಲ್ಲರಿಗೂ ಪೊಲಿಟ್ ಬ್ಯುರೊ ನಮನಗಳನ್ನು ಸಲ್ಲಿಸುತ್ತದೆ.

ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ರಕ್ಷಣೆ, ಸಂವಿಧಾನಿಕ ಅಧಿಕಾರಗಳನ್ನು ಹೊಂದಿರುವ ಸಂಸ್ಥೆಗಳು, ಜನತೆಯ ಹಕ್ಕುಗಳು ಮತ್ತು ಜೀವನಾಧಾರದ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಬಹುದೊಡ್ಡ ಸವಾಲುಗಳು ಮುಂದೆ ಇವೆ.

ಸಾಮರಸ್ಯವನ್ನು ಕಾಯ್ದುಕೊಳ್ಳಬೇಕು ಮತ್ತು ಭವಿಷ್ಯದಲ್ಲಿ ಈ ಸವಾಲುಗಳನ್ನು ಎದುರಿಸಲು ಐಕ್ಯತೆಯಿಂದ ಮುಂದೆ ಬರಬೇಕು ಎಂದು ಜನತೆಗೆ ಪೊಲಿಟ್ ಬ್ಯುರೊ ಕರೆ ನೀಡುತ್ತದೆ.

ಮೇ 27–27ರಂದು ಪೊಲಿಟ್‌ಬ್ಯುರೊ ಸಭೆ

ಪಕ್ಷದ ಕೇಂದ್ರ ಕಚೇರಿಯಲ್ಲಿ ಪೊಲಿಟ್‌ಬ್ಯುರೊಥ ತಕ್ಷಣದ ಈ ಪ್ರತಿಕ್ರಿಯೆಯನ್ನು ಪ್ರಕಟಿಸಿದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಚುನಾವಣಾ ಫಲಿತಾಂಶಗಳ ಪೂರ್ಣ ವಿವರಗಳು ಪ್ರಕಟವಾದ ಮೇಲೆ, ಮೇ 26 ಮತ್ತು 27ರಂದು ಪೊಲಿಟ್‌ಬ್ಯರೊ ಸಭೆ ಸೇರಿ ವಿವರವಾದ ವಿಶ್ಲೇಷಣೆಯನ್ನು ನಡೆಸುತ್ತದೆ, ನಂತರ ಜೂನ್ 7ರಿಮದ 9ರ ವರೆಗೆ ಸಭೆ ಸೇರುವ ಪಕ್ಷದ ಕೇಂದ್ರ ಸಮಿತಿ ಇದನ್ನು ಚರ್ಚಿಸಿ ಪಕ್ಷ ಕೈಗೊಳ್ಳಬೇಕಾದ ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಕ್ರಮಗಳನ್ನು ನಿರ್ಧರಿಸುತ್ತದೆ ಎಂದು ತಿಳಿಸಿದ್ದಾರೆ.

ವಿವಿಪ್ಯಾಟ್ ಗಣನೆಗೆ ನಕಾರ ಸುಪ್ರಿಂ ಕೋರ್ಟ್ ಆಶಯಕ್ಕೆ ವಿರುದ್ಧವಾಗಿದೆ–ಯೆಚುರಿ

ಇಲೆಕ್ಟ್ರಾನಿಕ್ ಮತಯಂತ್ರ(ಇವಿಎಂ)ಗಳಿಗೆ ಲಗತ್ತಿಸಿರುವ ವಿವಿಪ್ಯಾಟ್ ಚೀಟಿಗಳ ಗಣನೆಯನ್ನು ಮೊದಲು ಎತ್ತಿಕೊಳ್ಳಬೇಕೆಂಬ ಪ್ರತಿಪಕ್ಷಗಳ ಆಗ್ರಹವನ್ನು ಚುನಾವಣಾ ಆಯೋಗ ತಿರಸ್ಕರಿಸಿರುವುದು ಈ ಕುರಿತ ಸುಪ್ರಿಂ ಕೋರ್ಟ್ ಆಶಯಕ್ಕೆ ವಿರುದ್ಧವಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ.

ಇವಿಎಂಗಳ ಮೂಲಕ ಚುನಾವಣಾಯಲ್ಲಿ ಮೋಸ ನಡೆಯುವ ಸಾಧ್ಯತೆ ಇದೆ ಎಂಬ ಸಂದೇಹ ಬಂದಾಗ ಆ ಯಂತ್ರದಲ್ಲಿ ದಾಖಲಾಗುವ ಮತವನ್ನು ಸ್ವತಃ ಮತದಾರರೇ ಪರಿಶೋಧಿಸಬಹುದಾದ ವಿವಿಪ್ಯಾಟ್(ಮತದಾರ ಪರಿವೀಕ್ಷಿಸಿದ ಕಾಗದ ಪರಿಶೋಧನಾ ಜಾಡು) ಒಂದು ಉಪಕರಣವನ್ನು ಎಲ್ಲ ಮತಯಂತ್ರಗಳಿಗೆ ಲಗತ್ತಿಸಲು ಕೊನೆಗೂ ಒಪ್ಪಿದ ಚುನಾವಣಾ ಆಯೋಗ ಮೊದಲಿಗೆ ಇದರಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಇವಿಎಂನ ವಿವಿಪ್ಯಾಟ್ ಚೀಟಿಗಳ ಸ್ಯಾಂಪಲ್ ಗಣನೆ ಮಾಡಲಾಗುವುದು ಎಂದಿತು. ಈ ಕುರಿತು ಸುಪ್ರಿಂ ಕೋರ್ಟ್ ಮೊರೆ ಹೋದಾಗ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 5 ಇವಿಎಂಗಳ ವಿವಿಪ್ಯಾಟ್‌ಗಳ ಸ್ಯಾಂಪಲ್ ಗಣನೆ ನಡೆಸಲೇಬೇಕು ಎಂದು ಎಪ್ರಿಲ್ 8 ರಂದು ಆದೇಶ ನೀಡಿತು. ಇದನ್ನು ಒಪ್ಪಿಕೊಳ್ಳಲೇಬೇಕಾಗಿ ಬಂದ ಚುನಾವಣಾ ಆಯೋಗ ಇದನ್ನು ಇವಿಎಂಗಳ ಮತಗಣನೆ ನಡೆದ ನಂತರ ಕೊನೆಯಲ್ಲಿ ಮಾಡಲಾಗುವುದು ಎಂದು ಹೇಳಿತು.

ಇದಕ್ಕೆ ಅರ್ಥವಿಲ್ಲ, ಸ್ಯಾಂಪಲ್ ಗಣನೆ ಮೊದಲಿಗೆ ನಡೆಸಿ, ಅದರಲ್ಲಿ ಏನಾದರೂ ಏರುಪೇರು ಕಂಡರೆ ಎಲ್ಲ ವಿವಿಪ್ಯಾಟ್‌ಗಳ ಗಣನೆ ನಡೆಯಬೇಕು ಎಂದು ಮೇ 21ರಂದು ಚುನಾವಣಾ ಆಯೋಗವನ್ನು ಭೇಟಿ ಮಾಡಿದ 22 ರಾಜಕೀಯ ಪಕ್ಷಗಳು ಆಗ್ರಹಿಸಿದವು. ಆದರೆ ಈ ಕೋರಿಕೆಯನ್ನು ಚುನಾವಣಾ ಆಯೋಗ ತಿರಸ್ಕರಿಸಿದೆ. ಇದಕ್ಕೆ ಅದು ಕಾರಣಗಳನ್ನೇನೂ ಕೊಡಲಿಲ್ಲ.

"ಚುನಾವಣಾ ಪ್ರಕ್ರಿಯೆಯ ಸಮಗ್ರತೆಗಾಗಿ ಈ ಪ್ರಕ್ರಿಯೆಯನ್ನು ಇಷ್ಟೊಂದು ದೀರ್ಘಗೊಳಿಸಲಾಗಿದ್ದರೆ, ಅದೇ ಸಮಗ್ರತೆಗಾಗಿ ಸ್ಯಾಂಪಲ್‌ಗಳನ್ನು ಮೊದಲು ಪರೀಕ್ಷಿಸಬೇಕು ಎಂಬ ಮೂಲ ಸೂತ್ರವನ್ನು ಅನುಸರಿಸುತ್ತಿಲ್ಲವೇಕೆ?" ಎಂದು ಯೆಚುರಿ ಪ್ರಶ್ನಿಸಿದ್ದಾರೆ. ಅವರು "ಮತಗಳಿಕೆಯ ಚಿತ್ರ ಹೊರಬಂದ ಮೇಲೆ ವಿವಿಪ್ಯಾಟ್ ಚೀಟಿಗಳ ಗಣನೆ ವ್ಯರ್ಥಮತ್ತು ಅದರಿಂದ ಬಾಧಿತ ಅಭ್ಯರ್ಥಿಯ ಕಡೆಯಿಂದ ಪ್ರತಿಭಟನೆಗಳು ಮತ್ತು ಕಾನೂನು ವ್ಯವಸ್ಥೆಯ ಸಮಸ್ಯೆ ಉಂಟು ಮಾಡಬಹುದು" ಎಂದು ಹೇಳಿದ್ದಾರೆ.

ಲೈಂಗಿಕ ಕಿರುಕುಳದ ಆರೋಪ ಕುರಿತು ಸಿಐಟಿಯು: ನ್ಯಾಯಾಂಗದಲ್ಲಿ ಹೊಣೆಗಾರಿಕೆಯನ್ನು ಖಾತ್ರಿಪಡಿಸಿ

ಸುಪ್ರಿಂ ಕೋರ್ಟಿನ ಮಾಜಿ ಉದ್ಯೋಗಿಯೊಬ್ಬರು ಮುಖ್ಯ ನ್ಯಾಯಾಧೀಶರ ವಿರುದ್ಧ ಸಲ್ಲಿಸಿರುವ ಲೈಂಗಿಕ ಕಿರುಕುಳದ ದೂರಿನ ನಂತರದ ಬೆಳವಣಿಗೆಗಳು ಮತ್ತು ಸುಪ್ರಿಂ ಕೋರ್ಟಿನ ಕ್ರಮಗಳ ಬಗ್ಗೆ ಸಿಐಟಿಯು ಗಂಭೀರ ಆತಂಕವನ್ನು ವ್ಯಕ್ತಪಡಿಸಿದೆ.

ದುಡಿಮೆಯ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆ ಕಾನೂನು 'ಪೋಷ್' ವಿಧಿಸಿರುವ ವಿಧಿ–ವಿಧಾನಗಳನ್ನು ಈ ಕೇಸಿನಲ್ಲಿ ವಾಚಾ, ಮನಸಾ ಪಾಲಿಸಿಲ್ಲ ಎಂಬುದು ತನ್ನ ಅಭಿಪ್ರಾಯ ಎಂದು ಸಿಐಟಿಯು ಹೇಳಿದೆ.

ಮೊದಲನೆಯದಾಗಿ ಈ ಕಾನೂನು ವಿಧಿಸಿರುವ ಆಂತರಿಕ ದೂರುಗಳ ಸಮಿತಿ(ಐಸಿಸಿ)ಯನ್ನು ಸುಪ್ರಿಂ ಕೋರ್ಟಿನಲ್ಲಿ ರಚಿಸಲಾಗಿಲ್ಲ. ಉನ್ನತ ಹುದ್ದೆಗಳಲ್ಲಿರುವವರ ವಿರುದ್ಧ ದೂರುಗಳನ್ನು ನಿರ್ವಹಿಸುವ ವ್ಯವಸ್ಥೆ ವಿಶ್ವಾಸಾರ್ಹ ಮತ್ತು ಪಾರದರ್ಶಕವಾಗಿರಬೇಕು. ಇಲ್ಲಿ ಅದು ಹಾಗಾಗಿಲ್ಲ. ಮಹಿಳಾ ಹಕ್ಕುಗಳ ಮತ್ತು ಕಾನೂನು ಹಕ್ಕುಗಳ ಸಂಘಟನೆಗಳು ಈಗಾಗಲೇ ಇದರತ್ತ ಗಮನ ಸೆಳೆದಿವೆ.

ಸುಪ್ರಿಂ ಕೋರ್ಟ್ ನಮ್ಮ ಸಂವಿಧಾನ ಕಂಡರಿಸಿದಂತೆ ನಮ್ಮ ಪ್ರಜಾಪ್ರಭುತ್ವದ ಅತಿ ದುರ್ಬಲ ವಿಭಾಗಗಳಿಗೆ ನ್ಯಾಯ ಒದಗಿಸಲು ಪಾರದರ್ಶಕತೆಯ ಸೂತ್ರಗಳು, ನೀತಿ ಮತ್ತು ಮೌಲ್ಯಗಳನ್ನು ಎತ್ತಿ ಹಿಡಿಯುವುದು ಅಗತ್ಯವಾಗಿದೆ ಎಂಬ ತನ್ನ ಅಭಿಪ್ರಾಯವನ್ನು ಸೀಐಟಿಯು ದೃಢಪಡಿಸುತ್ತ ನ್ಯಾಯಾಂಗದ ವಿಶ್ವಾಸಾರ್ಹತೆಗೆ ಭಂಗ ಬರುವುದನ್ನು ತಡೆಯಬೇಕು ಎಂದು ಹೇಳಿದೆ. ಸುಪ್ರಿಂ ಕೋರ್ಟಿನ ನ್ಯಾಯಾಧೀಶರ ಸಂದರ್ಭದಲ್ಲಿಯೂ ವಿಶಾಖಾ ತೀರ್ಪಿನ ಮತ್ತು 'ಪೋಷ್' ಕಾಯ್ದೆಯ ಮಾರ್ಗಸೂತ್ರಗಳನ್ನು ಎತ್ತಿ ಹಿಡಿಯಬೇಕು.

ಲೈಂಗಿಕ ಕಿರುಕುಳಗಳ ಎಲ್ಲ ಸಂತ್ರಸ್ತರಿಗೆ ನ್ಯಾಯ ಒದಗಿಸಲು ನ್ಯಾಯಾಂಗ ಮತ್ತು ಶಾಸಕಾಂಗವೂ ಸೇರಿದಂತೆ ಎಲ್ಲ ಕೆಲಸದ ಸ್ಥಳಗಳಲ್ಲಿ ಎಲ್ಲ ವ್ಯಕ್ತಿಗಳನ್ನೂ ಒಳಗೊಳ್ಳುವಂತೆ ಸೂಕ್ತ ಮಾರ್ಗಸೂತ್ರಗಳು ಮತ್ತು ಕಾಯ್ದೆಗಳನ್ನು ರೂಪಿಸಬೇಕು ಎಂದು ಸಿಐಟಿಯು ಆಗ್ರಹಿಸಿದೆ.

ಡೈಮಂಡ್ ಹಾರ್ಬರ್‌ನಲ್ಲಿ ಮರುಮತದಾನಕ್ಕೆ ಆಗ್ರಹ

ಈ ಬಾರಿಯ ಸಾರ್ವತ್ರಿಕ ಚುನಾವಣೆಗಳಲ್ಲಿ ಮುಖ್ಯ ಚುನಾವಣಾ ಆಯುಕ್ತರಿಗೆ ಮೇ 21ರಂದು ಬರೆದ ಕೊನೆಯ ಪತ್ರದಲ್ಲಿ ಸೀತಾರಾಮ್ ಯೆಚುರಿಯವರು ಪಶ್ಚಿಮ ಬಂಗಾಲದ ಡೈಮಂಡ್ ಹಾರ್ಬರ್ ಕ್ಷೇತ್ರದಲ್ಲಿ ನಡೆದ ಅಕ್ರಮಗಳ ವಿವರಗಳನ್ನು ನೀಡಿ ಅಲ್ಲಿ ಮರು ಮತದಾನ ನಡೆಸುವಂತೆ ಆಗ್ರಹಿಸಿದರು. ಕೇವಲ ಮೂರು ದಿನಗಳ ಹಿಂದೆ, ಈ ರಾಜ್ಯದಲ್ಲಿ ಸಂವಿಧಾನದ 324 ನೇ ಕಲಮಿನ ಪ್ರಕಾರ 'ಮುಕ್ತ ಮತ್ತು ನ್ಯಾಯಸಮ್ಮತ' ಚುನಾವಣೆಗಳಿಗಾಗಿ ಚುನಾವಣಾ ಆಯೋಗ 'ಪ್ರಚಾರ ಮೌನ'ದ ಅವಧಿಯನ್ನು ಹಿಂದೂಡಿತ್ತು ಎಂಬುದನ್ನು ನೆನಪಿಸಿರುವ ಯೆಚುರಿಯವರ ಪತ್ರ, ಡೈಮಂಡ್ ಹಾರ್ಬರ್ ಕ್ಷೇತ್ರದಲ್ಲಿ ಅಕ್ರಮಗಳು ಯಾವ ಪ್ರಮಾಣದಲ್ಲಿ ನಡೆದಿವೆಯೆಂದರೆ, ಅದೇ ಕಲಮಿನ ಪ್ರಕಾರ ಮರು ಮತದಾನ ನಡೆಸುವುದು ಅಗತ್ಯವಾಗಿದೆ ಎಂದು ಹೇಳಿದ್ದರು.

ಇನ್ನೊಂದು ಅತ್ಯಂತ ಅಸಾಮಾನ್ಯ ಘಟನೆ ಮೇ 20ರಂದು ನಡೆಯಿತು. ಅಲ್ಲಿನ ರಿಟರ್ನಿಂಗ್ ಆಫೀಸರ್ ಪರೀಕ್ಷಣೆಯಾಗದ ಮತಗಟ್ಟೆಗಳ ಪರೀಕ್ಷಣೆಗೆ ಸಭೆ ಕರೆದಿದ್ದರು. ಆದರೆ ಅದನ್ನು ಕೊನೆಗಳಿಗೆಯಲ್ಲಿ ರದ್ದು ಮಾಡಲಾಯಿತು. ಏಕೆಂದರೆ, ಅದಕ್ಕೆ ರಾಜ್ಯದ ಮುಖ್ಯ ಚುನಾವಣಾ ಆಯುಕ್ತರ ಲಿಖಿತ ನಿರ್ದೇಶನ ಇರಲಿಲ್ಲ ಎಂದು ಕೆಲವರಿಂದ ಆಕ್ಷೇಪ ಬಂದಿತ್ತಂತೆ. ಈ ಆಕ್ಷೇಪ ರಾಜ್ಯ ಬಿಜೆಪಿ ಮತ್ತು ಟಿಎಂಸಿ ಎರಡರಿಂದಲೂ ಬಂದಿತ್ತು ಎಂದು ತಿಳಿದುಬಂದಿದೆ. ವಿಪರ್ಯಾಸವೆಂದರೆ, ದಿಲ್ಲಿಯಲ್ಲಿ ಬಿಜೆಪಿಯ ಕೇಂದ್ರ ನಾಯಕರು ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ಈ ಕ್ಷೇತ್ರದಲ್ಲಿ ಮರುಮತದಾನಕ್ಕೆ ಆಗ್ರಹಿಸಿದ್ದರು.

ನಿರೀಕ್ಷಿಸಿದಂತೆ, ಚುನಾವಣಾ ಆಯೋಗ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ.

ಇದಕ್ಕೆ ಮೊದಲು ಮತದಾನದ ಮುನ್ನಾದಿನ, ಯೆಚುರಿ ಮತ್ತು ಪೊಲಿಟ್‌ಬ್ಯುರೊ ಸದಸ್ಯರಾದ ಹನ್ನನ್ ಮೊಲ್ಲ ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿಯಾಗಿ ಈ ಕ್ಷೇತ್ರ ಮತ್ತು ಜಾಧವ್‌ಪರ್ ಕ್ಷೇತ್ರದಲ್ಲಿ ಮತದಾನದ ಬಗ್ಗೆ ಗಂಭೀರ ಆತಂಕವನ್ನು ವ್ಯಕ್ತಪಡಿಸಿದ್ದರು. ಈ ಕುರಿತಂತೆ ದಾಖಲೆಗಳನ್ನು ಮತ್ತು ಅಲ್ಲಿನ ಅಭ್ಯರ್ಥಿಗಳು ಅಲ್ಲಿನ ಚುನಾವಣಾ ಅಧಿಕಾರಿಗಳಿಗೆ ಬರೆದ 10 ಪತ್ರಗಳ ಪ್ರತಿಗಳನ್ನು ಸಲ್ಲಿಸಿದ್ದರು.

ಮೋಟಾರು ವಿಮೆ ದರಗಳ ಏರಿಕೆಯ ಐಆರ್‌ಡಿಎ ಪ್ರಸ್ತಾವಕ್ಕೆ ವಿರೋಧ

ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎ) ಕೃಷಿ ಟ್ರಾಕ್ಟರ್‌ಗಳೂ ಸೇರಿದಂತೆ ವಾಹನ ಅಪಘಾತಗಳಲ್ಲಿ ಥರ್ಡ್ ಪಾರ್ಟಿ ಅಂದರೆ ಮೂರನೆಯವರಿಗೆ ಆಗುವ ಹಾನಿಯನ್ನು ತುಂಬಿಕೊಡುವ ವಿಮೆಯ ಪ್ರೀಮಿಯಂ ದರಗಳನ್ನು ಹೆಚ್ಚಿಸುವ ಪ್ರಸ್ತಾವವನ್ನು ಮುಂದಿಟ್ಟಿದ್ದು ಇದಕ್ಕೆ ಸಂಬಂಧಪಟ್ಟವರು ಮೇ 29ರೊಳಗೆ ತಮ್ಮ ಅಭಿಪ್ರಾಯಗಳನ್ನು ಸಲ್ಲಿಸಬೇಕು ಎಂದು ಪ್ರಕಟಿಸಿದೆ. ದೇಶದಲ್ಲಿ ಚುನಾವಣೆಗಳು ನಡೆಯುತ್ತಿರುವ ನಡುವೆಯೇ ಮತ್ತು ಸದ್ಯದಲ್ಲಿಯೇ ಹೊಸ ಸರಕಾರ ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ, ಈ ಏರಿಕೆಗೆ ಸಮರ್ಥನೆಯಾಗಿ ಮಾಹಿತಿಗಳೇನನ್ನೂ ಕೊಡದೆ ಹೆಚ್ಚು ಕಾಲಾವಕಾಶವನ್ನೂ ಐಆರ್‌ಡಿಎ ಕೊಟ್ಟಿಲ್ಲ. ಇದು ಒಂದು ಅಪಾರದರ್ಶಕ ಕ್ರಮ ಎಂದು ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ (ಎಐಆರ್‌ಟಿಡಬ್ಲ್ಯುಎಫ್) ಬಲವಾಗಿ ಖಂಡಿಸಿದೆ. ಇದನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಅದು ಆಗ್ರಹಿಸಿದೆ.

ಕಳೆದ ವರ್ಷ ಎಐಆರ್‌ಟಿಡಬ್ಲ್ಯುಎಫ್ ಈ ಥರ್ಡ್ ಪಾರ್ಟಿ ವಿಮೆಯ ಪ್ರೀಮಿಯಂ ಸಂಗ್ರಹ ಮತ್ತು ದಾವೆಗಳ ಇತ್ಯರ್ಥದ ಮಾಹಿತಿಗಳನ್ನು ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಕೇಳಿತ್ತು. ಆಗ ಐಆರ್‌ಡಿಎ ಈ ಕುರಿತ ಮಾಹಿತಿ ತನ್ನ ಬಳಿ ಇಲ್ಲ ಎಂದಿತ್ತು. ಹಾಗಿದ್ದರೆ ಯಾವ ಆಧಾರದಲ್ಲಿ ಪ್ರತಿವಷವೂ ಪ್ರೀಮಿಯಂ ದರ ಏರಿಕೆಯ ಪ್ರಸ್ತಾವವನ್ನು ಇಡಲಾಗಿದೆ ಎಂದು ಈ ಪ್ರಸ್ತಾವದ ಪಾರದರ್ಶಕತೆಯನ್ನು ಅದು ಪ್ರಶ್ನಿಸಿದೆ. ಇಂತಹ ಅಪಾರದರ್ಶಕ ಕ್ರಮವು ಮೋಟಾರು ಮಾಲಕರನ್ನು ಶೋಷಿಸಲು ವಿಮಾ ಕಂಪನಿಗಳಿಗೆ ಅವಕಾಶ ಮಾಡಿಕೊಡುವಂತದ್ದು ಎಂದು ಅದು ಖಂಡಿಸಿದೆ.

ಮಾನವ ಹಕ್ಕುಗಳ ಕ್ರಿಯಾಶೀಲ ಕಾರ್ಯಕರ್ತರಿಗೆ ಕಿರುಕುಳ ನಿಲ್ಲಿಸಲು ಜೆಎಂಸ್ ಆಗ್ರಹ

ಮಾನವ ಹಕ್ಕುಗಳ ಕ್ರಿಯಾಶೀಲ ಕಾರ್ಯಕರ್ತರು, ಹಿರಿಯ ವಕೀಲರು ಆಗಿರುವ ಇಂದಿರಾ ಜೈಸಿಂಗ್‌ಮತ್ತು ಆನಂದ್ ಗ್ರೋವರ್ ಹಾಗೂ ಅವರ ಸಂಘಟನೆ– ಲಾಯರ್ಸ್ ಕಲೆಕ್ಟಿವ್ ಗಳನ್ನು ಗುರಿಯಾಗಿಟ್ಟು ಸರ್ವೋಚ್ಚ ನ್ಯಾಯಾಲಯದಲ್ಲಿ ಇದುವರೆಗೂ ಹೆಸರು ಕೇಳಿರದ ಸಂಸ್ಥೆಯೊಂದು ದೂರು ಸಲ್ಲಿಸಿದೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಇದನ್ನು ಖಂಡಿಸಿದೆ.

ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಮೇಲೆ ಮಾಜಿ ಉದ್ಯೋಗಿಯೊಬ್ಬರು ಲೈಂಗಿಕ ಕಿರುಕುಳದ ಆರೋಪ ಹೊರಿಸಿದಾಗ ಸರ್ವೋಚ್ಚ ನ್ಯಾಯಾಲಯದ ಆಂತರಿಕ ಸಮಿತಿಯ ಸರಿಯಲ್ಲದ ನಡವಳಿಕೆಯನ್ನು ಇತರ ಹಲವು ಪ್ರಾಜ್ಞ ಸಂಘಟನೆಗಳು, ವ್ಯಕ್ತಿಗಳ ರೀತಿಯಲ್ಲಿಯೇ ಇವರೂ ಕೂಡ ಟೀಕಿಸಿದ್ದರು.

ಈಗ ಅವರ ಮೇಲೆ ದಾಖಲಿಸಿದ ದೂರು ಮತ್ತು ತಕ್ಷಣವೇ FCRA ಉಲ್ಲಂಘನೆ ಮಾಡಿದ್ದಾರೆಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಿರುವ ಸಮಯವನ್ನು ನೋಡಿದರೆ ಅವರನ್ನು ಆ ಕಾರಣಕ್ಕಾಗಿಯೇ ಗುರಿಯಿಟ್ಟಂತೆ ಕಾಣುತ್ತಿದೆ.

ಆದ್ದರಿಂದ ಸರ್ವೋಚ್ಚ ನ್ಯಾಯಾಲಯವು ಯಾವುದೇ ಕಾರಣಕ್ಕೂ ಅವರಿಗೆ ನೋಟೀಸ್ ನೀಡಬಾರದು ಮತ್ತು ಅವರ ಮೇಲಿನ ಪ್ರಕರಣವನ್ನು ವಜಾ ಮಾಡಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಒತ್ತಾಯಿಸಿದೆ.

ಸಂಪಾದಕೀಯ

ಬಹುಮತ ಕ್ಯಾನ್ಸರ್‌ನಂತಹ ಬೆಳವಣಿಗೆ ಆಗದಿರಲಿ

ಮೋದಿ ಗೆಲುವು ಅನಿರೀಕ್ಷಿತವಾಗಿರಲಿಲ್ಲ. ಆದರೆ ಇಷ್ಟೊಂದು ದೈತ್ಯಾಕಾರದ ಆಡಳಿತ ಪರವಾದ ಅಲೆಯನ್ನು ಸ್ವಂತ ಬಿಜೆಪಿಯಾಗಲಿ ಆರೆಸ್ಸೆಸ್ ಆಗಲಿ ನಿರೀಕ್ಷಿಸಿರಲು ಸಾಧ್ಯವಿಲ್ಲ. ಹಿಂದೆ ಜವಾಹರಲಾಲ್ ನೆಹರು, ನಂತರ ಇಂದಿರಾಗಾಂಧಿ ಸಾಧಿಸಿದಂತೆ ಈಗ ಮೋದಿ ದಾಖಲೆಯ ಸಾಧನೆ ಮಾಡಿದ್ದಾರೆ. 2014ರಲ್ಲಿ ಬಿಜೆಪಿಯು 543 ಸ್ಥಾನಗಳಲ್ಲಿ 282 ಸ್ಥಾನಗಳನ್ನು ಜಯಿಸಿತ್ತು. 2019 ರಲ್ಲಿ ಅದು 542 ಸ್ಥಾನಗಳ ಪೈಕಿ 302 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ.

ಬಿಜೆಪಿ ಸ್ವತಂತ್ರವಾಗಿ ಇಷ್ಟೊಂದು ಪ್ರಚಂಡ ಗೆಲುವು ದಾಖಲಿಸಲು ಅನುಸರಿಸಿರಬಹುದಾದ ತಂತ್ರಗಳು, ಅದರ ನೆರವಿಗೆ ಬಂದಿರಬಹುದಾದ ಸಂಗತಿಗಳು ನಿಧಾನವಾಗಿ ಬಯಲಿಗೆ ಬರಬಹುದು. ಅದೇನೇ ಇದ್ದರೂ ಇಲ್ಲೊಂದು ಸ್ಪಷ್ಟವಾದ ಜನಾದೇಶ ವ್ಯಕ್ತವಾಗಿರುವುದನ್ನು ಯಾರಿಂದಲೂ ಅಲ್ಲಗಳೆಯಲು ಸಾಧ್ಯವಿಲ್ಲ. ವಿಪಕ್ಷಗಳು ತೀವ್ರ ಮುಖಭಂಗಕ್ಕೆ ಒಳಗಾಗಿದ್ದರೂ, ಜನಾದೇಶಕ್ಕೆ ಅವರು ತಲೆಬಾಗಲೇಬೇಕು.

ಮೋದಿ ನೇತೃತ್ವದಲ್ಲಿ ಬಿಜೆಪಿಗೆ ಲಭಿಸಿದ ಈ ಬೃಹತ್ ಬಹುಮತ ನಮ್ಮ ದೇಶದ ಪ್ರಜಾಪ್ರಭುತ್ವದ ಎದುರು ಹಲವು ಪ್ರಶ್ನೆಗಳನ್ನು ಮುಂದಿಟ್ಟಿದೆ. 2019 ರ ಲೋಕಸಭಾ ಚುನಾವಣೆ ವಿಷಯಧಾರಿತವಾಗಿತ್ತೆ? ಅಥವ ಅದು ಹೆಚ್ಚಾಗಿ ವ್ಯಕ್ತಿಯ ಆಧಾರಿತವಾಗಿತ್ತೆ? ವಿಷಯಾಧಾರಿತವಾಗಿದ್ದರೆ ಚುನಾವಣೆಯಲ್ಲಿ ಆರೋಗ್ಯಕರ ಚರ್ಚೆ ನಡೆಯುತ್ತದೆ. ಮತದಾರರು ಶಿಕ್ಷಣ ಪಡೆಯುತ್ತಾರೆ. ಚುನಾವಣೆಯಲ್ಲಿ ಅರ್ಥಪೂರ್ಣ ಪಾತ್ರವನ್ನು ನಿರ್ವಹಿಸುತ್ತಾರೆ. ಆದರೆ ಆ ವಿಷಯದಲ್ಲಿ 17ನೇ ಲೋಕಸಭಾ ಚುನಾವಣೆ ಗಂಭೀರವಾಗಿ ಸೋತಿದೆ. ಅದು ಹೆಚ್ಚು ವ್ಯಕ್ತಿ ಆಧಾರಿತವಾಗಿತ್ತು. ಹಾಗಾಗಿ ಚುನಾವಣೆ ಚರ್ಚೆಯಲ್ಲಿ ಹೆಚ್ಚೆಚ್ಚು ಪರಸ್ಪರ ಕೆಸರೆರಚಾಟ, ವ್ಯಕ್ತಿ ನಿಂದನೆ, 'ನೀನು ಕಳ್ಳ' ಅಂದರೆ 'ನಿನ್ನಪ್ಪ ಕಳ್ಳ' ಎನ್ನುವಂತ ಭಾಷೆಯ ಪ್ರಯೋಗ, ಇದರಲ್ಲೇ ಕಳೆದುಹೋಯಿತು.

ಮೋದಿಯವರಿಗೆ ಎದುರಾಳಿಗಳೆ ಇಲ್ಲ. ಮುಂದಿನ ಐದು ವರ್ಷ ಯಾರೂ ತುಟಿ ಬಿಚ್ಚುವಂತ್ತಿಲ್ಲ. ಇಷ್ಟೊಂದು ಬಹುಮತ ಕರುಣಿಸಿದ ಮತದಾರರು ಈಗ ನಿಶ್ಚಿಂತೆಯಿಂದ ಇರುವುದೊಂದೆ ಕೆಲಸ! ಭರವಸೆಗಳು ನೂರಾರು ಇರಬಹುದು. ಅವುಗಳನ್ನು ಈಡೇರಿಸಲೇಬೇಕು ಎಂಬ ಒತ್ತಾಯ ಒತ್ತಡ ಇರುವುದಿಲ್ಲವಲ್ಲ. ಬಹುಮತವಂತೂ ದೊರೆತಿದೆ. ಇನ್ನೇನು ಆಗಬೇಕು.

ವಿಪಕ್ಷಗಳ ಪರಿಸ್ಥಿತಿ ಗಂಭೀರವಾಗಿದೆ. ಯಾವುದೇ ಪಕ್ಷ ವಿಪಕ್ಷ ನಾಯಕ ಸ್ಥಾನಕ್ಕೆ ತನ್ನ ಅಭ್ಯರ್ಥಿಯನ್ನು ಆಯ್ಕೆ ಮಾಡುವಷ್ಟು ಸ್ಥಾನಗಳನ್ನು ಪಡೆದಿಲ್ಲ ಎಂದು ಹೇಳಲಾಗುತ್ತದೆ. ಪ್ರಜಾಪ್ರಭುತ್ವ ಅಂದರೆ ಬಹುಮತದ ಆಡಳಿತ ಎಂಬುದೇನೋ ನಿಜ. ಆದರೆ ವಿಪಕ್ಷಗಳಿಗೆ ಸ್ಥಾನವೇ ಇಲ್ಲದಂತಾದರೆ, ಅಂತಹ ಪ್ರಜಾಪ್ರಭುತ್ವ ಹೇಗೆ ಮಾದರಿಯಾಗಲು ಸಾಧ್ಯ? ವಿಪಕ್ಷಗಳ ಧ್ವನಿ ಅಡಗಿಸಿ, ಅವುಗಳ ಕಾರ್ಯನಿರ್ವಹಣೆಗೆ ಅವಕಾಶವನ್ನೇ ನಿರಾಕರಿಸುವ ಪ್ರಭುತ್ವವು ಸರ್ವಾಧಿಕಾರದತ್ತ ಹೆಜ್ಜೆ ಹಾಕುತ್ತಿರುವ ಪ್ರಭುತ್ವ ಆಗಲಿದೆ. ಭಾರೀ ಬಹುಮತವು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಅಪಾಯವಿದೆ.

ಬಿಜೆಪಿಗೆ ಸ್ವತಂತ್ರವಾಗಿ ಭಾರಿ ಬಹುಮತ ನೀಡಿದ ಮತದಾರರು ತಪ್ಪಿತಸ್ಥರಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಬಯಸುವ ಸರ್ಕಾರವನ್ನು ಪಡೆಯುತ್ತಾರೆ. ಆಯ್ಕೆ ಅವರ ಹಕ್ಕು. ಚಿಂತಿಸಬೇಕಾದದ್ದು ಈಗ ಉದ್ಭವಿಸಿರುವ ಪರಿಸ್ಥಿತಿ ಕುರಿತು. ಪ್ರಜಾಪ್ರಭುತ್ವದಲ್ಲಿ ಪ್ರತಿಪಕ್ಷಗಳು ವಿಶೇಷ ಜವಾಬ್ದಾರಿಯನ್ನು ನಿರ್ವಹಿಸುವುದಿರುತ್ತದೆ. ಪ್ರತಿಪಕ್ಷಗಳ ಟೀಕೆ ಟಿಪ್ಪಣಿ, ಸಲಹೆ–ಸೂಚನೆಗಳಿಂದ ಪ್ರಜಾಪ್ರಭುತ್ವ ಅರ್ಥಪೂರ್ಣವಾಗುತ್ತದೆ. ಬಂಡೆಕಲ್ಲಿನಂತಹ ಬಹುಮತವಾಗಲಿ, ಕ್ಯಾನ್ಸರ್‌ನಂತಹ ಬೆಳವಣಿಗೆಯನ್ನಾಗಲಿ ಯಾರೂ ಅಪೇಕ್ಷಿಸಬಾರದು. ಬಿಜೆಪಿಗೆ ಮತದಾರರು ನೀಡಿದ ಬಹುಮತ ಹಾಗಾಗದಿರಲಿ. 2014ರ ಬಹುಮತದಿಂದ ಈ ದೇಶದ ಅಲ್ಪಸಂಖ್ಯಾತರು, ದಲಿತರು, ಮಹಿಳೆಯರು ಕಂಗೆಟ್ಟಿದ್ದಾರೆ. ಅವಕಾಶ ಸಿಕ್ಕಲ್ಲೆಲ್ಲಾ ಪರ್ಯಾಯ ವಿಪಕ್ಷಗಳಿಗೆ ಮತ ನೀಡಿದ್ದಾರೆ. ಈಗ ಇನ್ನು ಹೆಚ್ಚಿನ ಬಹುಮತದಿಂದ ಅಧಿಕಾರಕ್ಕೇರಿರುವ ಬಿಜೆಪಿಯಿಂದ ಆತಂಕ ಹೆಚ್ಚಾಗುತ್ತಿದ್ದರೆ ಆಶ್ಚರ್ಯವೇನಿಲ್ಲ.

ಪ್ರತಿಪಕ್ಷಗಳು ಹತಾಶರಾಗಬಾರದು. ವಿಮುಖರಾಗಬಾರದು. ತಮ್ಮ ಸೋಲಿಗೆ ಕಾರಣಗಳನ್ನು ಕೊಂಡುಕೊಳ್ಳಲು ಮುಕ್ತವಾದ ಸ್ವವಿಮರ್ಶೆ ಮಾಡಿಕೊಳ್ಳಬೇಕು. ಕಾರ್ಯಕರ್ತರಿಗೆ ನಮ್ಮ ದೇಶದ ಸಂವಿಧಾನವನ್ನು ಕುರಿತು, ಅದರ ಆಶಯಗಳ ಕುರಿತು ನಿರಂತರ ಶಿಕ್ಷಣ ನೀಡಲು ವಿಪಕ್ಷಗಳು ಮುಂದಾಗಬೇಕು. ವ್ಯಕ್ತಿಗತ ಲಾಭಕ್ಕಾಗಿ, ರಾಜಕಾರಣವನ್ನು ಒಂದು ದಂಧೆಯಾಗಿ ಮಾಡಿಕೊಳ್ಳುವ ಪ್ರವೃತ್ತಿಯನ್ನು ತೊರೆಯುವಂತೆ ಅವರಲ್ಲಿ ಆದರ್ಶಗಳನ್ನು ಬಿತ್ತಬೇಕು. ಜನಪರ ಹೋರಾಟಗಳನ್ನು ಕೈಗೊಳ್ಳಬೇಕು. ಕ್ಯಾನ್ಸರ್ ಗಡ್ಡೆಯನ್ನು ಕತ್ತರಿಸಿ ಹಾಕಬೇಕು. ಮುಂದಿನ ಸಮರಕ್ಕೆ ಸಜ್ಜಾಗಬೇಕು. ■

ಬಿಜೆಪಿಯ ನಿರಂತರ ಧಾಳಿಗಳು ಏದುಸಿರು ಬಿಡುತ್ತಿರುವ ಮೈತ್ರಿಕೂಟ

ಎಸ್.ವೈ. ಗುರುಶಾಂತ್

ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿನ ಫಲಿತಾಂಶ ಅನಿರೀಕ್ಷಿತ ಹಾಗೂ ಅಚ್ಚರಿದಾಯಕವಾಗಿದೆ. ಸ್ವತಃ ಬಿಜೆಪಿ ನಾಯಕರು ಸಹ ಇಷ್ಟು ಸ್ಥಾನ ಗೆಲ್ಲುವ ನಿರೀಕ್ಷೆಯನ್ನು ಇರಿಸಿಕೊಂಡಿರಲಿಲ್ಲ ಅನಿಸುತ್ತದೆ. ಹಿಂದಿನ ಚುನಾವಣೆಯಲ್ಲಿ 17 ಸಂಸದರಿದ್ದ ಬಿಜೆಪಿ 25 ಸ್ಥಾನ ಗಳಿಸಿದೆ. 9 ರಿಂದ ಕಾಂಗ್ರೆಸ್ 1 ಕ್ಕೆ, ಜೆಡಿಎಸ್ ಪಕ್ಷ 2 ರಿಂದ 1 ಕ್ಕೆ ಕುಸಿದಿದೆ. ಪಕ್ಷೇತರರೊಬ್ಬರು 1 ಸ್ಥಾನ ಪಡೆದಿದ್ದಾರೆ. ಹಿರಿಯ ನಾಯಕರಾದ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಮಲ್ಲಿಕಾರ್ಜುನ ಖರ್ಗೆ, ಮೊಯ್ಲಿ, ಮುನಿಯಪ್ಪ ಮುಂತಾದವರ ಸೋಲು ಗಂಭೀರವಾದುದು. ಇದು ರಾಜ್ಯದಲ್ಲಿ ಸರಕಾರ ರಚಿಸಿರುವ ಮೈತ್ರಿ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿ ಎಸ್ ಪಕ್ಷಗಳೆರಡರಲ್ಲೂ ತೀವ್ರ ಆತಂಕ, ನಿರಾಶೆ ಉಂಟು ಮಾಡಿದೆ. ಈ ಸೋಲಿನ ಹೊಣೆ ಯಾರ ಹೆಗಲಿಗೇರಿಸಬೇಕು ಎನ್ನುವ 'ಆತ್ಮಾಲೋಕನ' ದಲ್ಲಿ ಕೆಸರೆರಚಾಟವೇ ಎದ್ದು ಕಾಣುತ್ತಿದೆ.

ಈ ಗೆಲುವಿನ ಹುಮ್ಮಸ್ಸಿನಲ್ಲೇ ಬಿಜೆಪಿ ನಾಯಕರು ಈ ಫಲಿತಾಂಶವನ್ನು ಮೈತ್ರಿ ಕೂಟದ ವಿರುದ್ಧ, ಈ ಸರಕಾರದ ಪತನಕ್ಕೆ ಭಾರೀ ಅಸ್ತ್ರವನ್ನಾಗಿ ಬಳಸಲು ಮುಂದಾಗಿದ್ದಾರೆ. ಕಳೆದ ವಿಧಾನಭಾ ಚುನಾವಣಾ ಫಲಿತಾಂಶ ಬಂದಾಗಿನಿಂದಲೂ ಜನಾದೇಶವನ್ನು ಮನ್ನಿಸದೇ ಹೇಗಾದರೂ ಅಧಿಕಾರ ಹಿಡಿಯಲೇ ಬೇಕೆಂದು ಬಿಜೆಪಿ ಪ್ರಯತ್ನಿಸುತ್ತಲೇ ಬಂದಿದೆ.ಸರಕಾರ ಉರುಳಿಸಲು ಯತ್ನಿಸುತ್ತಾ ವಿಫಲವಾಗುತ್ತಲೇ ಇದೆ. ಆದರೂ ಅದರ ದುಷ್ಕೃತ್ಯಗಳು, ಪಿತೂರಿ ನಿಂತಿಲ್ಲ. ಈಗಲೂ ಫಲಿತಾಂಶವನ್ನೇ ನೆಪವಾಗಿಸಿ ಸರಕಾರವನ್ನು ಉರುಳಿಸಲು ಕುತಂತ್ರ ಹೆಣೆಯುತ್ತಿದೆ. 'ಜನಾದೇಶ ಈ ಮೈತ್ರಿ ಕೂಟದ ವಿರುದ್ಧ ಇರುವುದರಿಂದ ರಾಜಿನಾಮೆ ಕೊಡಿ. ಎರಡು ದಿನಗಳ ಗಡುವು ಕೊಡುತ್ತೇವೆ. ಇಲ್ಲವಾದರೆ. . .' ಈ ಬೆದರಿಕೆಯ ಮಾತುಗಳ ಅರ್ಥವೇನು?

ಅರ್ಥ ಇಷ್ಟೇ, ಈ ಮೈತ್ರಿಯ ಪಕ್ಷಗಳಲ್ಲಿ ವಿಶೇಷವಾಗಿ ಕಾಂಗ್ರೆಸ್ ಪಕ್ಷದಲ್ಲಿ ಮಂತ್ರಿಗಿರಿ ಇತ್ಯಾದಿ ಅಧಿಕಾರ ಲಾಲಸೆಯಲ್ಲಿ ಕೆಲವು ಶಾಸಕರು ಅತೃಪ್ತರಾಗಿ ಸದಾ ಬ್ಲಾಕ್ ಮೆಲ್ ಮಾಡುತ್ತಾ ಬರುತ್ತಿದ್ದಾರೆ. ಇಂತಹವರನ್ನು ಮತ್ತು ಇನ್ನೂ ಹಲವರನ್ನು ಸೆಳೆದು ಬಹುಮತವನ್ನು ಅಲ್ಪಮತಕ್ಕೆ ಇಳಿಸಿ, ತಾವೇ ಸರಕಾರ ರಚಿಸಲು ಬಿಜೆಪಿ ಹವಣಿಸುತ್ತಿದೆ.ಅದಕ್ಕಾಗಿ ಹಣ, ಆಮಿಷ, ರೈಡ್‌ನಂತಹ ಬೆದರಿಕೆ ಇತ್ಯಾದಿಗಳನ್ನು ಬಳಸುತ್ತಾ ಬಂದಿರುವುದನ್ನು ಇಡೀ ವರುಷದುದ್ದಕ್ಕೂ ಕಾಣುತ್ತಿದ್ದೇವೆ. ಕಾಂಗ್ರೆಸ್ ಮತ್ತು ಜೆಡಿಎಸ್ ಒಳಗಿನ, ಅವುಗಳ ನಡುವಿನ ಆಂತರಿಕ ಕಿತ್ತಾಟ, ಅಧಿಕಾರ ದಾಹವನ್ನು ಬಳಸಿಕೊಳ್ಳಲು ಮತ್ತು ಅದನ್ನು ಹೆಚ್ಚಿಸಲು ಬಿಜೆಪಿ ಹೆಣಗುತ್ತಿದೆ. ಜನತೆ ಬಿಜೆಪಿಗೆಹೆಚ್ಚಿನ ಸ್ಥಾನಗಳನ್ನು ನೀಡಿದ್ದಾರೆಯೇ ಹೊರತು ಅಧಿಕಾರ ನಡೆಸಲು ಜನಾದೇಶ ನೀಡಿಲ್ಲ. ಚುನಾಯಿತ ಪಕ್ಷಗಳು, ಈ ಮೈತ್ರಿಕೂಟ ಐದು ವರುಷಗಳ ಕಾಲ ಅಧಿಕಾರ ನಡೆಸಲು ಹಕ್ಕು ಹೊಂದಿವೆ. ಆದ್ದರಿಂದ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸಬೇಕೆಂಬ ಕನಿಷ್ಟ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅದು ಗೌರವಿಸುತ್ತಿಲ್ಲ. ಅಸಂವಿಧಾನಾತ್ಮಕ ವಿಧಾನಗಳಿಂದ ಅಪಾಯಕಾರಿ ಆಟಕ್ಕೆ ಬಿಜೆಪಿ ಇಳಿದಿದೆ. ಈಗಲೂ ಅದು ಅಧಿಕಾರ, ಹಣ, ಮುಂತಾದ ಆಮಿಷಗಳಿಂದ ಈ ಸರಕಾರ ಉರುಳಿಸಲು ಹೊರಟಿದೆ.

ಪರಿಸ್ಥಿತಿ ಹೀಗಿರುವಾಗ ಕಾಂಗ್ರೆಸ್‌ನ ಕೆಲವು ನಾಯಕರು ಈ ಮೈತ್ರಿಕೂಟ ಹಾಗೂ ಅದರ ಭಾಗಿದಾರ ಜೆಡಿ ಎಸ್ ವಿರುದ್ಧವೇ, ಹಾಗೇ ಜೆಡಿ ಎಸ್ ಕೆಲವು ನಾಯಕರು ಕಾಂಗ್ರೆಸ್ ವಿರುದ್ಧ ಧಾಳಿ ಮಾಡುವುದು ಕೋಮುವಾದಿ ಬಿಜೆಪಿಯ ಕುತಂತ್ರಗಳಾಟಕ್ಕೆ ಇನ್ನಷ್ಟೂ ಅನುವು ಮಾಡಿ ಕೊಟ್ಟಿದೆ.

ಈ ಮೇ 25 ಕ್ಕೆ ಈ ಮೈತ್ರಿಕೂಟದ ಹೆಚ್.ಡಿ.ಕುಮಾರಸ್ವಾಮಿಯವರ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದು ಒಂದು ವರ್ಷ ತುಂಬುತ್ತಿದೆ.

ನಿಖರ ಸ್ವರೂಪ ಪಡೆಯದ ಮೈತ್ರಿ

'ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಬೇಕು' ಎಂಬುದೇ ತಮ್ಮ ಉದ್ದೇಶವೆಂದು ಹೇಳಿಕೊಂಡರೂ ಅದಕ್ಕೆ ಬೇಕಾದ ರಾಜಕೀಯ ಬದ್ಧತೆ, ಆಡಳಿತಾತ್ಮಕ ಕ್ರಿಯಾಶೀಲತೆ ಹಾಗೂ ಕಾಳಜಿ ಎರಡು ಪಕ್ಷಗಳಲ್ಲಿ ಇನ್ನಷ್ಟೂ ನಿಖರ ಸ್ವರೂಪವನ್ನು ಪಡೆಯಬೇಕು. ಈ ಮೈತ್ರಿಕೂಟ ಉಪಚುನಾವಣೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಹೊಂದಾಣಿಕೆಯನ್ನೇನೋ ಮಾಡಿಕೊಂಡವು. ಆದರೆ ನಿತ್ಯದ ಆಡಳಿತದಲ್ಲಿ ಅಧಿಕಾರವೇ ಆದ್ಯತೆ ಎಂಬುದನ್ನೇ ಇವು ಪ್ರತಿಪಾದಿಸಿವೆ. ಜೆಡಿ ಎಸ್ ಪಕ್ಷಕ್ಕೆ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಟ್ಟಿರುವ ಕಾಂಗ್ರೆಸ್ಸಿನ ಹೈಕಮಾಂಡ್ ಕ್ರಮಕ್ಕೆ ರಾಜ್ಯದ ಕಾಂಗ್ರೆಸ್ಸಿಗರಲ್ಲಿ ಮುನಿಸಿದೆ. ಆದರೆ ಆದರ ಕಾಂಗ್ರೆಸ್ ಪಕ್ಷಕ್ಕೇ ಅತಿ ಹೆಚ್ಚು ಹೊಣೆಗಾರಿಕೆಯೂ ಇದೆ ಎಂಬುದನ್ನು ಮರೆಯಲಾಗುವುದಿಲ್ಲ. ಹಾಗೆ ನೋಡಿದರೆ ಈ ಮೈತ್ರಿ ಅವರ ಹೈಕಮಾಂಡ್ ನ "ದೂರದೃಷ್ಟಿ"ಯ ಪರಿಣಾಮ. ಇದಕ್ಕೆ ಬಗ್ಗಿದ ರಾಜ್ಯ ನಾಯಕರ ಅರೆಮನಸ್ಸಿನ ಅಂಗೀಕಾರ ಎಂಬುದು ಪ್ರತಿ ಬಿಕ್ಕಟ್ಟಿನ ಹಂತದಲ್ಲಿಯೂ ಗೋಚರ. ಇಲ್ಲಿ ಮೈತ್ರಿಯನ್ನು ಪ್ರತಿಪಾದಿಸುತ್ತಲೇ ಆಯಾ ಪಕ್ಷಗಳು ತಮ್ಮ ಅಸ್ಥಿತ್ವ ಉಳಿಸಿ, ಬೆಳೆಸಲು ಹೆಣಗಬೇಕಾದ ಅನಿವಾರ್ಯತೆ ಮತ್ತೊಂದು ಕಡೆ.

ಯಾವುದೇ ಮೈತ್ರಿಕೂಟದ ಸರ್ಕಾರ ಯಶಸ್ವಿಯಾಗಿ ಕಾರ್ಯ ನಿರ್ವಹಿಸಬೇಕಾದರೆ ಅದಕ್ಕೆ ಒಂದು ಸ್ಪಷ್ಟವಾದ, ನಿರ್ಣಾಯಕವಾದ ಕಾರ್ಯಸೂಚಿ ಇರಬೇಕಾಗುತ್ತದೆ. ಎರಡು ಪಕ್ಷಗಳ ಚುನಾವಣಾ ಪ್ರಣಾಳಿಕೆಯ ಅಂಶಗಳ ಜಾರಿ ಈ ಸರ್ಕಾರದ ಆದ್ಯತೆ ಎಂದು ಘೋಷಿಸಿದರೂ ಒಂದು ಸರ್ಕಾರವಾಗಿ ಪ್ರತ್ಯೇಕವಾಗಿ ಒಂದು ಸಮಗ್ರ ಕಣ್ಣೋಟ ರೂಪಿಸುವುದು ಅಗತ್ಯ. ಅದರ ಕೊರತೆ ಪ್ರತಿ ನಿರ್ಣಾಯಕ ಸಂದರ್ಭದಲ್ಲಿ ಎದ್ದು ಕಾಣುತ್ತದೆ. ಮೊದಲನೆಯದಾಗಿ, ಮೈತ್ರಿಕೂಟವೇ ಘೋಷಿಸಿಕೊಂಡ 'ಕೋಮುವಾದಿ ಶಕ್ತಿಗಳನ್ನು ದೂರ ಇಡಬೇಕು' ಎಂಬ ಉದ್ದೇಶದ ಸಾಧನೆಗೆ ನಿರ್ಣಾಯಕವಾದ ಕಾರ್ಯಸೂಚಿ, ಕ್ರಿಯಾಶೀಲತೆ ಅಗತ್ಯ. ರಾಜಕೀಯ ಧೃವೀಕರಣಕ್ಕೆ ಬಿಜೆಪಿ–ಪರಿವಾರ ನಡೆಸುವ ಪ್ರಯತ್ನಗಳನ್ನು ಹಿಮ್ಮೆಟ್ಟಿಸಲು ರಾಜಕೀಯ ಬದ್ಧತೆ ಹಾಗೂ ಕಾರ್ಯಕ್ರಮ ಅಷ್ಟಾಗಿ ಇಲ್ಲ. ಸಾಮಾಜಿಕ ತಳಹದಿಯ ತನ್ನ ಬೇರುಗಳನ್ನು ಆಳಕ್ಕಿಳಿಸಿ ವಿಸ್ತರಿಸಿಕೊಳ್ಳುವ ಈ ಶಕ್ತಿಗಳನ್ನು ಕೇವಲ ಚುನಾವಣಾ ಮೈತ್ರಿಯಿಂದಲೇ ದುರ್ಬಲಗೊಳಿಸಲು ಆಗುವುದಿಲ್ಲ. ಅದಕ್ಕೆ ಒಂದು ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕ, ಕ್ರಿಯಾಶೀಲತೆ ಅತ್ಯಗತ್ಯ.

ನಿರೀಕ್ಷೆಗಳು ಅಪಾರ

ಸಮಾಜ ಸರ್ವತೋಮುಖ ಪ್ರಗತಿ ಸಾಧಿಸಬೇಕಾದರೆ ಶಾಂತಿ, ಸಾಮರಸ್ಯ ಅತ್ಯಗತ್ಯ. ಹಾಗೆಯೇ,ಆಕರ್ಷಕ ರಾಜಕೀಯ ಘೋಷಣೆಗಳಿಗಿಂತ ತಮ್ಮ ನಿತ್ಯದ ಭಾಧೆಗಳಿಗೆ ಪರಿಹಾರವನ್ನು ಜನತೆ ಹೆಚ್ಚು ನಿರೀಕ್ಷಿಸುತ್ತದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಕೈಗೊಳ್ಳುವ ಆರ್ಥಿಕ ಕ್ರಮಗಳು ಮಹತ್ವ ಆಗಿರುತ್ತವೆ.

ಜೆಡಿಎಸ್ ಪಕ್ಷದ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದರೂ ಮೈತ್ರಿ ಭಾಗೀದಾರ ಕಾಂಗ್ರೆಸ್‌ನ ಮೈತ್ರಿಕೂಟದ ಈ ಸರ್ಕಾರ ಆ ಎರಡೂ

ಪುಟ 4 ಕ್ಕೆ

ಬಿಜೆಪಿಯ ನಿರಂತರ ಧಾಳಿಗಳು ಏದುಸಿರು ಬಿಡುತ್ತಿರುವ ಮೈತ್ರಿಕೂಟ....... ಪುಟ 3 ರಿಂದ

ಪಕ್ಷಗಳ ಆರ್ಥಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಹೊಣೆಗಾರಿಕೆ ವಹಿಸಿಕೊಂಡಿದೆ. ತನ್ನದೇ ಪ್ರತ್ಯೇಕ ಪ್ರಣಾಳಿಕೆ ಹೊಂದಿದ್ದರೂ ಜೆಡಿಎಸ್ ಪಕ್ಷ ಕಾಂಗ್ರೆಸ್ ನ ಹಿಂದಿನ ಸಿದ್ದರಾಮಯ್ಯನವರ ಸರ್ಕಾರದ ಕಾರ್ಯಕ್ರಮಗಳನ್ನು ಮುಂದುವರಿಸುವ ಭರವಸೆ ನೀಡಿದೆ. ಗಮನಿಸಬೇಕಾದ್ದೆಂದರೆ ಈ ಸರ್ಕಾರಕ್ಕೆ ಕೆಲವು 'ಕಾರ್ಯಕ್ರಮ'ಗಳಿವೆಯೇ ಹೊರತು, ತನ್ನದೇ ಆದ ಪರ್ಯಾಯ ಹೋಗಲಿ, ವಿಭಿನ್ನ ಆರ್ಥಿಕ ನೀತಿ ಎಂಬುದೇ ಇಲ್ಲ. ಬದಲಾಗಿ, ಕೇಂದ್ರದ ಆರ್ಥಿಕ ನೀತಿಗಳ ಜಾರಿಯನ್ನೇ ಈ ಪಕ್ಷಗಳು ವಹಿಸಿಕೊಂಡಿವೆ!

ಅಂತಹ ನೀತಿಗಳ ನೆಚ್ಚಿಗೆ ಕೃಷಿ– ಕೈಗಾರಿಕಾ ರಂಗಗಳಲ್ಲಿ ಮಹತ್ವದ ಮುನ್ನಡೆ ಸಾಧಿಸಲು ಅಸಾಧ್ಯವಾಗಿರುವ ಸನ್ನಿವೇಶದಲ್ಲಿ ಜನಪ್ರಿಯ ಅಥವಾ 'ಜನಮರುಳು' ಯೋಜನೆಗಳು ಅನಿವಾರ್ಯ ಅಗತ್ಯಗಳಾಗಿ ಪ್ರಮುಖ ಸ್ಥಾನ ಪಡೆದಿವೆ.

ಭಿನ್ನವಿಲ್ಲ

ಈ ಸರಕಾರದ ಆರ್ಥಿಕ ಧೋರಣೆ ಭಿನ್ನವಾದದ್ದೇನಲ್ಲ ಎಂಬುದು ಮಧ್ಯಂತರದ ಮತ್ತು 2019–20 ರ ಈ ಎರಡು ಬಜೆಟ್ ಗಳಲ್ಲಿ ವ್ಯಕ್ತಗೊಂಡಿದೆ. ಹಿಂದಿನಿಂದಲೂ ರಾಜ್ಯದ ಒಟ್ಟು ಆರ್ಥಿಕತೆಗೆ ಕೃಷಿ, ಕೈಗಾರಿಕಾ ಮೂಲಭೂತ ಕ್ಷೇತ್ರಗಳ ಕೊಡುಗೆ ಒಟ್ಟಾರೆ ಕುಂಠಿತಗೊಂಡಿದೆ. ಹಾಗೂ ಸೇವಾ ಕ್ಷೇತ್ರದ ಮೇಲೆ ಅದರ ಒತ್ತು ಹಾಗೂ ಭಾರ ಮುಂದುವರೆದಿದೆ. ಪ್ರಸಕ್ತವಾಗಿ ಹಿಂದಿನ ವರ್ಷವಿದ್ದ ಆರ್ಥಿಕ ಬೆಳವಣಿಗೆಯ ದರ ಶೇಕಡಾ 10.4 ಇದ್ದದ್ದು 9.6 ಕ್ಕೆ ಕುಸಿಯುವ ಅಂದಾಜಿದೆ.ನೂರಕ್ಕೂ ಹೆಚ್ಚಿನ ತಾಲೂಕುಗಳಲ್ಲಿ ಮುಂದುವರಿದಿರುವ ಬರ ಕೃಷಿಯ ಅಭಿವೃದ್ಧಿಯಲ್ಲಿ ಶೇ.4.8 ರಷ್ಟು ಕುಸಿತ ಕಾಣಲು ಕಾರಣವಾಗಲಿದೆ.ಕೃಷಿ ಶೇ.10.11 ಮತ್ತು ಕೈಗಾರಿಕಾ ವಲಯದ ಕೊಡುಗೆ ದರ ಶೇ.22ಕ್ಕೆ ಇಳಿಯಲಿದೆ.ಇದಕ್ಕೆದುರಾಗಿ ಸೇವಾ ವಲಯದ ಕೊಡುಗೆಯೇ ಶೇ. 67.87.

ಆರ್ಥಿಕತೆಯ ಮೂಲಭೂತ ಕ್ಷೇತ್ರಗಳಾದ ಕೃಷಿ–ಕೈಗಾರಿಕಾ ಉತ್ಪನ್ನ ಮೂಲೆಗೆ ಒತ್ತರಿಸಲ್ಪಟ್ಟು ಐ.ಟಿ–ಬಿ.ಟಿ ಮುಂತಾದ ಸೇವಾ ವಲಯದ ಮೇಲೆ ಆರ್ಥಿಕತೆ ಅಧಿಕವಾಗಿ ಅವಲಂಬಿಸಿರುವುದು ಆರೋಗ್ಯಕರ ಬೆಳವಣಿಗೆಯಲ್ಲ. ನಿಜಾರ್ಥದಲ್ಲಿ ಅದೊಂದು 'ಅಭಿವೃದ್ಧಿ' 'ನೀರ ಮೇಲಣ ಗುಳ್ಳೆ'. ಈ ಸ್ಥಿತಿಯಲ್ಲಿಯೇ ಬಹುತೇಕ ಇಂತಹ ಎಲ್ಲ ಸರ್ಕಾರಗಳೂ ಅಧಿಕಾರದಲ್ಲಿ ಉಳಿಯಲು ಮತ್ತು ಅದರಲ್ಲಿ ಸಿಕ್ಕಷ್ಟನ್ನು 'ಗಂಟು ಕಟ್ಟಲು' ಇನ್ನಿಲ್ಲದಂತಹ ಸರ್ಕಸ್ ಮಾಡುತ್ತವೆ. ಆದ್ದರಿಂದ ಮೂಲ ಪರಿಹಾರದ ಬದಲು 'ಅರಳು–ಮರುಳು' ಗೊಳಿಸುವ ಯೋಜನೆಗಳೇ ಆದ್ಯತೆ ಪಡೆಯುತ್ತವೆ.

ಆರಂಭದ ಈ ವರುಷವೇ ಸರ್ಕಾರದ ಎಲ್ಲವನ್ನೂ ಮೌಲ್ಯಮಾಪನ ಮಾಡಿ ಇಷ್ಟೇ ಎಂದು ಹೇಳುವುದು ಕಷ್ಟ ಹಾಗೂ ಸೂಕ್ತವಲ್ಲ. ಆದರೂ ಅದರ ನಡಿಗೆಯ ಹಾದಿಯನ್ನು ಗುರುತಿಸಲು ಈ ಒಂದು ವರ್ಷ ಸಾಕು.

ಕನಸಿನ ಕನ್ನಡಿಯೊಳಗಿನ ಗಂಟುಗಳು

ಹಣಕಾಸಿನ ಖಾತೆಯನ್ನು ನಿರ್ವಹಿಸುತ್ತಿರುವ ಮುಖ್ಯಮಂತ್ರಿಗಳು ಮಂಡಿಸಿದ 2019–20 ನೇ ಸಾಲಿನ ಬಜೆಟ್ ಗಾತ್ರ ರೂ.2,34,153 ಕೋಟಿಗಳದ್ದಾಗಿದೆ. ಆದರೆ ಈ ಬಜೆಟ್ಟಿನ ಕೊರತೆಯೇ 42,051 ಕೋಟಿ. (ಬಜೆಟ್ ನ ಶೇ.21ರಷ್ಟು) ಇದು ಜಿ.ಎಸ್.ಡಿ.ಪಿ. (ರಾಜ್ಯದ ಆಂತರಿಕ ಉತ್ಪನ್ನ 15,88,330 ಕೋಟಿ ರೂ.ಗಳ) ಯ ಶೇ.2.65 ಎಂದು ಹೇಳಲಾಗಿದೆ.ಆಂತರಿಕ ಉತ್ಪನ್ನದ ಹೆಚ್ಚಳವಿಲ್ಲದೆ ಇಂತಹ ಕೊರತೆಯನ್ನು ಸರಿದೂಗಿಸಲು ಸರಕಾರ ಏನು ಮಾಡುತ್ತದೆ?ಒಂದನೆಯದಾಗಿ, ಜನರಿಗೆ ಕೊಟ್ಟ ಭರವಸೆಗಳು 'ಕನ್ನಡಿಯೊಳಗಿನ ಕನಸಿನ ಗಂಟ'ನ್ನಾಗಿಸುವುದು.ಇಲ್ಲವೇ ಕೆಲವು ಕ್ಷೇತ್ರಗಳಿಗೆ ಹಂಚಿಕೆಯಾದ ಹಣ ಖರ್ಚು ಮಾಡದೆ ಇರುವುದು ಅಥವಾ ಹೊರಗಿನ ಸಾಲಗಳನ್ನು ಅವಲಂಬಿಸುವುದು. ಬಜೆಟ್ ನ ಕೊರತೆಯನ್ನು ನಿಭಾಯಿಸಲು ಸಾಲಕ್ಕೆ ಮೊರೆ ಹೋಗುವುದು ಸುಲಭದ ಆಯ್ಕೆಯಾಗಿ ಬಿಟ್ಟಿದೆ. ಇಂತಹ ಕ್ರಮಗಳಿಂದಾಗಿ ಯಾವುದೇ ಪಕ್ಷದ ಸರಕಾರ ಅಧಿಕಾರದಲ್ಲಿದ್ದರೂ ಅವರೆಲ್ಲಾ ಸಾಲ ಬೆಳೆಸುವಲ್ಲಿ ಸ್ಪರ್ಧಾ ನಿಸ್ಸೀನರೇ! ಪ್ರತಿ ವರುಷವೂ ಸಾಲದ ಹೊರೆ ಬೆಳೆಯುತ್ತಲೇ ಹೋಗುತ್ತದೆ ಹೊರತು ಒಂದಿಷ್ಟನ್ನಾದರೂ ತೀರಿಸಿ ಕಡಿಮೆಗೊಂಡೇ ಇಲ್ಲ! 2019–20 ರ ಸಾಲಿನಲ್ಲಿ ಅದು ಸುಮಾರು 2 ಲಕ್ಷದ 34 ಸಾವಿರ ಕೋಟಿ ರೂಪಾಯಿಗಳಿಗೆ ಏರಿಕೆ ಆಗುವಲ್ಲಿ ಆಶ್ಚರ್ಯವಿಲ್ಲ.

ಬೇಕಿದೆ ಬದ್ಧತೆ

ಸರಕಾರದ ಆರ್ಥಿಕ ನೀತಿ ದುಡಿಯುವವರ, ಒಟ್ಟಾರೆ ಜನಪರವಾಗಬೇಕಾದರೆ ಕೈಗಾರಿಕೆ ಕೃಷಿ ಮುಂತಾದ ಆರ್ಥಿಕ ಕ್ಷೇತ್ರಕ್ಕೆ, ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ, ಆಹಾರ ಭದ್ರತೆಯಂತಹ ಸಾಮಾಜಿಕ, ಮಾನವಾಭಿವೃದ್ಧಿಯ ಕ್ಷೇತ್ರಕ್ಕೆ ಹೆಚ್ಚಿನ ಹೂಡಿಕೆ ಮಾಡುವುದು ಅಗತ್ಯ. 2017–18 ರಿಂದ 2019–20 ರ ಆಯ– ವ್ಯಯದಲ್ಲಿ ಸಾಮಾನ್ಯ ಸೇವೆಗೆ ನೀಡಲಾಗುವ ಹಣ ಹಂಚಿಕೆ ಶೇ.20.5 ರಿಂದ ಶೇ.23.2 ಹೆಚ್ಚಳವಿದೆ.ಆದರೆ ಆರ್ಥಿಕ ಸೇವೆ ಶೇ.36.9 ರಿಂದ 35.9 ಕ್ಕೆ, ಸಾಮಾಜಿಕ ಸೇವೆ 38.9 ರಿಂದ 37.7 ಕ್ಕೆ ಇಳಿಕೆಯಾಗಿದೆ.



ಪ್ರಮುಖ ಸಾಮಾಜಿಕ ಸೇವಾ ಕ್ಷೇತ್ರಗಳಾದ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಕ್ಷೇತ್ರವಾದ ಕೃಷಿಯಲ್ಲಿ ಇದೇ ರೀತಿ ಬಜೆಟ್ ಗಾತ್ರದ ಏರಿಕೆಯಿಂದ ನಿಜ ಮೊತ್ತಗಳಲ್ಲಿ ಏರಿಕೆಯಾಗಿದ್ದರೂ ಶೇಕಡವಾರು ಕಡಿಮೆಯಾಗಿರುವುದು ಮತ್ತು ಕಳೆದ ಮೂರು ವರ್ಷಗಳಲ್ಲಿ ಅತಿ ಕಡಿಮೆ ಇರುವುದು ಕಂಡು ಬರುತ್ತದೆ.ಸೇವಾ ಕ್ಷೇತ್ರಗಳಲ್ಲಿ ಹೂಡಿಕೆ 2017–18 ರಲ್ಲಿ ಕೃಷಿ ಶೇ. 2.9 ಇದ್ದದ್ದು 2019 ರಲ್ಲಿ ಶೇ 2.6, 2019–20 ರಲ್ಲಿ ಶೇ.2.4 ಕ್ಕೆ ಕಡಿಮೆಯಾಗಿದೆ. ಆರೋಗ್ಯ ಕ್ಷೇತ್ರ ಶೇ.3.5, ಶೇ.3.6 ಮತ್ತು ಶೇ.3.4, ಶಿಕ್ಷಣ ಶೇ.11.5, 11.7, ಮತ್ತು ಶೇ.11.3.

ಶಿಕ್ಷಣದ ಹೂಡಿಕೆ 2000–01ರಲ್ಲಿ ಎಲ್ಲಾ ರಾಜ್ಯಗಳ ಸರಾಸರಿ ಶೇ.17.4 ಇರುವಾಗ ಕರ್ನಾಟಕದ್ದು ಶೇ. 17.7 ಇತ್ತು. ಆದರೆ 2016– 17 ರಲ್ಲಿ ಎಲ್ಲಾ ರಾಜ್ಯಗಳದ್ದು ಸರಾಸರಿ ಶೇ 15.6 ಇರುವಾಗ ಕರ್ನಾಟಕದ್ದು 12.7 ಕ್ಕೆ ಇಳಿದಿತ್ತು.ಆರೋಗ್ಯ ಕ್ಷೇತ್ರದಲ್ಲಿ 2004ರಲ್ಲಿಯೇ ರಾಜ್ಯ ಮಟ್ಟದ ಯೋಜನೆ ತಯಾರಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆ ಪಡೆದ ಕರ್ನಾಟಕ ಇತರ ರಾಜ್ಯಗಳ ಸರಾಸರಿ ಗಿಂತ ಹೆಚ್ಚು ಹಣ ಇರಿಸಿತ್ತು. 2016–17 ರಲ್ಲಿ ರಾಜ್ಯಗಳ ಸರಾಸರಿ ಶೇ 4.9 ಇದ್ದರೆ ಕರ್ನಾಟಕದ ಹೂಡಿಕೆ ಶೇ 3.5 !.ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಹೂಡಿಕೆ ಚೇತರಿಸಿಕೊಂಡಿಲ್ಲ.

ಸರಕಾರದ ಆರ್ಥಿಕ ಸ್ಥಿತಿಯ ಸುಧಾರಣೆಗೆ ಆಂತರಿಕ ಸಂಪನ್ಮೂಲಗಳ ಕ್ರೋಢೀಕರಣ ಮುಖ್ಯವಾಗಿದೆ.ಇದಕ್ಕಾಗಿ ತೆರಿಗೆಗಳ ಮೂಲಕ ಹಣ ಸಂಗ್ರಹಿಸುವುದು ಸಾಮಾನ್ಯ.ಆದರೆ ಜಿ.ಎಸ್.ಟಿ. ಮೂಲಕ ಕೇಂದ್ರವು ರಾಜ್ಯದ ಕೈಗಳನ್ನು ಕಟ್ಟಿ ಹಾಕಿದೆ. ಕೇಂದ್ರದ ಮುಂದೆ ಮಂಡಿಯೂರಿ ಅಂಗಲಾಚಿ ಬೇಡಬೇಕಾದ ಪರಿಸ್ಥಿತಿಯೂ ಇದೆ. ಕೇಂದ್ರದ ನೆರವು, ಸಂಪನ್ಮೂಲಗಳನ್ನು ರಾಜ್ಯ ಸರ್ಕಾರಗಳು ಪಡೆಯಲು ಹೋರಾಡಬೇಕಾದ ಅಗತ್ಯವಿದೆ. ಈ ದಿಕ್ಕಿನಲ್ಲಿ ಕರ್ನಾಟಕದಂತಹ ಸರ್ಕಾರದ ಧ್ವನಿ ಕ್ಷೀಣ ಎನ್ನಬಹುದು.ಹೀಗಾಗಿ ಹೊರ ಸಾಲದ ಮೇಲೆ ಅವಲಂಬಿಸುವುದು ಆರ್ಥಿಕವಾಗಿ ರಾಜ್ಯಗಳನ್ನು ದಿವಾಳಿ ಅಂಚಿಗೆ ನೂಕುತ್ತದೆ.

ವಿದೇಶಿ ಬಂಡವಾಳ ಹೂಡಿಕೆಗೆ ನಿರಂತರವಾಗಿ ಕರ್ನಾಟಕ ಪ್ರಯತ್ನ ನಡೆಸುತ್ತಲೇ ಬಂದಿದೆ.ಅದಕ್ಕಾಗಿ ಅಂತರಾಷ್ಟ್ರೀಯ ಹಲವು ಸಮ್ಮಿಲನಗಳನ್ನು ಸತತವಾಗಿ ನಡೆಸುತ್ತಲೇ ಇದೆ.ಆದರೆ ಅಲ್ಲಿ ಸಿಕ್ಕ ಭರವಸೆ ಪೂರ್ಣವಾಗಿ ಜಾರಿಯಾಗದೇ ಇರುವುದು ವಾಸ್ತವ. ಆದರೆ ಈಗಿನ ಸಮ್ಮಿಶ್ರ ಸರ್ಕಾರವೂ ಬಂಡವಾಳ ಹೂಡಿಕೆ ಲಭಿಸುತ್ತಿದೆ, ಅದನ್ನು ವಿವಿಧ ಕ್ಷೇತ್ರಗಳಿಗೆ ಅದನ್ನು ತೊಡಗಿಸಲಾಗುವುದು ಎಂದು ಹೇಳುತ್ತಿದೆ. 'ಕಾಂಪಿಟ್ ವಿತ್ ಚೈನಾ' ಎಂಬ ನೀತಿಯನ್ನು ಅಂಗೀಕರಿಸಿದೆ.

ಕೆಲವು ಸ್ವಾಗತಾರ್ಹ ಕ್ರಮಗಳು

ದೇಶದ ಇಡೀ ಕಾರ್ಷಿಕ ರಂಗವೇ ಬಿಕ್ಕಟ್ಟಿನಲ್ಲಿದ್ದು ರೈತರ ಆತ್ಮಹತ್ಯೆಗಳಿಗೆ ಮುಖ್ಯ ಕಾರಣ. ಕೃಷಿ ಸಾಲ, ರೈತನಿಗೆ ಫಸಲಿಗೆ ಬೆಂಬಲಿತ ಬೆಲೆ ನಿಗದಿಯೂ ಒಳಗೊಂಡು ಕೃಷಿ ಬಿಕ್ಕಟ್ಟಿನ ಬಾಧೆಗಳಿಂದ ರಕ್ಷಿಸಲು ಡಾ.ಸ್ವಾಮಿನಾಥನ್ ಆಯೋಗದ ಶಿಫಾರಸ್ಸುಗಳ ಜಾರಿ ಬಗ್ಗೆ ಎಲ್ಲ ಸರ್ಕಾರಗಳು ಮಾತನಾಡಿದರೂ ಈ ದೆಸೆಯಲ್ಲಿ ದಿಟ್ಟ ಕ್ರಮಗಳನ್ನು ಕೈಗೊಳ್ಳಲಾಗುತ್ತಿಲ್ಲ. ಕುಮಾರಸ್ವಾಮಿ ಅವರ ನೇತೃತ್ವದ ಸರ್ಕಾರ ಸುಮಾರು 46,000 ಕೋಟಿ ರೂಪಾಯಿಗಳ ಬೆಳೆ ಸಾಲ ಮನ್ನಾ ಮಾಡಲು ನಿರ್ಧರಿಸಿರುವುದು ಅತ್ಯಂತ ಮಹತ್ವದ್ದಾಗಿದೆ.ದೇಶದಲ್ಲಿ ಒಂದು ರಾಜ್ಯ ಸರ್ಕಾರ ಕೈಗೊಂಡ ಕ್ರಮ ದಾಖಲಾರ್ಹ.ಈ ಕ್ರಮದ ಮೂಲಕ ಸಮಿಶ್ರ ಸರ್ಕಾರ ಕೃಷಿಕರ ಪರ ಕಾಳಜಿ ಉಳ್ಳದ್ದು ಎಂದು ಬಿಂಬಿಸಿ ಕೊಂಡಿದೆ.ಇದು ಮೂಲ ಪ್ರಶ್ನೆಗಳನ್ನು ಇತ್ಯರ್ಥಗೊಳಿಸದೇ ಇದ್ದರೂ ರೈತರ ಮೇಲಿನ ಹೊರೆ ಇಳಿಸುವಲ್ಲಿ ಮಹತ್ವದ ಹೆಜ್ಜೆ.ಕೇರಳದ ಮಾದರಿಯಲ್ಲಿ ಸಾಲ ಪರಿಹಾರ ಆಯೋಗದ ಸ್ಥಾಪನೆ ಸ್ವಾಗತ. ಹಾಗೆ ರೇಷ್ಮೆ ಕೈಗಾರಿಕೆಗಳ ಆಧುನಿಕರಣಕ್ಕೆ ಹಣ ಮೀಸಲು, 500 ಸಂಯುಕ್ತ ಬೇಸಾಯ ಸಹಕಾರ ಸಂಘಗಳ ಸ್ಥಾಪನೆ, ಬೆಲೆ ಕೊರತೆ ಪಾವತಿ ಯೋಜನೆಗಳು, ಸಕಾರಾತ್ಮಕವಾಗಿದ್ದು ಜಾರಿಯಾಗಬೇಕು.

ಬರೀ ಭರವಸೆ ಆಗದಿರಲಿ

ಕೃಷಿ ಕೂಲಿಕಾರರಿಗೆ ವಿಶೇಷ ಯೋಜನೆಗಳು ರೂಪಗೊಂಡಿಲ್ಲ. ವಲಸೆ ತಡೆಗೆ ಒಂದು ಕಾರ್ಯಯೋಜನೆ ಇಲ್ಲ. ಕೃಷಿ ಕೂಲಿಕಾರ ರಕ್ಷಣೆಗೆ ಒಂದು ಕಾನೂನು ಅಗತ್ಯವಾಗಿದೆ.ಆದರೆ ಅದರತ್ತ ಗಮನವಿಲ್ಲ. ಆದರೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮಾನವ ದಿನಗಳ ಹೆಚ್ಚಳ ಸ್ವಲ್ಪ ಮಟ್ಟಿಗೆ ಸಹಕಾರಿ.ನಿರುದ್ಯೋಗದ ನಿವಾರಣೆಗೂ ಸ್ಪಷ್ಟ ಯೋಜನೆಯ ಕೊರತೆ ಇದೆ.ಸರ್ಕಾರ ತಾನೇ ಹಾಕಿಕೊಂಡಿರುವ ನಿರ್ಬಂಧಗಳಿಂದಾಗಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಬರೇ ಬಾಯಿ ಮಾತಿನ ವರಸೆ ಯಾಗಿದೆ.

ದಲಿತ ಮತ್ತು ಆದಿವಾಸಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಸುಮಾರು ಹದಿನೈದು ಸಾವಿರ ಕೋಟಿ ಹಣವನ್ನು ಈ ಬಜೆಟ್ಟಿನಲ್ಲಿ ಮೀಸಲಿರಿಸಲಾಗಿದೆ. 14500 ಕೋಟಿ ರೂಪಾಯಿಗಳ ಮೊತ್ತವನ್ನು ಸೇರಿಸಿದರೆ ಅತಿ ದೊಡ್ಡ ದಾದ ಮೊತ್ತವದು. ಆದರೆ ಇದಕ್ಕೆ ಮೀಸಲಾದ ಹಣದ ಸದ್ಬಳಕೆಗೆ ಸರ್ಕಾರ ಗಂಭೀರವಾಗಿ ಯೋಚಿಸುತ್ತಿಲ್ಲ ಮತ್ತು ಅದರ ಜಾರಿಗೆ ಜಾರಿ ಮಾಡದೇ ಇರುವ ಅಧಿಕಾರಿಗಳ ಮೇಲೆ ಕ್ರಮಕ್ಕೆ ಮುಂದಾಗುತ್ತಿಲ್ಲ. ಹೀಗಾಗಿ ಅವರ ಪರಿಸ್ಥಿತಿ ಶೋಚನೀಯವಾಗಿಯೇ ಉಳಿದಿದೆ.

ವಿದ್ಯುತ್ ಆಟೋಗಳ ಪರಿವರ್ತನೆಗೆ 'ಸಾರಥಿ ಸೂರು' ಯೋಜನೆಯಡಿ ಸಬ್ಸಿಡಿ, ಚಾಲಕರ ದಿನದ ಘೋಷಣೆ, ಗಾರ್ಮೆಂಟ್ಸ್ ಕಾರ್ಮಿಕರಿಗೆ ಬಾಡಿಗೆ ಆಧಾರಿತ ವಸತಿ ಯೋಜನೆ, ಬೀದಿ ವ್ಯಾಪಾರಿಗಳಿಗೆ ಹತ್ತು ಸಾವಿರ ರೂಪಾಯಿ ಸಾಲದ 'ಕಾಯಕ ಬಂಧು', ಅಂಗನವಾಡಿ, ಆಶಾ ಕಾರ್ಯಕರ್ತರಿಗೆ ಗೌರವ ಧನದ ಹೆಚ್ಚಳ ಇವು ಕೆಲವು ಸ್ವಾಗತಾರ್ಹ ಅಂಶಗಳು.

ಈಡೇರದ ನಿರೀಕ್ಷೆಗಳು

ಆದರೆ ಪ್ರಮುಖವಾಗಿ ಅಸಂಘಟಿತ ಕಾರ್ಮಿಕರ ಬೇಡಿಕೆಯಾದ ಕನಿಷ್ಠ ಕೂಲಿ 18 ಸಾವಿರ ರೂಗಳಿಗೆ ನಿಗದಿಯನ್ನು ಸರ್ಕಾರ ಮಾಡಲಿಲ್ಲ. ಈಗ 14 ಸಾವಿರ ಇದ್ದರೂ ಅದು ವಾಸ್ತವದಲ್ಲಿ ಪೂರ್ಣ ಪ್ರಮಾಣದಲ್ಲಿ ಜಾರಿಯಾಗುವುದಿಲ್ಲ. 2009ರಲ್ಲಿ ರಚಿತವಾದ 'ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ'ಗೆ ಹಣವನ್ನು ಈ ಸರ್ಕಾರವಾದರೂ ನೀಡುವ ನಿರೀಕ್ಷೆ ಇತ್ತು. ಅದನ್ನು ನಿರ್ಲಕ್ಷಿಸುವ ಮೂಲಕ ಕಲ್ಯಾಣ ಕಾರ್ಯಕ್ರಮಗಳಿಂದ ಒಂದುವರೆ ಕೋಟಿ ಕಾರ್ಮಿಕರನ್ನು ವಂಚಿತರನ್ನಾಗಿ ಮಾಡಲಾಗಿದೆ.

ಕೈಗಾರಿಕಾ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಆಡಳಿತಾತ್ಮಕ ಕ್ರಮಗಳ ಅಗತ್ಯವಿತ್ತು. ವಿಶೇಷವಾಗಿ ಕೈಗಾರಿಕೆಗಳಲ್ಲಿ ಕಾರ್ಮಿಕರ ವಿವಾದಗಳು ಉದ್ಭವಿಸಿದಾಗ, ಉದಾಹರಣೆಗೆ ಕಾರ್ಮಿಕರ ಸಂಘ ರಚನೆಗೆ ಮುಂದಾದರೆ ಮಾಲೀಕ ವರ್ಗ ಅಂತಹವರನ್ನು ಬಲಿಪಶು ಮಾಡುತ್ತದೆ. ಹೀಗಾಗಿ, ಒಂದು ಬಿಗಿಯಾದ ಕಾನೂನು ರೂಪಿಸುವ ಜರೂರತ್ತಿದೆ.ಈ ಬೇಡಿಕೆಯನ್ನು ಸಂಘಟನೆಗಳು ಹಲವು ವರ್ಷಗಳಿಂದ ಮಂಡಿಸುತ್ತಲೇ ಇದ್ದರೂ ಆಗಿಲ್ಲ. ಈ ಸರ್ಕಾರವಾದರೂ ಪರಿಗಣಿಸಬೇಕಿತ್ತು.

ಹಲವು ಬಿಕ್ಕಟ್ಟುಗಳ ನಡುವೆ

ಕೇಂದ್ರದಲ್ಲಿನ ಬಿಜೆಪಿ– ಎನ್.ಡಿ.ಎ ಸರ್ಕಾರಕ್ಕಿಂತ ತಾವು ಭಿನ್ನ ಎಂದು ಹೇಳಿಕೊಳ್ಳುವಾಗ ಸಮಿಶ್ರ ಸರ್ಕಾರ ತನ್ನನ್ನು ತಾನು ಭಿನ್ನವಾಗಿ ಗುರುತಿಸಿಕೊಳ್ಳಬೇಕು. ಕಾಂಗ್ರೆಸ್ಸಿನ ಆರ್ಥಿಕ ನೀತಿಗಳನ್ನು ಬಿಜೆಪಿ ಅನುಸರಿಸುವುದು, ಬಿಜೆಪಿಯ ಆರ್ಥಿಕ ನೀತಿ ಗಳಿಗಿಂತ ಕಾಂಗ್ರೆಸ್ ಧೋರಣೆ ಭಿನ್ನವಾಗದೇ ಇರುವುದು, ಇಂತಹ ಪಕ್ಷದ ಜೊತೆ ಪ್ರಾದೇಶಿಕ ಪಕ್ಷವಾದ ಜೆಡಿಎಸ್ ಕೂಡಿ ಸರ್ಕಾರ ನಡೆಸುವುದು, ಹಲವಾರು ಮಿತಿಗಳನ್ನು ಮತ್ತು ಒಳ ಸಂಘರ್ಷಗಳನ್ನು ಹುಟ್ಟು ಹಾಕುತ್ತದೆ. ಬಹುಮತದ ಸರ್ಕಾರವನ್ನು ಅಲ್ಪಮತಕ್ಕೆ ಇಳಿಸುವ ಬಿಜೆಪಿಯ ಅನೈತಿಕ ಕ್ರಮಗಳಿಂದ ಹೆಚ್ಚು ತತ್ತರಕ್ಕೆ ಒಳಗಾಗಿರುವುದು ಕಾಂಗ್ರೆಸ್ ಪಕ್ಷವೇ. ಶಾಸಕರನ್ನು ಆಮಿಷಗಳ ಮೂಲಕ ಅತಿ ಸುಲಭವಾಗಿ ಸೆಳೆಯಬಹುದು ಎನ್ನುವುದೇ ಆ ಪಕ್ಷ ಮತ್ತು ಶಾಸಕರು ತಲುಪಿರುವ ಅನೈತಿಕತೆಗೆ ಸಾಕ್ಷಿ. ಇದು ಆ ಪಕ್ಷದ ಸೈದ್ಧಾಂತಿಕ–ರಾಜಕೀಯ ದಿವಾಳಿತನವನ್ನು ತೋರಿಸುವುದಲ್ಲದೆ ಕೋಮುವಾದದ ವಿರುದ್ಧ ಹೋರಾಟವನ್ನು ಅಧಿಕಾರದ ಗಳಿಕೆಯ ಪರಮ ಗುರಿಗೆ ಸೀಮಿತಗೊಳಿಸಿ ಅವಕಾಶವಾದಿ ರಾಜಕಾರಣವನ್ನು ಜೀವಂತವಾಗಿರಿಸಿದೆ.

ಹೀಗಿರುವಾಗಲೂ ಹಿಂದಿನ ಅವಧಿಯಲ್ಲಿ ಬಿಜೆಪಿ ಸರ್ಕಾರದ ಹಗರಣ, ಭ್ರಷ್ಟತೆ, ಸೌಹಾರ್ದತೆಗೆ ಕೇಡು, ಅಶಾಂತಿ, ಅವಾಂತರಗಳನ್ನು ಕಂಡ ಕರ್ನಾಟಕ ಈ ಸಮ್ಮಿಶ್ರ ಸರ್ಕಾರದಲ್ಲಿ ಕೆಲವು ಕನಿಷ್ಠ ಭಿನ್ನತೆಗಳನ್ನು ಕಾಣುವುದು ಸುಳ್ಳೇನಲ್ಲ. ದೇಶದಲ್ಲಿ ಸಮ್ಮಿಶ್ರ ಸರ್ಕಾರದ ಹಲವು ಯಶಸ್ವಿ ಮಾದರಿಗಳಿವೆ. ವಿಶೇಷವಾಗಿ, ಜನತೆಗೆ ಬದ್ಧವಾದ ಪರ್ಯಾಯ ಹಾಗೂ ಪ್ರಜಾಸತ್ತಾತ್ಮಕ ನೀತಿಗಳ ಆಧಾರದಲ್ಲಿ ಒಗ್ಗಟ್ಟು ಸಾಧಿಸಿ ಜನಹಿತವೇ ಪರಮೋಚ್ಛ ಎಂದು ಹಲವಾರು ದಶಕಗಳ ಕಾಲ ಸರ್ಕಾರಗಳನ್ನು ನಡೆಸಿದ ಎಡರಂಗ ಗಳ ಅನುಭವ ನಿಚ್ಚಳವಾಗಿದೆ.

ಪ್ರಶ್ನೆಗಳಿವೆ!

ಈಗ ಪ್ರಶ್ನೆ ಇರುವುದು ಸಮಿಶ್ರ ಸರ್ಕಾರದ ಘೋಷಿತ ಉದ್ದೇಶಗಳನ್ನು ಸಾಕಾರಗೊಳಿಸುವುದು ಹೇಗೆ? ನಿಜಕ್ಕೂ ಪರ್ಯಾಯ ಆಡಳಿತ ನೀಡುವುದು ಹೇಗೆ? ಸಮಿಶ್ರ ಸರ್ಕಾರ ಘೋಷಿಸಿದಂತೆ ರಾಜ್ಯವನ್ನು ಕೋಮುಸೌಹಾರ್ದತೆ, ಶಾಂತಿ, ಸಾಮರಸ್ಯದ ನಾಡಾಗಿ, ಅಭಿವೃದ್ಧಿಗಾಗಿ ಮುನ್ನಡೆಸುವುದು ಹೇಗೆ? ಎಂಬ ಪ್ರಶ್ನೆಗಳು ಇವೆ. ಆದರೆ ಕೇಂದ್ರದ ಬಿಜೆಪಿ ಪಕ್ಷ ಈ ಸರಕಾರವನ್ನು ಉಳಿಯಲು ಬಿಡುವುದೇ ಎಂಬುದು ಅತೀ ಮುಖ್ಯ ಪ್ರಶ್ನೆ. ■

ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ-ಯುಕೆಜಿ

ಒಂದು ಸಂಸ್ಥೆಯನ್ನು ಬಲಗೊಳಿಸಲು ಮತ್ತೊಂದು ಸಂಸ್ಥೆಯನ್ನು ಬಲಹೀನಗೊಳಿಸುವುದು ನ್ಯಾಯವೇ?

ಇಡಿ :111 ಯೋಯೋಕ 2108 ಬೆಂಗಳೂರು, ದಿನಾಂಕ 17-5-2019 ರಂದು ಬಂದಿರುವ ಸರ್ಕಾರದ ಆದೇಶದಲ್ಲಿ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾರ್ಥಮಿಕ ಶಾಲೆಗಳನ್ನು ತೆರೆದು 3 1/2 ವರ್ಷ ಮೇಲ್ಪಟ್ಟು ಮಕ್ಕಳಿಗೆ ಬೆಳ್ಳಗ್ಗೆ 10 ರಿಂದ ಮಧ್ಯಾಹ್ನ 3-30 ರತನಕ ಶಾಲೆ ನಡೆಸಬೇಕು. ಇದಕ್ಕಾಗಿ ಪ್ರತ್ಯೇಕ ಶಿಕ್ಷಕ/ಶಿಕ್ಷಕಿಯರನ್ನು ನಿಯೋಜಿಸಿ ಅತಿಥಿ ಶಿಕ್ಷಕರ ಗೌರವಧನವನ್ನು SDMC ಸಮಿತಿಗಳ ಮುಖಾಂತರ ಕೊಡುವುದು ಮತ್ತು ಆ ಮಕ್ಕಳಿಗೆ ಬೇಕಾದ ಪೌಷ್ಠಿಕ ಆಹಾರವನ್ನು ಕೊಡಲಾಗುವುದು ಎಂದು ನಿರ್ದೇಶಿಸಲಾಗಿದೆ. ಇದರಿಂದ ಶಾಲಾ ದಾಖಾಲಾತಿ ಹೆಚ್ಚಗುವುದೆಂದೂ ಆಶಿಸಲಾಗಿದೆ.



ಈ ಆದೇಶವನ್ನು ಕೆಳಕಂಡ ಕಾರಣಗಳಿಗೆ ಪುನರ್ ಪರಿಶೀಲಿಸಿ ಅಗತ್ಯ ಮಾರ್ಪಾಡುಗಳನ್ನು ಮಾಡಬೇಕಾಗಿದೆ.

- ಈ ಆದೇಶವನ್ನು ತರುವ ಪೂರ್ವದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಟ್ಟಿಗೆ ಮತ್ತು ಮಕ್ಕಳ, ಶಿಕ್ಷಣ ತಜ್ಞರೊಂದಿಗೆ, ಸಂಘಟನೆಗಳೊಂದಿಗೆ ಸಂವಾದ ನಡೆಸದೇ ಏಕಮುಖವಾಗಿ ಸುತೋಲೆಯನ್ನು ತರಲಾಗಿದೆ.
- 1975 ರಲ್ಲಿ ಬಂದ ICDS ಯೋಜನೆಯಡಿಯಲ್ಲಿ ಅಂಗನವಾಡಿ ಕೇಂದ್ರಗಳು ಸ್ಥಾಪನೆ ಆಗಿದ್ದೆ 3-6 ವರ್ಷದ ಮಕ್ಕಳಿಗಾಗಿ, ಈಗಾಗಲೇ 16,40,170 ಮಕ್ಕಳು ಅಂಗನವಾಡಿಗಳಲ್ಲಿ ದಾಖಲಾಗಿದ್ದಾರೆ.
- ಇದೇ ಮಕ್ಕಳೇ ಈಗ ಸರ್ಕಾರಿ ಶಾಲೆಗಳಲ್ಲಿ ಹೊಸದಾಗಿ ಪಾರಂಭವಾಗುವ ಪಬ್ಲಿಕ್ ಶಾಲೆಗಳಿಗೆ ದಾಖಲು ಆಗಬೇಕಾಗುತ್ತದೆ.
- ಈ ಮಕ್ಕಳು ಅಲ್ಲಿಗೆ ಹೋದರೆ ಅಂಗನವಾಡಿ ಕೇಂದ್ರದ ಅಗತ್ಯವೇ ಬರುವುದಿಲ್ಲ ಏಕೆಂದರೆ 3 ವರ್ಷದೊಳಗಿನ ಮಕ್ಕಳಿಗೆ ಮನೆಗೆ ಆಹಾರವನ್ನು ಕೊಡಲಾಗುತ್ತದೆ.
- ಮಾನವ ಸಂಪನ್ಮೂಲ ಬೆಳವಣಿಗೆ ಇರುವ ಏಕೈಕ ಯೋಜನೆ 1975 ರಿಂದ ಪ್ರಾರಂಭವಾಗಿ ಇಂದು ದೇಶದಲ್ಲಿ ಅತ್ಯಂತ ಬೃಹತ್ ಯೋಜನೆಯಾಗಿ ಕಾರ್ಯ ನಿರ್ವಹಿಸುತ್ತದೆ.
- 6 ವರ್ಷದೊಳಗಿನ ಮಕ್ಕಳಲ್ಲಿ 40% ದೈಹಿಕ ಮತ್ತು 80% ಮಾನಸಿಕ ಬೆಳವಣಿಗೆ ನಡೆಯುತ್ತದೆ. ಈ ಸಂಧರ್ಭದಲ್ಲಿ ಅಗತ್ಯ ಪೌಷ್ಠಿಕ ಆಹಾರ ಪ್ರಾರ್ಥಮಿಕ ಆರೋಗ್ಯ ಸವಲತ್ತುಗಳು ಮತ್ತು ಪೂರ್ವ ಪ್ರಾರ್ಥಮಿಕ ಶಿಕ್ಷಣ ಜೊತೆಯಲ್ಲಿರಬೇಕು ಎಂಬ ಕಾರಣಕ್ಕೆ 4200 ಕೋಟಿ ಯನ್ನು ಈಗಾಗಲೇ ಖರ್ಚು ಮಾಡುತ್ತಿದೆ.
- 6 ವರ್ಷದೊಳಗಿನ ಮಕ್ಕಳನ್ನು ನಡೆಸಿಕೊಳ್ಳುವ ವಿಧಾನದಲ್ಲಿ ವಿಶೇಷ ತರಭೇತಿ ಅಂಗನವಾಡಿ ನೌಕರರಲ್ಲಿದೆ. ಅದು ಶಾಲಾ ಶಿಕ್ಷಕರಲ್ಲಿ ಇಲ್ಲ.
- 6 ವರ್ಷದೊಳಗಿನ ಮಕ್ಕಳ ಜೀರ್ಣಕ್ರಿಯೆಯಲ್ಲಿಯೂ ವ್ಯತ್ಯಾಸವಿರುತ್ತದೆ.
- ICDS ಮಾರ್ಗದರ್ಶಿ ಸೂತ್ರಗಳ ಪ್ರಕಾರ ಪೂರ್ವಪ್ರಾರ್ಥಮಿಕ ಶಿಕ್ಷಣವನ್ನು ಈಗಾಗಲೇ ಅಂಗನವಾಡಿ ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ.
- ಈಗಾಗಲೇ ಇರುವ ವ್ಯವಸ್ಥೆಯನ್ನು ಬಲಿಷ್ಠಗೊಳಿಸುವ ಬದಲಿಗೆ, ಇದೇ ತರಹದ ಮತ್ತೊಂದು ವ್ಯವಸ್ಥೆಯನ್ನು ತರುವುದು ರಾಜ್ಯದ ಬೊಕ್ಕಸಕ್ಕೆ ನಷ್ಟವಾಗುವುದು.
- ನಷ್ಟದ ಜೊತೆಗೆ ಯೋಜನಾ ಆಯೋಗ 9-10 ನೇ ಪಂಚವಾರ್ಷಿಕ ಯೋಜನೆಗಳು 2011 ರಲ್ಲಿ ಸುಪ್ರೀಂ ಕೋರ್ಟ್ ಮಧ್ಯಂತರ ತೀರ್ಪುಗಳ ಆಶಯಗಳು ಸಂಪೂರ್ಣ ಮಣ್ಣುಗೊಡುತ್ತವೆ. ಆದ್ದರಿಂದ ಈ ಆದೇಶವನ್ನು ರದ್ದು ಮಾಡಬೇಕು.

ಅಂಗನವಾಡಿ ಕೇಂದ್ರಗಳಲ್ಲಿ ನಡೆಯುತ್ತಿರುವ ಮಾತೃಪೂರ್ಣ ಕೆಲಸಕ್ಕೆ ಒಬ್ಬ ಹೆಚ್ಚುವರಿ ಸಹಾಯಕಿಯನ್ನು ನೇಮಕ ಮಾಡಬೇಕು. ಈಗಿರುವ ಸಹಾಯಕಿ ಅಂಗನವಾಡಿ ಕೇಂದ್ರದ ದಿನ ನಿತ್ಯ ಕೆಲಸಗಳನ್ನು ಮಾಡುತ್ತಾರೆ. 1995 ರಿಂದ ಆಯ್ಕೆಯಾಗಿರುವ ಕಾರ್ಯಕರ್ತೆಯರು SSLC, PUC, BA, ಪಾಸಾಗಿರುವವರು ಇರುವುದರಿಂದ ಅವರಿಗೆ ಎಲ್‌ಕೆಜಿ-ಯುಕೆಜಿ ತರಭೇತಿಯನ್ನು ಕೊಟ್ಟರೆ, ಅನುಭವದೊಂದಿಗೆ ಅಂಗನವಾಡಿ ಕೇಂದ್ರಗಳಲ್ಲಿಯೇ ಪಾಲನೆ ಮತ್ತು ಕಲಿಕೆ ನಡೆಯುತ್ತದೆ. ಪೂರ್ವಪ್ರಾರ್ಥಮಿಕ ಶಿಕ್ಷಣ ಪೂರೈಸಿದವರಿಗೆ TC ಯನ್ನು ಕೊಟ್ಟು 1 ನೇ ತರಗತಿಗೆ ಸೇರಿಸುವ ವ್ಯವಸ್ಥೆ ಜಾರಿಗೆ ತರಬೇಕು.

- ಅಂಗನವಾಡಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಮಾತ್ರ ಸರ್ಕಾರಿ ಸೌಲಭ್ಯಗಳೆಂದೂ ಘೋಷಿಸಬೇಕು.
- ಖಾಸಗಿ ಕಾನ್ವೆಂಟ್ ಮತ್ತು ಶಾಲೆಗಳಿಗೆ ಕೊಡುವ ಅನುಮತಿಯನ್ನು ರದ್ದು ಮಾಡಬೇಕು.
- ಶಿಕ್ಷಣ ಇಲಾಖೆಯಲ್ಲಿ ಖರ್ಚು ಮಾಡುವ ಸ್ವಲ್ಪ ಹಣದಲ್ಲಿ ಅಂಗನವಾಡಿ ಮಕ್ಕಳಿಗೆ ಸಮ ವಸ್ತ್ರಗಳನ್ನು ಕೊಡಿಸಬಹುದು.

ಆಗ ಅಂಗನವಾಡಿ ಕೇಂದ್ರಗಳಲ್ಲಿ ಪೂರ್ವ ಪ್ರಾರ್ಥಮಿಕ ಪೂರೈಸಿದ ಮಕ್ಕಳು ನೇರವಾಗಿ 1 ನೇ ತರಗತಿ ದಾಖಲು ಆಗುವ ವಾತಾವರಣವನ್ನು ಸೃಷ್ಠಿಸಲು ಸಾಧ್ಯವಿದೆ.

ಆದ್ದರಿಂದ ತಾವು ಸರ್ಕಾರದಲ್ಲಿ ಚರ್ಚಿಸಿ ನಮ್ಮ ಬೇಡಿಕೆಗಳ ಪರವಾಗಿ ನಿಲ್ಲಬೇಕೆಂದೂ ವಿನಂತಿಸುತ್ತೇವೆ.

ಹಾಸನದ ಅಸ್ಮಿತೆಯಾಗಿರುವ ಆಲೂಗೆಡ್ಡೆ ಬೆಳೆಯನ್ನು ಉಳಿಸಲು ಜನಾಂದೋಲನ ನಡೆಸಲು ದುಂಡು ಮೇಜಿನ ಸಭೆ ನಿರ್ಣಯ

ಎಚ್.ಆರ್. ನವೀನ್‌ಕುಮಾರ್

ಹಾಸನ: ಹಾಸನದ ಅಸ್ಮಿತೆಯಾಗಿರುವ ಆಲೂಗಡ್ಡೆ ಬೆಳೆಯನ್ನು ಉಳಿಸಲು ಜನಾಂದೋಲನ ನಡೆಸಲು ಆಲೂಗಡ್ಡೆ ಬೆಳೆಗಾರರ ದುಂಡುಮೇಜಿನ ಸಭೆ ನಿರ್ಣಯಿಸಿದೆ.

ಹಾಸನದ ಮಾನವಬಂಧುತ್ವ ವೇದಿಕೆ ಕಚೇರಿಯಲ್ಲಿ ಸೋಮವಾರ ಕರ್ನಾಟಕ ಪ್ರಾಂತ ರೈತಸಂಘ, ಆಲೂಗಡ್ಡೆ ಬೆಳೆಗಾರರ ಹೋರಾಟ ಸಮಿತಿಯು ಆಯೋಜಿಸಿದ್ದ ಆಲೂಗಡ್ಡೆ ಬೆಳೆಗಾರರ ದುಂಡುಮೇಜಿನ ಸಭೆಯಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ.

ಹಾಸನ ಜಿಲ್ಲೆಯಲ್ಲಿ ಅದರಲ್ಲೂ ಪ್ರಮುಖವಾಗಿ ಹಾಸನ ತಾಲೂಕಿನಲ್ಲಿ ಬೆಳೆಯುವ ಆಲೂಗಡ್ಡೆಯು ತನ್ನ ವಿಶಿಷ್ಟ ರುಚಿಯಿಂದಾಗಿ ಚಿಪ್ಸ್ ಮಾಡಲು ಉತ್ತಮ ಎಂದು ಹೆಸರಾಗಿದೆ. ಕಳೆದ ಮೂವತ್ತು ನಲವತ್ತು ವರ್ಷಗಳಿಂದ ಸಾವಿರಾರು ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾಗಿ ಆಲೂಗಡ್ಡೆಯನ್ನು ಬೆಳೆಯುತ್ತಿದ್ದಾರೆ. 2001-02ರಲ್ಲಿ ಸುಮಾರು 25,925 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದುದು 2010ರ ಹೊತ್ತಿಗೆ 45 ಸಾವಿರ ಹೆಕ್ಟೇರ್ ಸಮೀಪಕ್ಕೆ ಹೋಗಿತ್ತು. ಆದರೆ ಅದೇ ಬೆಳೆಯು ಈ ವರ್ಷಕ್ಕೆ 13 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಕುಸಿದಿದೆ. ಅಂದರೆ 31866 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಬೆಳೆಯುವುದನ್ನು ಕೈಬಿಡಲಾಗಿದೆ. ಇದರಿಂದ ಸರಿಸುಮಾರು 16 ಸಾವಿರ ರೈತ ಕುಟುಂಬಗಳು ಆಲೂಗಡ್ಡೆ ಬೆಳೆಯನ್ನು ಬೆಳೆಯುವುದನ್ನು ಕೈಬಿಟ್ಟಿವೆ. ಇದಕ್ಕೆ ಪ್ರಮುಖವಾಗಿ ಅಂಗಮಾರಿ ರೋಗ. ಅತಿವೃಷ್ಟಿ, ಅನಾವೃಷ್ಟಿ ಕಾರಣ ಎನ್ನಲಾಗುತ್ತಿದೆ.

ಜಿಲ್ಲೆಯ ಇಷ್ಟು ದೊಡ್ಡ ಪ್ರಮಾಣದ ರೈತರು ಪ್ರಮುಖ ವಾಣಿಜ್ಯ ಬೆಳೆಯಿಂದ ವಿಮುಖರಾಗುತ್ತಿರುವಾಗ ಇದನ್ನು ತಡೆಗಟ್ಟಿ ರೈತರನ್ನು ಸಂರಕ್ಷಿಸಲು ಬೇಕಾದ ಪ್ರಾಮಾಣಿಕವಾದ ವಿಶೇಷ ಪ್ಯಾಕೇಜ್ ವ್ಯವಸ್ಥೆಯನ್ನು ಸರ್ಕಾರ ಇರುವರೆಗೂ ಘೋಷಿಸಿಲ್ಲ. ಆದ್ದರಿಂದ ಜಿಲ್ಲಾಡಳಿತವು ಜಿಲ್ಲಾ ಉಸ್ತವಾರಿ ಸಚಿವರು, ಅಧಿಕಾರಿಗಳು, ಆಲೂಗಡ್ಡೆ ಬೆಳೆ ತಜ್ಞರು, ರೈತರು, ರೈತ ಮುಖಂಡರನ್ನೊಳಗೊಂಡ ಸಮಗ್ರ ಸಭೆಯನ್ನು ಕರೆಯಬೇಕು ಎಂದು ದುಂಡುಮೇಜಿನ ಸಭೆಯು ಆಗ್ರಹಿಸುತ್ತದೆ.





ದುಂಡುಮೇಜಿನ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತಸಂಘದ ಜಿಲ್ಲಾ ಅಧ್ಯಕ್ಷ ಎಚ್.ಆರ್.ನವೀನ್‌ಕುಮಾರ್ ವಹಿಸಿದ್ದರು. ರೈತ ಮುಖಂಡರಾದ ಕೊಟ್ಟೂರು ಶ್ರೀನಿವಾಸ್, ಪತ್ರಕರ್ತರಾದ ಆರ್.ಪಿ.ವೆಂಕಟೇಶ್‌ಮೂರ್ತಿ, ಚಲಂ ಹಾಡ್ಲಹಳ್ಳಿ, ಕಾರ್ಮಿಕ ಮುಖಂಡರಾದ ಧರ್ಮೇಶ್, ಮಾದಿಗ ದಂಡೋರ ಸಮಿತಿಯ ವಿಜಯ್‌ಕುಮಾರ್, ಮಹಾಂತಪ್ಪ, ಕೆಪಿಆರ್‌ಎಸ್ ಮುಖಂಡರಾದ ದೇವರಾಜು, ಪ್ರಕಾಶ್, ಗಿಡ್ಡೇಗೌಡ, ಲಕ್ಷ್ಮಣಗೌಡ, ಪರಮೇಶ್, ಮಂಜು, ನಂಜೇಗೌಡ, ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಪೃಥ್ವಿ ಮತ್ತಿತರರು ಭಾಗವಹಿಸಿದ್ದರು. ಕೆಪಿಆರ್‌ಎಸ್ ಜಿಲ್ಲಾ ಕಾರ್ಯದರ್ಶಿ ವಸಂತಕುಮಾರ್ ಸಭೆ ನಿರ್ವಹಿಸಿದರು.

ಹಕ್ಕೊತ್ತಾಯಗಳು

- ಜಿಲ್ಲೆಗೆ ಅಗತ್ಯವಿರುವಷ್ಟು ದೃಢೀಕರಿಸಿದ ಬಿತ್ತನೆ ಆಲೂಗಡ್ಡೆ ಬೀಜಗಳನ್ನು ಸರ್ಕಾರವೇ ಉಚಿತವಾಗಿ ವಿತರಿಸಬೇಕು.
- ಬೆಳೆಗೆ ತಗುಲುವ ಎಲ್ಲಾ ರೀತಿಯ ರೋಗಗಳನ್ನು ಪತ್ತೆಹಚ್ಚಿ ಅವುಗಳ ನಿವಾರಣೆಗೆ ಸೂಕ್ತ ಸಂಶೋಧನೆ ನಡೆಸಿ ಸರ್ಕಾರ ಉಚಿತವಾಗಿ ಕ್ರಿಮಿನಾಶಕಗಳನ್ನು ವಿತರಿಸಬೇಕು.
- ಬೆಳೆಯ ಗುಣಮಟ್ಟ ಮತ್ತು ಹೆಚ್ಚಿನ ಇಳುವರಿಯನ್ನು ತಂದುಕೊಡಲು ಪೂರಕವಾಗುವಂತೆ ಬೀಜಗಳ ಸಂಶೋದನೆ ನಡೆಸಬೇಕು ಮತ್ತು ಅದಕ್ಕೆ ಅಗತ್ಯವಿರುವ ರಸಗೊಬ್ಬರವನ್ನು ಸಬ್ಸಿಡಿ ದರದಲ್ಲಿ ನೀಡಬೇಕು.
- ಅತಿವೃಷ್ಟಿ ಅಥವಾ ಅನಾವೃಷ್ಟಿ, ರೋಗ ಇನ್ನಾವುದೇ ಕಾರಣಕ್ಕಾಗಿ ಬೆಳೆ ನಷ್ಟವಾದರೂ ಅದನ್ನು ಸರ್ಕಾರ ಭರಿಸಿಕೊಡಬೇಕು ಅದಕ್ಕಾಗಿ ಸರ್ಕಾರಿ ಸ್ವಾಮ್ಯದ ವಿಮಾಕಂಪನಿಗಳಿಂದ ಬೆಳೆವಿಮೆಯನ್ನು ಕಡ್ಡಾಯವಾಗಿ ಮಾಡಿಸಿ ಪ್ರೀಮಿಯಂ ಹಣವನ್ನು ಸರ್ಕಾರವೇ ಭರಿಸಬೇಕು.


ಪುಟ 10 ಕ್ಕೆ

ನಮ್ಮ ಸಂವಿಧಾನಕ್ಕೆ ಬಿದ್ದಿರುವ ದಳ್ಳುರಿ



ಪ್ರೊ. ಟಿ.ಆರ್. ಚಂದ್ರಶೇಖರ್

ಡಾ. ಎಸ್. ಎಲ್. ಬೈರಪ್ಪ ನಮ್ಮ ಸಂವಿಧಾನ ಕುರಿತಂತೆ ಮತ್ತು ಮಹಿಳೆಯರ ಸ್ವಾಯತ್ತತೆಯ ಬಗ್ಗೆ ಮಾಡಿರುವ ಕೀಳು ಅಭಿರುಚಿಯ ಟೀಕೆಗಳ ಬಗ್ಗೆ ಏಳು ಜನರು ಪ್ರಜಾವಾಣಿಯ ಮೆಟ್ರೋ ಸಂಚಿಕೆಯಲ್ಲಿ(ಐವರು ಪುರುಷರು ಮತ್ತು ಇಬ್ಬರು ಮಹಿಳೆಯರು) ಮತ್ತು ಐವರು ಮಹಿಳೆಯರು ನ್ಯಾಯಪಥ ವಾರಪತ್ರಿಕೆಯಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಇವರಲ್ಲಿ ಒಬ್ಬರು ಅಭಿಪ್ರಾಯ ನೀಡುವುದಿಲ್ಲ ಎಂದಿದ್ದರೆ ಮತ್ತೊಬ್ಬರು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಒಟ್ಟಾರೆ 12ರಲ್ಲಿ ಹತ್ತು ಜನರು (ಶೇ.83.33) ಧರ್ಮಶಾಸ್ತ್ರಕ್ಕಿಂತ ಸಂವಿಧಾನವೇ ಪರಮೋಚ್ಛ ಎಂದು ಮತ್ತು ಬೈರಪ್ಪನವರ ಮಹಿಳಾ ವಿರೋಧಿ ಪ್ರಣಾಳಿಕೆಯು ಹೊಸದೇನಲ್ಲ ಎಂದು ಗಟ್ಟಿಯಾಗಿ ತಮ್ಮ ಭಿನ್ನಮತವನ್ನು ವ್ಯಕ್ತಪಡಿಸಿದ್ದಾರೆ.



ಕನ್ನಡದ ಸಾಹಿತಿ ಎಸ್. ಎಲ್. ಬೈರಪ್ಪನವರು ಪರಂಪರೆಯ ನೆಲೆಯಿಂದ ಸಂವಿಧಾನವನ್ನು ಟೀಕಿಸುತ್ತಿದ್ದಾರೆ. ನಮ್ಮ ಪರಂಪರೆಯ–ಧರ್ಮಶಾಸ್ತ್ರದ ಕಿಂಚಿತ್ತೂ ಅಂಶಗಳು ನಮ್ಮ ಸಂವಿಧಾನದಲ್ಲಿಲ್ಲ ಎಂಬುದು ಆವರ ಟೀಕೆ. ಆದರೆ ಅವರು ಸಂವಿಧಾನದಲ್ಲಿ ನಮ್ಮ ಪರಂಪರೆಯ ಯಾವ ಸಂಗತಿಗಳು ಗೈರುಹಾಜರಾಗಿವೆ ಎಂಬುದುನ್ನು ವಿವರಿಸಿಲ್ಲ. ಭಾರತೀಯ ಪರಂಪರೆ ಎಂಬುದು ಇಲ್ಲ. ಇಲ್ಲಿರುವುದು ಭಾರತೀಯ ವೈದಿಕ ಪರಂಪರೆ ಮತ್ತು ಭಾರತೀಯ ಅವೈದಿಕ ಪರಂಪರೆ. ವೈದಿಕ ಪರಂಪರೆಯು ಎಷ್ಟು ಪ್ರಾಚೀನವೋ ಅವೈದಿಕ ಪರಂಪರೆಯೂ ಅಷ್ಟೇ ಪ್ರಾಚೀನವಾದುದು.

ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿದ್ದ ಎಂ, ರಾಮ ಜೋಯಿಸ್ ಅವರು 2017ರಲ್ಲಿ ಒಂದು ದತ್ತಿ ಉಪನ್ಯಾಸ ನೀಡುತ್ತಾ ನಮ್ಮ ಸಂವಿಧಾನದಲ್ಲಿ ಹಕ್ಕುಗಳನ್ನು ನೀಡಲಾಗಿದೆ. ಇದಕ್ಕೆ ಪ್ರತಿಯಾಗಿ ಅಲ್ಲಿ ಕರ್ತವ್ಯಗಳನ್ನು ನೀಡಬೇಕಾಗಿತ್ತು ಎಂದಿದ್ದಾರೆ. ಇವರಿಗೆ ಹಕ್ಕುಗಳೆಂದರೆ ಕರ್ತವ್ಯವೆಂದೇ ಅರ್ಥ. ಶತಶತಮಾನಗಳಿಂದ ವೈದಿಕವು ಶೂದ್ರರಿಗೆ ಮತ್ತು ಅತಿಶೂದ್ರರಿಗೆ ಮೇಲಿನ ಮೂರು ವರ್ಣಗಳ ಸೇವೆ ಮಾಡುವ ಕರ್ತವ್ಯವನ್ನು ಹೇರುತ್ತಾ ಬಂದಿತ್ತು. ಇಲ್ಲಿ ಕರ್ತವ್ಯವೆಂದರೆ ಸೇವೆ ಎನ್ನುವ ಅರ್ಥವೂ ಇದೆ. 'ಸೇವೆ' ಎನ್ನುವುದು ವೈದಿಕ ಪರಿಭಾಷೆ.

ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರ್ ಪ್ರಣೀತ ಭಾರತದ ಸಂವಿಧಾನಕ್ಕೆ ದಳ್ಳುರಿ ಬಿದ್ದಿದೆ. ಸಣ್ಣಪುಟ್ಟ ಪುಡಾರಿಗಳು ಸಂವಿಧಾನವನ್ನು ಬದಲಾಯಿಸುವುದರ ಬಗ್ಗೆ ಬಡಬಡಿಸುತ್ತಿದ್ದರು. ಅಜ್ಞಾನಿಗಳ ಅಟಾಟೋಪ ಎಂದು ಜನರು ಅದನ್ನು ನಿರ್ಲಕ್ಷಿಸುತ್ತಾ ಬಂದರು. ಆದರೆ ಸಂವಿಧಾನದ ಬಗೆಗಿನ ಅಸಹಿಷ್ಣುತೆಯು ಅಜ್ಞಾನದಿಂದ ಮೂಡಿದ ಸಂಗತಿಯಲ್ಲ ಎಂಬುದು ಈಗ ಸ್ಪಷ್ಟವಾಗುತ್ತಿದೆ. ಆರ್‌ಎಸ್‌ಎಸ್ ಮುಖ್ಯಸ್ಥರಾದ ಮೋಹನ್ ಭಾಗವತ್ ಅವರು ಸಂವಿಧಾನವನ್ನು ಪುನರ್ ಪರಿಶೀಲಿಸಬೇಕು, ಪರಾಮರ್ಶಿಸಬೇಕು ಎನ್ನುತ್ತಾರೆ. ಸಂವಿಧಾನದಲ್ಲಿನ ಮೀಸಲಾತಿ ಕ್ರಮದ ಬಗ್ಗೆ ಉನ್ನತ ಜಾತಿ ಜನರು ಲಾಗಾಯ್ತಿನಿಂದಲೂ ಬೆಂಕಿ ಉಗುಳುತ್ತಿದ್ದಾರೆ. ನ್ಯಾಯಮೂರ್ತಿ ಎಂ. ರಾಮ ಜೋಯಿಸ್ ಅವರು ಸಂವಿಧಾನದ ಭಾಗ 3 ರಲ್ಲಿ ಹಕ್ಕುಗಳನ್ನು ನೀಡುವುದಕ್ಕೆ ಪ್ರತಿಯಾಗಿ ಕರ್ತವ್ಯಗಳನ್ನು ಸೇರಿಸಬೇಕಾಗಿತ್ತು ಎಂದು ಹೇಳುತ್ತಾರೆ. ಇವರ ಧರ್ಮಶಾಸ್ತ್ರದಲ್ಲಿ ಕರ್ತವ್ಯಗಳಿಗೆ ಸ್ಥಾನವಿದೆಯೇ ವಿನಾ ಅಲ್ಲಿ ಹಕ್ಕುಗಳ ಬಗ್ಗೆ ವಿಶ್ವಾಸವಿಲ್ಲ. ಈ ಬಗೆಯ ವಿಷಕಾರಿ ಮಾತುಗಳಿಗೆ ಕಳಸವಿಟ್ಟಂತೆ ಕೇಂದ್ರ ಸರ್ಕಾರವು ಅನಗತ್ಯವಾಗಿ ಉನ್ನತ ಜಾತಿಗಳಲ್ಲಿನ ಬಡವರಿಗೆ ಶೇ.10 ರಷ್ಟು ಉದ್ಯೋಗದಲ್ಲಿ ಮೀಸಲಾತಿ ನೀಡುವ ಕ್ರಮವನ್ನು ಜಾರಿಗೊಳಿಸಿದೆ. ಮೀಸಲಾತಿಯ ಮೂಲವನ್ನು ಅರ್ಥ ಮಾಡಿಕೊಳ್ಳದೆ ಅದನ್ನು ಬಡತನದ ನಿವಾರಣೆಯ ಸಾಧನವನ್ನಾಗಿ ಮಾಡುವ ಕುತಂತ್ರಕ್ಕೆ ಕೇಂದ್ರದಲ್ಲಿನ ಆಳುವ ಪಕ್ಷವು ಕೈಹಾಕಿದೆ. ನಮ್ಮ ಸಂವಿಧಾನದಲ್ಲಿರುವ ಮೀಸಲಾತಿಯ ಮೂಲದಲ್ಲಿರುವುದು ಸಾಮಾಜಿಕ ನ್ಯಾಯದ ಸಿದ್ಧಾಂತವೇ ವಿನಾ ಬಡತನ ನಿವಾರಣೆಯಲ್ಲ. ಅದೊಂದು ಆಡಳಿತ ವ್ಯವಸ್ಥೆಯಲ್ಲಿ ವಂಚಿತ ಸಮುದಾಯಗಳಿಗೆ ಪ್ರಾತಿನಿಧ್ಯವನ್ನು ನೀಡುವ ಒಂದು ಪ್ರಣಾಳಿಕೆ. ಒಟ್ಟಾರೆ ಅಂಬೇಡ್ಕರ್ ಪ್ರಣೀತ ಸಂವಿಧಾನವನ್ನು ಒಳಗೊಳಗೆ ಸಾಧ್ಯವಾದರೆ ನೇರವಾಗಿ ಬಗ್ಗುಬಡಿಯಲು ಪರಿವಾರ ಶಕ್ತಿಗಳು ಸಕ್ರಿಯವಾಗಿವೆ.

ಇದೀಗ ಕನ್ನಡದ ಸಾಹಿತಿ ಎಸ್. ಎಲ್. ಬೈರಪ್ಪನವರು ಪರಂಪರೆಯ ನೆಲೆಯಿಂದ ಸಂವಿಧಾನವನ್ನು ಟೀಕಿಸುತ್ತಿದ್ದಾರೆ. ನಮ್ಮ ಪರಂಪರೆಯ–ಧರ್ಮಶಾಸ್ತ್ರದ ಕಿಂಚಿತ್ತೂ ಅಂಶಗಳು ನಮ್ಮ ಸಂವಿಧಾನದಲ್ಲಿಲ್ಲ ಎಂಬುದು ಆವರ ಟೀಕೆ(ಇದನ್ನು ಆರ್‌ಎಸ್‌ಎಸ್‌ದ ಮುಖ್ಯಸ್ಥರು, ವಕ್ತಾರರು 1950ರಿಂದಲೂ ಹೇಳಿಕೊಂಡೇ ಬರುತ್ತಿದ್ದಾರೆ). ಆದರೆ ಅವರು ಸಂವಿಧಾನದಲ್ಲಿ ನಮ್ಮ ಪರಂಪರೆಯ ಯಾವ ಸಂಗತಿಗಳು ಗೈರುಹಾಜರಾಗಿವೆ ಎಂಬುದುನ್ನು ವಿವರಿಸಿಲ್ಲ. ಏಕೆಂದರೆ ಪರಂಪರೆ ಎನ್ನುವುದು ನಮ್ಮ ದೇಶದ ಸಂದರ್ಭದಲ್ಲಿ ಏಕಾಕಾರಿ ಅಖಂಡ ಸಂಗತಿಯಲ್ಲ. ಅದು ಬಹುರೂಪಿಯಾದುದು. ಭಾರತೀಯ ಪರಂಪರೆ ಎಂಬುದು ಇಲ್ಲ. ಇಲ್ಲಿರುವುದು ಭಾರತೀಯ ವೈದಿಕ ಪರಂಪರೆ ಮತ್ತು ಭಾರತೀಯ ಅವೈದಿಕ ಪರಂಪರೆ. ವೈದಿಕ ಪರಂಪರೆಯು ಎಷ್ಟು ಪ್ರಾಚೀನವೋ ಅವೈದಿಕ ಪರಂಪರೆಯೂ ಅಷ್ಟೇ ಪ್ರಾಚೀನವಾದುದು. ನಿಜ, ನಮ್ಮ ಸಂವಿಧಾನದಲ್ಲಿ ವೈದಿಕ ಪರಂಪರೆಯ ವಿಷಕಾರಿ ಸಂಗತಿಗಳನ್ನು ಸೇರಿಸಿಲ್ಲ. ಉದಾಹರಣೆಗೆ ಅಸ್ಪೃಶ್ಯತೆಯು ವೈದಿಕ ಪರಂಪರೆಯ ಕೊಡುಗೆ. ಇದು ಜಾತುರ್ವರ್ಣದ ಕೂಸು. ಇದು ಅಸಮಾನತೆಯನ್ನು, ಶ್ರೇಣೀಕರಣವನ್ನು ಹುಟ್ಟು ಹಾಕುತ್ತದೆ ಎಂಬ ಕಾರಣಕ್ಕೆ ಸಂವಿಧಾನದ ಪರಿಚ್ಛೇದ 17ರಲ್ಲಿ ಇದನ್ನು ನಿಷೇಧಿಸಲಾಗಿದೆ. ನಮ್ಮ ಸಂವಿಧಾನದ ಭಾಗ 3 ರಲ್ಲಿ ಮಾನವ ಹಕ್ಕುಗಳನ್ನು ಮತ್ತು ಮೂಲಭೂತ ಸ್ವಾತಂತ್ರ್ಯಗಳನ್ನು ನೀಡಲಾಗಿದೆ. 'ಹೆಂಡತಿಯ ಮೈಮುಟ್ಟಲು ಕೂಡ ಗಂಡನ ಒಪ್ಪಿಗೆ ಪಡೆಯಬೇಕಾಗುತ್ತದೆ' ಎಂಬ ಡಾ. ಎಸ್. ಎಲ್.



ಬೈರಪ್ಪ ಅವರ ಧೂರ್ತ ಮಾತನ್ನು ಲಘುವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಅವರಿಗೆ ಮಹಿಳಾ ಹಕ್ಕುಗಳ ಬಗ್ಗೆ ಅಸಮಾಧಾನವಿದೆ ಮತ್ತು ಇದು ಕುಟುಂಬದ ಭದ್ರತೆಯನ್ನು ಹಾಳುಮಾಡುತ್ತದೆ ಎಂಬುದು ಇವರು ಮತ್ತು ಇವರು ಪ್ರತಿನಿಧಿಸುವ ಪರಿವಾರದವರ ಭ್ರಮಾತ್ಮಕ ನಂಬಿಕೆಯಾಗಿದೆ. ಈ ಹಿಂದೆ ದಾಂಪತ್ಯದೊಳಗಿನ ಅತ್ಯಾಚಾರವನ್ನು ಅಪರಾಧ ಮಾಡಬೇಕೆಂಬ ಸಂಗತಿ ಚರ್ಚೆಗೆ ಬಂದಾಗ ಸಂಸತ್ತಿನಲ್ಲಿ ಇದನ್ನು ಆಳುವ ಪಕ್ಷ ವಿರೋಧಿಸಿ ಅದು ಶಾಸನವಾಗದಂತೆ ನೋಡಿಕೊಂಡಿತು. ಹೆಣ್ಣಿನ ಸ್ವಾತಂತ್ರದ ಬಗ್ಗೆ ಮಾತನಾಡುವ ಇವರು ಕುಟುಂಬ ಮೌಲ್ಯವನ್ನು ಸಂರಕ್ಷಿಸುವ ಕಾರ್ಯವನ್ನು ಗುತ್ತಿಗೆ ಹಿಡಿದಂತೆ ಕಾಣುತ್ತದೆ. ಈ ಪರಿವಾರದ ಜನರಿಗೆ (ಭೈರಪ್ಪನವರನ್ನು ಸೇರಿಸಿಕೊಂಡು) ನಮ್ಮ ಸಂವಿಧಾನದ ಬಗ್ಗೆ, ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳ ಬಗ್ಗೆ ಗೌರವವಿಲ್ಲ (ಶಬರಿಮಲ ಪ್ರಕರಣ). ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ವೋಚ್ಛ ನ್ಯಾಯಾಲಯವು ಭಾರತೀಯ ದಂಡ ಸಂಹಿತೆ 497ಕ್ಕೆ ಸಂಬಂಧಿಸಿದ ನೀಡಿದ ತೀರ್ಪಿನಲ್ಲಿ ಹೇಳಿರುವ 'ಹೆಂಡತಿಯು ಗಂಡನ ಆಸ್ತಿಯಲ್ಲ, ಗಂಡ ಹೆಂಡತಿಯ ಮಾಲೀಕನಲ್ಲ' ಎಂಬ ಅಭಿಪ್ರಾಯವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಡಾ. ಎಸ್. ಎಲ್. ಭೈರಪ್ಪ ನವರ ಸಮುದಾಯದವರಿಗೆ ಸಂವಿಧಾನದ ಭಾಗ 3ರ ಬಗ್ಗೆ ಅಪಾರ ಅಸಹನೆಯಿದೆ. ಸರ್ವೋಚ್ಛ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿದ್ದ ಎಂ, ರಾಮ ಜೋಯಿಸ್ ಅವರು 2017ರಲ್ಲಿ ಒಂದು ದತ್ತಿ ಉಪನ್ಯಾಸ ನೀಡುತ್ತಾ ನಮ್ಮ ಸಂವಿಧಾನದಲ್ಲಿ ಹಕ್ಕುಗಳನ್ನು ನೀಡಲಾಗಿದೆ. ಇದಕ್ಕೆ ಪ್ರತಿಯಾಗಿ

ಪುಟ 11 ಕ್ಕೆ

ಇವರ ಬರಹಗಳಲ್ಲಿ 'ಸಾಮಾಜಿಕ ನ್ಯಾಯ, ಅಸ್ಪೃಶ್ಯತೆ, ವಂಚಿತ ಸಮುದಾಯಗಳು, ಮಹಿಳೆಯರು, ಸಕಾರಾತ್ಮಕ ತಾರತಮ್ಯ, ಅಲ್ಪಸಂಖ್ಯಾತರು' ಎಂಬ ನುಡಿಗಳು ಅಪ್ಪಿತಪ್ಪಿಯೂ ಬರುವುದಿಲ್ಲ. ಖ್ಯಾತ ನ್ಯಾಯಶಾಸ್ತ್ರಜ್ಞ ಉಪೇಂದ್ರ ಭಕ್ಷಿ ಅವರು 'ನಮ್ಮ ಸಂವಿಧಾನದ ಭಾಗ 3 ಮತ್ತು ಭಾಗ 4 ಸಾಮಾಜಿಕ ನ್ಯಾಯದ ಪಠ್ಯಗಳು' ಎಂದು ಕರೆಯುತ್ತಾರೆ. ಉಳಿದವು 'ಆಡಳಿತ'ದ ಪಠ್ಯಗಳು. ಆದರೆ ಜಸ್ಟೀಸ್ ಎಂ. ರಾಮ ಜೋಯಿಸ್ ಅವರಿಗೆ ಭಾಗ 3 ರಲ್ಲಿನ ಹಕ್ಕುಗಳು ಅನಗತ್ಯ. ಅಲ್ಲಿ ಕೇವಲ ಕರ್ತವ್ಯಗಳಿರಬೇಕಾಗಿತ್ತು. ಇವರಿಗೆ ಹಕ್ಕುಗಳೆಂದರೆ ಕರ್ತವ್ಯವೆಂದೇ ಅರ್ಥ. ಜನರಿಂದ ಬೇರ್ಪಡಿಸಲಾರದ ಸಂಗತಿಗಳೆಂದರೆ ಮಾನವ ಹಕ್ಕುಗಳು. ಅಮರ್ತ್ಯ ಸೇನ್ ಹಕ್ಕುಗಳನ್ನು ನೈತಿಕ ಸಂಗತಿಗಳೆಂದು ನಿರ್ವಚಿಸುತ್ತಾನೆ. ಹಿಂದೂನ್ಯಾಯಶಾಸ್ತ್ರದ ಪ್ರಕಾರ ಜನರಿಗೆ ಅಗತ್ಯವಾಗಿರುವುದು ಹಕ್ಕುಗಳಲ್ಲ. ಇಲ್ಲಿ ಅಗತ್ಯವಾಗಿರುವುದು ಕರ್ತವ್ಯ. ಜನರಿಗೆ ಹಕ್ಕುಗಳನ್ನು ನೀಡಿರುವುದರಿಂದ ನಾವು ಇಂದು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ ಎನ್ನುತ್ತಾರೆ ಜಸ್ಟೀಸ್ ಎಂ. ರಾಮ ಜೋಯಿಸ್.

ಹಿಂದೂವಾದಿಗಳಿಗೆ ನುಂಗಲಾರದ ತುತ್ತು: ಒಕ್ಕೂಟ ವ್ಯವಸ್ಥೆ

ನಮ್ಮ ಸಂವಿಧಾನದ ಮತ್ತೊಂದು ಅಮೂಲ್ಯ ಲಕ್ಷಣವೆಂದರೆ ಅದು ನಮಗೆ ನೀಡಿರುವ ಒಕ್ಕೂಟ ವ್ಯವಸ್ಥೆ. ಅದರ ಬಗ್ಗೆಯೂ ಸಂಘಪರಿವಾರಕ್ಕೆ ಸಹಮತವಿಲ್ಲ. ಅದು ಮತ್ತೆ ಮತ್ತೆ ಅಖಂಡತೆಯ ಬಗ್ಗೆ ಮಾತನಾಡುತ್ತದೆ. ಕರ್ನಾಟಕದಲ್ಲಿ ಒಕ್ಕೂಟ ಸಿದ್ಧಾಂತಕ್ಕೆ ಸಾವಿರಾರು ವರ್ಷಗಳ ಚರಿತ್ರೆಯಿದೆ. ಕವಿರಾಜಮಾರ್ಗಕಾರ '------ ವಸುಧಾ ವಲಯ ವಿಲೀನ ವಿಷದ ವಿಷಯ ವಿಶೇಷಂ' ಎಂದಾಗ ಜಗತ್ತಿನೊಳಗೆ ಕನ್ನಡ ಜನಪದ ವಿಲೀನಗೊಂಡಿದ್ದರೂ ಅದು ತನ್ನ ವಿಶೇಷತೆಯನ್ನು, ವಿಶಿಷ್ಟತೆಯನ್ನು ಕಾಯ್ದುಕೊಂಡಿದೆ ಎಂದೇ ಅರ್ಥ. ಒಕ್ಕೂಟ ವ್ಯವಸ್ಥೆಗೆ ಇದಕ್ಕಿಂತ ಉತ್ತಮವಾದ ವ್ಯಾಖ್ಯೆ ಬೇಕೆ? ಆದರೆ ಪರಿವಾರದ ಪವಿತ್ರ ಗ್ರಂಥ ಏನು ಹೇಳುತ್ತದೆ ನೋಡಿ: 'ಭಾರತ ಸಂವಿಧಾನದಲ್ಲಿನ ಒಕ್ಕೂಟ ವ್ಯವಸ್ಥೆ ಸರ್ಕಾರವು ಪ್ರತ್ಯೇಕತೆಯನ್ನು ಪೋಷಿಸುವುದರ ಮೂಲಕ ಪ್ರತ್ಯೇಕತೆಗೆ ಅವಕಾಶ ಮಾಡಿಕೊಡುತ್ತಿದೆ. ಅದು ಭಾರತ 'ಒಂದು ರಾಷ್ಟ್ರ' ಎಂಬುದನ್ನು ಮನ್ನಿಸುವುದಿಲ್ಲ. ಆ ಮೂಲಕ ಅದನ್ನು ಅದು ನಾಶ ಮಾಡುತ್ತಿದೆ. ಇದನ್ನು ಬೇರು ಸಹಿತ ಕಿತ್ತೊಗೆಯಬೇಕು. ಸಂವಿಧಾನವನ್ನು ಶುದ್ಧೀಕರಿಸಬೇಕು. ಏಕಾತ್ಮಕ–ಅಖಂಡ ಸರ್ಕಾರ ವ್ಯವಸ್ಥೆಯನ್ನು ಪ್ರತಿಷ್ಠಾಪಿಸಬೇಕು' (ಬಂಚ್ ಆಫ್ ಥಾಟ್ಸ್, 1966, ಪು. 227). ಕಳೆದ 70 ವರ್ಷಗಳಿಂದಲೂ ಪರಿವಾರ ಶಕ್ತಿಗಳು ನಮ್ಮ ಸಂವಿಧಾನದ ವಿರುದ್ಧ ದಾಳಿ ಮಾಡಿಕೊಂಡು ಬರುತ್ತಿವೆ. ಅದಕ್ಕೆ ಚಾತುರ್ವರ್ಣ ವ್ಯವಸ್ಥೆ ಬೇಕು ಮತ್ತು ಒಂದು ಭಾಷೆಯನ್ನು ಅದು ಒತ್ತಾಯಿಸುತ್ತದೆ. ನಮ್ಮ ದೇಶ ಎಲ್ಲಿಯವರೆಗೆ ಒಕ್ಕೂಟ ವ್ಯವಸ್ಥೆಯಾಗಿರುತ್ತದೋ ಅಲ್ಲಿಯವರೆಗೆ ಅದರ ಭದ್ರತೆಗೆ ಮತ್ತು ಏಕತೆಗೆ ಅಪಾಯವಿರುವುದಿಲ್ಲ. ಆದರೆ ಇಂದು ರಾಜ್ಯಗಳ ಸಾಂವಿಧಾನಿಕ ಅಧಿಕಾರಗಳನ್ನು ಕೇಂದ್ರ ಕಿತ್ತುಕೊಳ್ಳುತ್ತಿದೆ. ಅದರ ಒಂದು ಭಾಷೆಯ ಪ್ರಣಾಳಿಕೆಗೆ ಅನುಗುಣವಾಗಿ ಹಿಂದಿಯನ್ನು ಹೇರಲಾಗುತ್ತಿದೆ.

ನಮ್ಮ ಸಂವಿಧಾನಕ್ಕೆ ಹತ್ತಿರುವ ದಳ್ಳುರಿಯನ್ನು ಶಮನ ಮಾಡಬೇಕಾದರೆ ಅವೈದಿಕ ಶಕ್ತಿಗಳ ಸಂಘಟನೆ ನಡೆಯಬೇಕಾಗಿದೆ. ಅವೈದಿಕ ಎಂದರೇನೇ ಎಡಪಂಥೀಯರು ಎಂದು ಅರ್ಥ. ಎಸ್. ಎಲ್. ಬೈರಪ್ಪ, ಎಂ. ರಾಮ ಜೋಯಿಸ, ಪೇಜಾವರ ಸ್ವಾಮಿ, ಯಡಿಯೂರಪ್ಪ, ಶ್ಯಾಮನೂರ ಶಿವಶಂಕರಪ್ಪ ಮುಂತಾದ ಬಲಪಂಥೀಯ ವೈದಿಕವಾದಿಗಳ ಬಗ್ಗೆ ನಾವು ಎಚ್ಚರವಹಿಸಬೇಕಾಗಿದೆ. ನಮ್ಮ ಸಂವಿಧಾನವಿದ್ದರೆ ಮಾತ್ರ ದಲಿತರಿಗೆ, ಮಹಿಳೆಯರಿಗೆ, ಹಿಂದುಳಿದವರಿಗೆ, ಆದಿವಾಸಿಗಳಿಗೆ ನ್ಯಾಯ ದೊರೆಯುವುದು ಸಾಧ್ಯ. ಸಬ್ ಕಾ ಸಾತ್, ಸಬ್ ಕಾ ವಿಕಾಸ್ ಎನ್ನುವುದು ವಾಸ್ತವದಲ್ಲಿ 'ಸಬ್ ಕಾ ಸಾತ್, ಸಬಲೋಂಕೊ ವಿಕಾಸ್' ಎಂಬಂತಾಗಿದೆ. ಇದು ಸಾಮಾಜಿಕ ನ್ಯಾಯ ವಿರೋಧಿ ಪ್ರಣಾಳಿಕೆ.



2019ರ ಚುನಾವಣಾ ತೀರ್ಪು:
ಬಲಪಂಥೀಯ ದಾಳಿಯ ಕ್ರೋಢೀಕರಣದ ಸೂಚನೆ

ಮೋದಿಯವರನ್ನು ಒಬ್ಬ ಬಲಿಷ್ಠ ನಾಯಕನನ್ನಾಗಿ ಬಿಂಬಿಸಿ ಬಿಜೆಪಿ ಪ್ರಚಾರ ನಡೆಸಿದ್ದು ಹಾಗೂ ಪುಲ್ವಾಮಾ ನಂತರದ ಪರಿಸ್ಥಿತಿ ಹಾಗೂ ಬಾಲಾಕೋಟ್ ದಾಳಿಯನ್ನು ಬಳಸಿಕೊಂಡು ಕೋಮುವಾದಿ ಛಾಯೆಯ ರಾಷ್ಟ್ರವಾದವನ್ನು ಬಡಿದೆಬ್ಬಿಸಿದ್ದು ಮೋದಿ ಸರಕಾರದ ಅಡಿಯಲ್ಲಿ ಜನರು ಎದುರಿಸಿದ ನೈಜ ಸಮಸ್ಯೆಗಳಾದ ಕೃಷಿ ಬಿಕ್ಕಟ್ಟು, ನಿರುದ್ಯೋಗ, ಹದಗೆಡುತ್ತಿರುವ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ಹಾಗೂ ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ದಲಿತರ ಮೇಲಿನ ನಿರಂತರ ದಾಳಿಗಳು ಇವುಗಳನ್ನು ಮೀರಿ ನಿಲ್ಲುವಲ್ಲಿ ಯಶಸ್ಸನ್ನು ತಂದುಕೊಟ್ಟಿತೆಂದು ಕಾಣಿಸುತ್ತದೆ. 2014ರ ನಂತರ ಬಲಪಂಥೀಯ ದಾಳಿ ಇನ್ನಷ್ಟು ಕ್ರೋಢೀಕರಣಗೊಂಡಿರುವುದನ್ನು ಈ ಫಲಿತಾಂಶ ಸೂಚಿಸುತ್ತದೆ.



*** ಪ್ರಕಾಶ್ ಕಾರಟ್**

17ನೇ ಲೋಕಸಭೆ ಚುನಾವಣೆಯ ಫಲಿತಾಂಶವಾಗಿ ಬಿಜೆಪಿ ಮತ್ತು ಎನ್‌ಡಿಎ ನಿರ್ಣಾಯಕ ಬಹುಮತವನ್ನು ಪಡೆದು ಮೋದಿ ಸರಕಾರ ಅಧಿಕಾರಕ್ಕೆ ಮರಳಿದೆ. ಬಿಜೆಪಿಯ ಬಹುಮತ ಏರಿಕೆಯಾಗಿದೆ ಹಾಗೂ ಎನ್‌ಡಿಎಯ ಒಟ್ಟಾರೆ ಸಂಖ್ಯೆಯೂ ಏರಿದೆ.

ಮೋದಿಯವರನ್ನು ಒಬ್ಬ ಬಲಿಷ್ಠ ನಾಯಕನನ್ನಾಗಿ ಬಿಂಬಿಸಿ ಬಿಜೆಪಿ ಪ್ರಚಾರ ನಡೆಸಿದ್ದು ಹಾಗೂ ಪುಲ್ವಾಮಾ ನಂತರದ ಪರಿಸ್ಥಿತಿ ಹಾಗೂ ಬಾಲಾಕೋಟ್ ದಾಳಿಯನ್ನು ಬಳಸಿಕೊಂಡು ಕೋಮುವಾದಿ ಛಾಯೆಯ ರಾಷ್ಟ್ರವಾದವನ್ನು ಬಡಿದೆಬ್ಬಿಸಿದ್ದು ಮೋದಿ ಸರಕಾರದ ಅಡಿಯಲ್ಲಿ ಜನರು ಎದುರಿಸಿದ ನೈಜ ಸಮಸ್ಯೆಗಳಾದ ಕೃಷಿ ಬಿಕ್ಕಟ್ಟು, ನಿರುದ್ಯೋಗ, ಹದಗೆಡುತ್ತಿರುವ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ಹಾಗೂ ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ದಲಿತರ ಮೇಲಿನ ನಿರಂತರ ದಾಳಿಗಳು ಇವುಗಳನ್ನು ಮೀರಿ ನಿಲ್ಲುವಲ್ಲಿ ಯಶಸ್ಸನ್ನು ತಂದುಕೊಟ್ಟಿತೆಂದು ಕಾಣಿಸುತ್ತದೆ.

ಮೋದಿ ಯುದ್ಧಕೋರ ರಾಷ್ಟ್ರವಾದ ಮತ್ತು ಅದರ ಜತೆಗೆ ರಾಷ್ಟ್ರವಾದದ ಮುಸುಕಿನಲ್ಲಿ ಬಹುಸಂಖ್ಯಾತತ್ವದ ಭಾವನೆಗಳನ್ನು ಬಡಿದೆಬ್ಬಿಸುವ ಉದ್ದೇಶವನ್ನೇ ಹೊಂದಿದ ಕೋಮುವಾದಿ ಅಜೆಂಡಾವನ್ನು ಬೆರೆಸಿದ ಪ್ರಚಾರದ ನೇತೃತ್ವವನ್ನು ವಹಿಸಿದ್ದರು. ಚುನಾವಣೆ ಪ್ರಚಾರದ ಎಲ್ಲಾ ರಂಗಗಳಲ್ಲಿ ಅಭೂತಪೂರ್ವ ರೀತಿಯಲ್ಲಿ ಹಣಬಲದ ಬಳಕೆಯಾಯಿತು. ಸಾಮಾಜಿಕ ಮಾಧ್ಯಮ ಪ್ರಚಾರಕ್ಕೆ ಬಿಜೆಪಿ ನೂರಾರು ಕೋಟಿ ರೂಪಾಯಿಗಳನ್ನು ವ್ಯಯಿಸಿತು. ಮೋದಿ ಒಬ್ಬ ನಿರ್ಣಾಯಕ ನಾಯಕ ಎಂಬ ಸಂದೇಶ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಒಂದು ಗೌರವಯುತ ದೇಶವನ್ನಾಗಿ ಅವರು ಮಾಡಿದರು ಮತ್ತು ಪಾಕಿಸ್ತಾನದಿಂದ ನಡೆಯುವ ಭಯೋತ್ಪಾದನೆಯನ್ನು ಎದುರಿಸಿದರು ಎಂದು ವಾಟ್ಸ್‌ಆಪ್ ಮತ್ತು ಇತರೆ ಸಾಮಾಜಿಕ ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಬಿಂಬಿಸಲಾಯಿತು.

2014ರ ಚುನಾವಣೆ ನಂತರ ಹರಿಬಿಡಲಾದ ಬಲಪಂಥೀಯ ದಾಳಿ ಇನ್ನಷ್ಟು ಕ್ರೋಢೀಕರಣ ಗೊಂಡಿರುವುದನ್ನು ಈ ಚುನಾವಣೆ ಫಲಿತಾಂಶ ಸೂಚಿಸುತ್ತದೆ. ಬಿಜೆಪಿ–ಆರ್‌ಎಸ್‌ಎಸ್ ಕೂಟ ಸ್ಥಾಪಿಸಿರುವ ರಾಜಕೀಯ ಮತ್ತು ಸೈದ್ಧಾಂತಿಕ ಪ್ರಾಬಲ್ಯದ ವಿರುದ್ಧ ಪರಿಣಾಮಕಾರಿ ಸವಾಲನ್ನು ಎಸೆಯಲು ಎಡ ಪಕ್ಷಗಳೂ ಸೇರಿದಂತೆ ಜಾತ್ಯತೀತ ಪ್ರತಿಪಕ್ಷಗಳಿಗೆ ಸಾಧ್ಯವಾಗಲಿಲ್ಲ ಎನ್ನುವುದು ವಾಸ್ತವ ಸಂಗತಿ.



ವ್ಯಂಗ್ಯಚಿತ್ರ ಕೃಪೆ: ದೇಶಾಭಿಮಾನಿ

ಚುನಾವಣೆ ಆಯೋಗ ತಾನು ಮಾಡಬೇಕಾದ್ದನ್ನು ಮಾಡದೆ, ಮಾಡಬಾರದ್ದನ್ನು ಮಾಡುವ ಮೂಲಕ ಬಿಜೆಪಿಗೆ ನೆರವು ನೀಡುತ್ತ ವಹಿಸಿದ ಪಾತ್ರವೂ ಈ ಚುನಾವಣೆಯ ಒಂದು ಕಳವಳಕಾರಿ ಸಂಗತಿಯಾಗಿದೆ. ಪ್ರತಿಪಕ್ಷಗಳಿಗೆ ಸಮಾನ ನೆಲೆಯಲ್ಲಿ ಸ್ಪರ್ಧಿಸುವ ಅವಕಾಶವನ್ನು ಖಾತ್ರಿಗೊಳಿಸುವಲ್ಲಿ ಚುನಾವಣೆ ಆಯೋಗ ವಿಫಲವಾಗಿದ್ದು ಮಾತ್ರವೇ ಅಲ್ಲದೆ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರ ಕೋಮುವಾದಿ ಹಾಗು ಜಗಳಗಂಟಿ ಭಾಷಣಗಳನ್ನು ನ್ಯಾಯಸಮ್ಮತಗೊಳಿಸಿತು ಕೂಡ.

ಸಿಪಿಐ(ಎಂ) ಮತ್ತು ಎಡ ಪಕ್ಷಗಳು ತೀವ್ರ ಸೋಲನ್ನು ಅನುಭವಿಸಿವೆ. ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ಸಿಪಿಐ(ಎಂ) ಭಾರೀ ಅಡ್ಡಿ ಆತಂಕಗಳಲ್ಲದೆ ಭಯೋತ್ಪಾದನೆ, ಹಿಂಸೆ ಮತ್ತು ದಾಳಿಗಳ ನಡುವೆ ಈ ಚುನಾವಣೆಗಳನ್ನು ಎದುರಿಸಿತು. ಸರ್ವ ಪ್ರಯತ್ನಗಳನ್ನು ಮಾಡಿದರೂ ಯಾವುದೇ ಯಶಸ್ಸನ್ನು ಸಾಧಿಸಲು ಪಕ್ಷಕ್ಕೆ ಸಾಧ್ಯವಾಗಲಿಲ್ಲ. ಕೇರಳದಲ್ಲಿ ಎಲ್‌ಡಿಎಫ್ ಭಾರೀ ಸೋಲನ್ನು ಅನುಭವಿಸಿದ್ದು ನಿರಾಶಾದಾಯಕ ಹಾಗೂ ದೊಡ್ಡ ಹಿನ್ನಡೆಯಾಗಿದೆ. ತಮಿಳುನಾಡಿನಲ್ಲಿ ಮಾತ್ರ ಪಕ್ಷ ಉತ್ತಮ ಫಲಿತಾಂಶ ಪಡೆದಿದೆ. ಅಲ್ಲಿ ಡಿಎಂಕೆ ನೇತೃತ್ವದ ಮೈತ್ರಿಯ ಭಾಗವಾಗಿ ಸ್ಪರ್ಧಿಸಿದ್ದ ಎರಡೂ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಜಯ ಸಾಧಿಸಿದೆ.

ಈ ಗಂಭೀರ ಚುನಾವಣಾ ಹಿನ್ನಡೆಯ ಬಗ್ಗೆ ಪಕ್ಷವು ಸ್ವಯಂಟೀಕಾತ್ಮಕ ಪರೀಕ್ಷಣೆಯನ್ನು ನಡೆಸಲಿದೆ. ಆ ಮೂಲಕ ಸರಿಯಾದ ಪಾಠವನ್ನು ಕಲಿತು ಪಕ್ಷದ ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಕಾರ್ಯವನ್ನು ನವೀಕರಿಸಲು ಮತ್ತು ಬಲಪಡಿಸಲು ಒಂದು ಸಮಗ್ರ ಕಾರ್ಯತಂತ್ರವನ್ನು ಅಂಗೀಕರಿಸಲಾಗುವುದು.



ವ್ಯಂಗ್ಯಚಿತ್ರ ಕೃಪೆ: ಪಿ. ಮಹಮ್ಮದ್

ಅನು: ವಿಶ್ವ

ಪಕ್ಷ	ಸ್ಥಾನಗಳು	ಮತ %
ಎನ್ ಡಿ ಎ	**351**	**43.9**
ಬಿಜೆಪಿ	303	37.5
ಶಿವಸೇನೆ	18	2.1
ಜೆಡಿ(ಯು)	16	1.5
ಎಲ್‌ಜೆಪಿ	6	
ಇತರರು	8	
ಯು ಪಿ ಎ	**88**	**25.8**
ಕಾಂಗ್ರೆಸ್	52	19.6
ಡಿಎಂಕೆ	23	2.3
ಎನ್‌ಸಿಪಿ	5	1.4
ಎನ್‌ಸಿ	3	
ಇತರರು	5	
ಬಿಎಸ್‌ಪಿ	10	6.3
ಎಸ್‌ಪಿ	5	
ತೃಣಮೂಲ	22	4.1
ಬಿಜೆಡಿ	12	1.4
ಸಿಪಿಐ(ಎಂ)	3	2.4
ಸಿಪಿಐ	2	

ಎಡಪಕ್ಷಗಳಿಗೆ ತೀವ್ರ ಹಿನ್ನಡೆ

2014 ರಲ್ಲಿ ಎಡಪಕ್ಷಗಳು ತೀವ್ರ ಹಿನ್ನಡೆ ಅನುಭವಿಸಿದ್ದವು. ಇದು ಈ ಬಾರಿ ಮತ್ತಷ್ಟು ತೀವ್ರಗೊಂಡಿದೆ, ಕೇವಲ 5 ಸ್ಥಾನಗಳನ್ನು ಪಡೆದಿವೆ. ತಮಿಳುನಾಡಿನಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ತಲಾ 2 ಕ್ಷೇತ್ರಗಳಲ್ಲಿ ಗೆದ್ದಿದ್ದರೆ, ಕೇರಳದಲ್ಲಿ ಎಲ್‌ಡಿಎಫ್ ನೇತರತ್ವದಲ್ಲಿರುವ ಸಿಪಿಐ(ಎಂ)ಗೆ ಕೇವಲ 1 ಸ್ಥಾನ ಮಾತ್ರ ಪಡೆಯಲು ಸಾಧ್ಯವಾಗಿದೆ. ಪಶ್ಚಿಮ ಬಂಗಾಲ ಮತ್ತು ತ್ರಿಪುರಾದಲ್ಲಿ ಒಂದೂ ಸ್ಥಾನ ಗಳಿಸಲು ಸಾಧ್ಯವಾಗಿಲ್ಲ.

“ನಮ್ಮ ಪ್ರಚಾರವು ಬಿಜೆಪಿ ಸರಕಾರದ ವಿರುದ್ಧ ಕೇಂದ್ರೀಕೃತವಾಗಿತ್ತು, ಇದು ಇಲ್ಲಿ ಕಾಂಗ್ರೆಸ್‌ಗೆ ವರವಾಗಿ ಪರಿಣಮಿಸಿತು ಅಲ್ಪಸಂಖ್ಯಾತರ ಮತಗಳು ಕಾಂಗ್ರೆಸಿಗೆ ಹೋಗಿವೆ...” ಎಂದಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ “ಈ ಹಿನ್ನಡೆ ತೀರಾ ಅನಿರೀಕ್ಷಿತ, ನಮ್ಮ ರಾಜ್ಯ ಸಮಿತಿ ಈ ಪರಾಭವದ ಬಗ್ಗೆ ಆತ್ಮಾವಲೋಕನ ಮಾಡುತ್ತದೆ, ತಪ್ಪುಗಳೇನಾದರೂ ಆಗಿದ್ದರೆ ಸರಿಪಡಿಸಿಕೊಳ್ಳುತ್ತೇವೆ” ಎಂದು ಹೇಳಿದ್ದಾರೆ.

ಪಶ್ಚಿಮ ಬಂಗಾಲದಲ್ಲಿ ಎಡರಂಗ ಒಂದೂ ಸ್ಥಾನವನ್ನು ಪಡೆದಿಲ್ಲ, ಮಾತ್ರವಲ್ಲ , ಸ್ವಾತಂತ್ರ್ಯದ ನಂತರ ಇಷ್ಟೊಂದು ಕಡಿಮೆ ಮತಗಳನ್ನು ಎಂದೂ ಪಡೆದಿಲ್ಲ. “ಇದು ಸ್ವಾತಂತ್ರ್ಯದ ನಂತರ ಪಶ್ಚಿಮ ಬಂಗಾಲದಲ್ಲಿ ಎಡಶಕ್ತಿಗಳು ಅನುಭವಿಸಿರುವ ಅಭೂತಪೂರ್ವ ಪರಾಭವ. ಇದನ್ನು ದೇಶದಾದ್ಯಂತ ಎಡಪಕ್ಷಗಳ ಸೋಲು ಮತ್ತು ಅತಿ ಬಲಪಂಥೀಯ ಶಕ್ತಿಗಳ ಏರುಗತಿಯ ಹಿನ್ನೆಲೆಯಲ್ಲೂ ನೋಡಬೇಕಾಗಿದೆ” ಎಂದು ಪಶ್ಚಿಮ ಬಂಗಾಲದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ ಮಿಶ್ರ ಹೇಳಿದ್ದಾರೆ.

ಎಡಪಕ್ಷಗಳ ಹೊಸ ಲೋಕಸಭಾ ಸದಸ್ಯರು:

ಸಿಪಿಐ(ಎಂ)ನ ಪಿ.ಆರ್.ನಟರಾಜನ್ ಕೊಯಮತ್ತೂರ್ ಕ್ಷೇತ್ರದಿಂದ 1,79,009 ಮತಗಳ ಅಂತರದಿಂದ ಗೆದ್ದಿದ್ದಾರೆ; ಮತ್ತು ಎಸ್.ವೆಂಕಟೇಶನ್ ಮಧುರೈನಿಂದ 1,36,422 ಮತಗಳಿಂದ ಗೆದ್ದಿದ್ದಾರೆ.

ಸಿಪಿಐ ನ ಎಂ.ಸೆಲ್ವರಾಜ್ ನಾಗಪಟ್ಟಿನಂ ಕ್ಷೇತ್ರದಿಂದ 2,11,353 ಮತಗಳ ಅಂತದಿಂದ ಮತ್ತು ಸುಬ್ರಾಯನ್ ಕೆ ತಿರುಪ್ಪುರ್ ಕ್ಷೇತ್ರದಿಂದ 93,368 ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ.

ಕೇರಳದ ಅಲಪ್ಪುಳದಿಂದ ಎ.ಎಂ.ಅರಿಫ್ 9066 ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ.

ಪಿ.ಆರ್. ನಟರಾಜನ್ ಎಸ್.ವೆಂಕಟೇಶನ್ ಸುಬ್ರಾಯನ್ ಎಂ. ಸೆಲ್ವರಾಜ್ ಎ.ಎಂ.ಅರಿಫ್



ಅವರು ಪುರಾಣಗಳನ್ನು ಇತಿಹಾಸ ಎನ್ನುತ್ತಾರೆ

ಇತಿಹಾಸವನ್ನು ತಿರುಚಿ ಬರೆಯುವುದು ಮತ್ತು ಅವರದೇ ವ್ಯಾಖ್ಯಾನವನ್ನು ಬೋಧಿಸುವುದು, ಬಿಜೆಪಿಗೆ ಹಿಂದುತ್ವವನ್ನು ಸಮರ್ಥಿಸಲು ಅತ್ಯಗತ್ಯವಾಗಿದೆ.

ರೊಮಿಲ್ಲಾ ಥಾಪರ್ – ಕನ್ನಡಕ್ಕೆ : ವಾಸುದೇವ ಉಚ್ಚಿಲ

2014ರಲ್ಲಿ ನರೇಂದ್ರ ಮೋದಿ ಮತ್ತು ಬಿಜೆಪಿಯ ಚುನಾವಣೆಯು, ಹಿಂದೂ ರಾಷ್ಟ್ರೀಯತೆಯ ಸಿದ್ಧಾಂತವನ್ನು ಸಮರ್ಥಿಸಿ ಭಾರತದ ಇತಿಹಾಸವನ್ನು ಬದಲಿಸಿ ಬರೆಯುವ ಪುನರ್ ಪ್ರಯತ್ನಕ್ಕೆ ಕಾರಣವಾಯಿತು. 1999 ಮತ್ತು 2004ರ ಮಧ್ಯ ಬಿಜೆಪಿ ಪ್ರಥಮವಾಗಿ ಭಾರತವನ್ನು ಆಳಿದಾಗಲೇ ಈ ಪ್ರಯತ್ನಗಳು ಆರಂಭವಾಗಿದ್ದವು.

ಮೋದಿ ಸರಕಾರ ಮತ್ತು ಅವರ ಪಕ್ಷ ಆಳ್ವಿಕೆ ನಡೆಸುತ್ತಿದ್ದ ಹಲವು ರಾಜ್ಯ ಸರಕಾರಗಳ ಕೆಳಗೆ, ಇತಿಹಾಸವನ್ನು ಬದಲಿಸುವ ಪ್ರಯತ್ನಗಳು ಹಲವು ರೂಪಗಳನ್ನು ತಾಳಿದ್ದವು: ಉದಾಹರಣೆಗೆ ಅವರ ಸಿದ್ಧಾಂತಗಳಿಗೆ ವ್ಯತಿರಿಕ್ತವಾಗಿದ್ದ ಅಧ್ಯಾಯಗಳನ್ನು ಅಥವಾ ಭಾಗಗಳನ್ನು ತೆಗೆದುಹಾಕಲಾಗಿತ್ತು ಮತ್ತು ಭೂತಕಾಲದ ಬಗ್ಗೆ ಅವರೇ ನಂಬುವ ಆವೃತ್ತಿಗಳನ್ನು ಸೇರಿಸಲಾಗಿತ್ತು.

ಅವರು ತಮಗೆ ಬೇಕಾದಂತೆ ಬಾಗಬಲ್ಲ ಮಾಧ್ಯಮಜಾಲಗಳ ಮೂಲಕ ಪುರಾಣಗಳನ್ನು ಹಾಗೂ ಸ್ಥಾವರವಾದುದನ್ನು ಪ್ರತಿಪಾದಿಸುತ್ತಿದ್ದಾರೆ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್) ನಡೆಸುತ್ತಿರುವ ಶಾಲೆಗಳಲ್ಲಿ ಆ ಆವೃತ್ತಿಗಳನ್ನು ಬೋಧಿಸುತ್ತಿದ್ದಾರೆ.

ಹಿಂದೂ ರಾಷ್ಟ್ರೀಯವಾದಿಗಳಿಗೆ ಇತಿಹಾಸ ಯಾಕೆ ಇಷ್ಟೊಂದು ಮುಖ್ಯವಾಗಿದೆ? ಅವರು ರಾಷ್ಟ್ರವೆಂದು ತರ್ಕಿಸುವ ವಿಚಾರವೊಂದು ಅಂಗೀಕಾರಾರ್ಹ ಇತಿಹಾಸವೆಂದು ನಿರೂಪಿಸುವುದರಲ್ಲಿ ರಾಷ್ಟ್ರೀಯವಾದಿಗಳು ಸುಪ್ರಸಿದ್ಧರಾಗಿದ್ದಾರೆ; ಅತ್ಯುಗ್ರ ರಾಷ್ಟ್ರೀಯವಾದಿಗಳಿಗೆ ವರ್ತಮಾನದಲ್ಲಿ ತಮ್ಮ ಕೃತ್ಯಗಳನ್ನು ತರ್ಕಬದ್ಧಗೊಳಿಸಲು ಭೂತಕಾಲದ ಬಗ್ಗೆ ತಮ್ಮದೇ ಆದ ಆವೃತ್ತಿ ಬೇಕಾಗಿದೆ. ಭಾರತದ ಇತಿಹಾಸದ ಮರು ಬರವಣಿಗೆ ಮತ್ತು ಅವರದ್ದೇ ಆವೃತ್ತಿಯ ಬೋಧನೆ – ಹಿಂದೂ ರಾಷ್ಟ್ರೀಯವಾದಿಗಳ ಸಿದ್ಧಾಂತವನ್ನು ಸಮರ್ಥಿಸುವುದಕ್ಕೆ ಅಗತ್ಯ ಬೇಕಾಗಿದೆ.

ಮೋಹನದಾಸ ಕೆ. ಗಾಂಧಿ ಮತ್ತು ಜವಹರಲಾಲ ನೆಹರೂ ಅವರ ನೇತೃತ್ವ ಹೊಂದಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್–ಸೆಕ್ಯುಲಾರ್ ವಸಾಹತು ವಿರೋಧಿ ರಾಷ್ಟ್ರೀಯವಾದಕ್ಕೆ ಮೂಲ ಸಂಘಟನೆಯಾಗಿದ್ದು ಎಲ್ಲ ನಾಗರಿಕರೂ ಸಮಾನ ಹಾಗೂ ಅವಿಭಾಜ್ಯ ನೆಲೆಯ ಭಾಗವಹಿಸುವಿಕೆ ಹೊಂದಿದ ರಾಷ್ಟ್ರದ ನೆಲೆಯಲ್ಲಿ ಭಾರತಕ್ಕೆ ಸ್ವಾತಂತ್ರ್ಯವನ್ನು ಗೆದ್ದುಕೊಟ್ಟಿತು.

ಈ ನಿಲುವು 1920 ರಲ್ಲಿ ನಿರ್ದಿಷ್ಟವಾದ ಆದರೆ ಆ ಕಾಲಕ್ಕೆ ಅಷ್ಟೊಂದು ಪ್ರಮುಖವಾಗಿಲ್ಲದ ರಾಷ್ಟ್ರೀಯವಾದದ ರೂಪಗಳಲ್ಲಿ ಸವಾಲಿಗೊಳಗಾಯಿತು: ಮುಸ್ಲಿಂ ಭೂಮಾಲಕರು ಮತ್ತು ವಿದ್ಯಾವಂತ ಮಧ್ಯಮ ವರ್ಗವನ್ನು ಒಳಗೊಂಡ ಮುಸ್ಲಿಂಲೀಗ್ ಮುಸ್ಲಿಂ ರಾಷ್ಟ್ರೀಯವಾದವನ್ನು ಪ್ರತಿನಿಧಿಸುತ್ತೇವೆಂದು ಸ್ಥಾಪಿಸಿತು; ಮೇಲುಜಾತಿ, ಮಧ್ಯಮವರ್ಗ ಹಿಂದೂಗಳು ಹುಟ್ಟುಹಾಕಿದ ಹಿಂದೂಮಹಾಸಭಾ ತಾನು ಹಿಂದೂರಾಷ್ಟ್ರೀಯವಾದವನ್ನು ಪ್ರತಿನಿಧಿಸುತ್ತೇನೆಂದು ಸ್ಥಾಪಿಸಿತು. ಅದು ಬಳಿಕ ಆರ್‌ಎಸ್‌ಎಸ್ ಆಗಿ ರೂಪಾಂತರಗೊಂಡಿತು.

ಮುಸ್ಲಿಂ ಲೀಗ್ 1947 ರಲ್ಲಿ ಪಾಕಿಸ್ತಾನದ ನಿರ್ಮಾಣದಲ್ಲಿ ಮುಂಚೂಣಿಯಲ್ಲಿತ್ತು. ಆರೆಸ್ಸೆಸ್ ಮತ್ತು ಅದರ ಪರಿವಾರದವರು ಭಾರತವನ್ನು ಸೆಕ್ಯುಲಾರ್ ಪ್ರಜಾಪ್ರಭುತ್ವದಿಂದ ಹಿಂದೂ ಮತೀಯ ಪ್ರಭುತ್ವವಾಗಿ ಪರಿವರ್ತಿಸಲು ಇಂದಿಗೂ ಕಾಯುತ್ತಲೇ ಇದ್ದಾರೆ. ಹಿಂದೂ ಬಹುತ್ವವಾದದ ರಾಜಕೀಯವನ್ನು ತರ್ಕಬದ್ಧಗೊಳಿಸುವ ಪ್ರಯತ್ನಗಳ ಅವರ ಸಿದ್ಧಾಂತವು 'ಹಿಂದೂತ್ವ' (ಹಿಂದೂನೆಸ್) ಎಂಬ ಹೆಸರಿನಿಂದ ಎದ್ದು ಕಾಣುತ್ತಿದೆ.

ಮುಸ್ಲಿಂ ಮತ್ತು ಹಿಂದೂ ರಾಷ್ಟ್ರೀಯವಾದಗಳೆರಡೂ ಭಾರತದ ಬಗೆಗಿನ ಬ್ರಿಟನ್ನಿನ ತಿಳುವಳಿಕೆಯಲ್ಲಿ ಬೇರು ಬಿಟ್ಟವುಗಳಾಗಿವೆ. 1817ರಲ್ಲಿ ಪ್ರಕಟವಾದ 'ಬ್ರಿಟಿಷ್ ಭಾರತದ ಇತಿಹಾಸ' ಎಂಬ ಪ್ರಭಾವೀ ಗ್ರಂಥದ ಲೇಖಕ ಜೇಮ್ಸ್ ಮಿಲ್ ಪ್ರಸ್ತಾಪಿಸಿದ ದ್ವಿರಾಷ್ಟ್ರ ಸಿದ್ಧಾಂತವನ್ನು ನೀತಿ ನಿರೂಪಕರು ಎತ್ತಿ ಹಿಡಿದರು. ಭಾರತದಲ್ಲಿ ಸದಾ ಸಂಘರ್ಷದಲ್ಲಿರುವ ಹಿಂದೂ ಮತ್ತು ಮುಸ್ಲಿಂ ಎರಡು ಪ್ರತ್ಯೇಕ ರಾಷ್ಟ್ರಗಳು ಇವೆ ಎಂದು ಆತ ಸ್ಥಾಪಿಸುತ್ತಲೇ ಇದ್ದ.

ಈ ವಿಚಾರಕ್ಕೆ ಹೊಂದಿಕೊಂಡಂತೆ ಮಿಲ್ ಭಾರತದ ಇತಿಹಾಸವನ್ನು ಮೂರು ಅವಧಿಗಳಲ್ಲಾಗಿ ವಿಂಗಡಿಸಿದ–ಹಿಂದೂ, ಮುಸ್ಲಿಂ ಮತ್ತು ಬ್ರಿಟಿಷ್. ಈ ಸಿದ್ಧಾಂತಗಳು ಭಾರತೀಯರಿಂದ ಆರಂಭದಲ್ಲಿ ಸ್ವೀಕರಿಸಲ್ಪಟ್ಟರೂ, ತದನಂತರದಲ್ಲಿ ಇತಿಹಾಸಕಾರರಿಂದ ಪ್ರಶ್ನಿಸಲ್ಪಟ್ಟವು ಮತ್ತು ಇದೀಗ ಅರ್ಧ ಶತಮಾನದ ಹಿಂದೆಯೇ ತಿರಸ್ಕರಿಸಲ್ಪಟ್ಟವು. ಆದಾಗ್ಯೂ, ಅವು ಇಂದಿಗೂ ಹಿಂದೂತ್ವದ ಸಂಗಾತಿಗಳಾಗಿ ಇನ್ನೂ ಉಳಿದಿವೆ.

ಹಿಂದೂ ರಾಷ್ಟ್ರವನ್ನು ಸ್ಥಾಪಿಸಬೇಕಿದ್ದರೆ, ಹಿಂದೂಗಳು ಬಹುಸಂಖ್ಯಾತರಾಗಿ ಪ್ರಾಧಾನ್ಯ ಹೊಂದಿದ ಹಿಂದೂ ರಾಷ್ಟ್ರ ಸಿದ್ಧಾಂತವು, ಪ್ರಜಾಪ್ರಭುತ್ವಕ್ಕೆ ಬದಲಿಯಾಗಿ ಬರಬೇಕು. ಹಿಂದೂತ್ವದ ಪ್ರಕಾರ ಹಿಂದೂ ಶಬ್ದದ ವ್ಯಾಖ್ಯೆ ಏನೆಂದರೆ ಯಾವಾತನ ಪ್ರಾಚೀನ ತಾಯಿನಾಡು ಹಿಂದೂ ಮತದ ಮೂಲ ನೆಲೆಯಾದ ಬ್ರಿಟಿಷ್ ಭಾರತದ ಗಡಿರೇಖೆಯೊಳಗೆ ಇರುತ್ತದೋ ಆತ ಹಿಂದೂ. ಇದು ಬೇರೆ ಕಡೆಯಿಂದ ವಲಸೆ ಬಂದ ಜನಸಮೂಹದಿಂದ ಹಿಂದೂವನ್ನು ಪ್ರತ್ಯೇಕಗೊಳಿಸುತ್ತದೆ. ಆದುದರಿಂದ ಕ್ರೈಸ್ತ, ಮುಸ್ಲಿಂ ಮತ್ತು ಪಾರ್ಸಿ ಇತ್ಯಾದಿ ಬೇರೆ ಮತಗಳಿಂದ ಬಂದವರನ್ನು ಪರಕೀಯರಾಗಿ ಗುರುತಿಸುತ್ತದೆ.

ಹಿಂದೂಗಳ ಮೂಲವನ್ನು ಆರ್ಯರ ಸಂಸ್ಕೃತಿಯಷ್ಟು ಪ್ರಾಚೀನಕ್ಕೆ ಒಯ್ಯಲಾಗಿದೆ. ಆರ್ಯನ್ ಎಂದರೆ ಒಂದು ಭಾಷೆ ಮತ್ತು ಸಂಸ್ಕೃತಿಯನ್ನು ನಿರೂಪಿಸುತ್ತದೆಯೇ ಹೊರತು ಜೈವಿಕವಾದ ಒಂದು ಜನಾಂಗವನ್ನಲ್ಲ. ಆರ್ಯರ ಉಗಮ ಕ್ರಿಸ್ತಪೂರ್ವ ಎರಡನೆಯ ಸಹಸ್ರಮಾನದಲ್ಲಷ್ಟೇ ಆಗಿದೆ ಎಂದು ಇತಿಹಾಸಕಾರರು ನಿರೂಪಿಸಿದ್ದಾರೆ. ಆದರೆ ಹಿಂದೂತ್ವ ಆವೃತ್ತಿಯ ಇತಿಹಾಸದಲ್ಲಿ ಆರ್ಯಪೂರ್ವದ ಒಂದು ಸಹಸ್ರಮಾನ ಹಿಂದಿನ ಪರಿಣತ ನಗರ ಸಂಸ್ಕೃತಿಯನ್ನು ಕಟ್ಟಿದ ಸಿಂಧೂ ನಾಗರಿಕತೆಯನ್ನು ಹಿಂದೂಗಳ ಆರ್ಯನ್ ಮೂಲವಾಗಿ ಪ್ರಾಚೀನಗೊಳಿಸಲಾಗಿದೆ.

"ಆರ್ಯ" ಎಂದರೆ "ಗೌರವಾರ್ಹ" ಎಂಬ ಅರ್ಥವಿದ್ದು, ಅದರಿಂದ ನಿಷ್ಪನ್ನವಾದುದಾಗಿದೆ. ಹಿಂದೂಗಳು ಆರ್ಯ ಮೂಲದವರಾಗಿರುವುದರಿಂದ – ಶಬ್ದದ ಅರ್ಥದಂತೆ – ಅವರು ಇತರ ಎಲ್ಲರಿಗಿಂತ ಶ್ರೇಷ್ಠರು. ಇದು ಆರ್ಯಾನಿಸಮ್ ಬಗ್ಗೆ ಕೇವಲ 19ನೇ ಶತಮಾನದ ಭ್ರಮೆ ಮಾತ್ರವಲ್ಲ, 1930ರ ಜರ್ಮನ್ ಮತ್ತು ಇಟಲಿಯನ್ ಫ್ಯಾಸಿಸಮ್ಮಿನ ಅಚ್ಚೂ ಆಗಿದೆ – ಆರ್‌ಎಸ್‌ಎಸ್‌ನ ಸ್ಥಾಪಕ ಸದಸ್ಯರ ಬರವಣಿಗೆಗಳಲ್ಲಿ ಅದನ್ನು ಸುಲಭದಲ್ಲಿ ಕಾಣಬಹುದು.

ಇತಿಹಾಸಕಾರರು ಕ್ರಿ.ಪೂ. ಎರಡನೇ ಮತ್ತು ಒಂದನೇ ಸಹಸ್ರಮಾನದ ವಿಭಿನ್ನ ಸಮುದಾಯಗಳ ಮತ್ತು ಸಂಸ್ಕೃತಿಗಳ ಮಧ್ಯೆ ಕಂಡು ಬರುವ ಮುಖಾಮುಖಿಯನ್ನು ಶೋಧನೆಗೆ ಒಳಪಡಿಸುತ್ತಿದ್ದರೆ, ಹಿಂದೂತ್ವದ ಸಿದ್ಧಾಂತಕಾರರು ಏಕೀಕೃತ ಸಮರೂಪದ ಆರ್ಯ ಸಂಸ್ಕೃತಿಯು ಎಲ್ಲ ಸಂಸ್ಕೃತಿಗಳಿಗಿಂತ ಮೊದಲೇ ಇಡೀ ಉಪಖಂಡದಲ್ಲೆ ಇದ್ದಿತ್ತೆಂದು – ಅದುವೇ ಪ್ರಾಚೀನ ಸಂಸ್ಕೃತಿಯೆಂದು – ಸಾಧಿಸುತ್ತಿದ್ದಾರೆ.

ಉತ್ತರ ಭಾರತದಲ್ಲೀ ಇರಾನಿಯನ್ ಮತ್ತು ಮಧ್ಯ ಏಷ್ಯಾ ಮೂಲದ ಸಮ್ಮಿಶ್ರ ಜನಸಮುದಾಯವೊಂದು ಆ ಕಾಲದಲ್ಲಿ ಇದ್ದಿತೆಂದು ಪ್ರಾಗ್ಐತಿಹಾಸಿಕ ಮೂಲಗಳಿಂದ ಇತ್ತೀಚೆಗೆ ದೊರೆತ ಜೈವಿಕ ಸಾಕ್ಷ್ಯಗಳು ಸೂಚಿಸುತ್ತವೆ. ಇತಿಹಾಸಕಾರರು ಇವನ್ನು ಭಾರತಕ್ಕೆ ಆಗಿರುವ ವಲಸೆಗೆ ಸಾಕ್ಷಿಯೆಂದು ಪರಿಗಣಿಸುತ್ತಾರಾದರೆ, ಪ್ರಾಚೀನ ಇತಿಹಾಸದ ಹಿಂದೂತ್ವ ಸಂರಚನಾ ದೃಷ್ಟಿಗೆ ಇದೊಂದು ಬಹಿಷ್ಕೃತ ವಿಚಾರವಾಗಿದೆ.

ಇಸ್ಲಾಂ ಪೂರ್ವದ ಭಾರತದ ಇತಿಹಾಸವು ಒಂದು ಸುವರ್ಣಯುಗವೆಂದು ಸಾಧಿಸುವುದಕ್ಕೆ, ಕ್ರಿ.ಪೂ. 1000 ದಿಂದ ಕ್ರಿ.ಶ. 1200 ವರ್ಷಗಳ "ಹಿಂದೂ ಕಾಲಾವಧಿ"ಯು ವೈಜ್ಞಾನಿಕವಾಗಿ ಅತ್ಯಂತ ಮುಂದುವರಿದಿತ್ತೆಂದು ತೋರಿಸಲು ಎಷ್ಟೊ ಆಧುನಿಕ ವೈಜ್ಞಾನಿಕ ಅನ್ವೇಷಣೆಗಳನ್ನು – ವಿಮಾನ, ಪ್ಲಾಸ್ಟಿಕ್ ಸರ್ಜರಿ ಮತ್ತು ಅಂಗಾಂಶ ಸಂಶೋಧನೆ – ಹಿಂದೂಗಳು ಪ್ರಾಚೀನದಲ್ಲೇ ಬಳಸುತ್ತಿದ್ದರೆಂದು ಉದಾಹರಿಸುತ್ತಾರೆ. ಈ ಹೇಳಿಕೆಗಳನ್ನು ಪ್ರಾಚೀನ ಭೂತಕಾಲದ ದೇವರುಗಳ ಮತ್ತು ಮಾನವರ ಚಟುವಟಿಕೆಗಳಿಗೆ ಅನ್ವಯಿಸುತ್ತಾರೆ.

ಬಲಿಪಶು ಮಾಡಿದೆಯೆನ್ನಲಾದ ಇಸ್ಲಾಮಿಗೆ ಪ್ರತೀಕಾರ:

ಹಿಂದೂಗಳು ಮುಸ್ಲಿಮರ ಬಲಿಪಶುಗಳಾಗಿದ್ದರು ಮತ್ತು ಸಾವಿರ ವರ್ಷಗಳ ಮುಸ್ಲಿಂ ಆಳ್ವಿಕೆಯಲ್ಲಿ ಗುಲಾಮರಾಗಿದ್ದರೆಂದು ಹಿಂದೂತ್ವ ಸಿದ್ಧಾಂತವು ಪ್ರಬಲವಾಗಿ ವಾದಿಸುತ್ತದೆ. ಹಿಂದೂ ರಾಷ್ಟ್ರ ಅಥವಾ ಹಿಂದೂ ಪ್ರಭುತ್ವದ ಹಕ್ಕು ಮಂಡಿಸುವಲ್ಲಿ, ಅವರು ತಮ್ಮ ಚಾರಿತ್ರಿಕ ಹಕ್ಕುಗಳನ್ನು ಸಮರ್ಥಿಸುತ್ತಿದ್ದಾರೆ ಮತ್ತು ತಾವು ಆಗಿದ್ದ 'ಬಲಿ'ಗೆ ಪ್ರತೀಕಾರ ಸಾಧಿಸುತ್ತಿದ್ದಾರೆ. "ಮುಸ್ಲಿಂ ಕಾಲಾವಧಿ"ಯ ಕ್ರಿ.ಶ. ಎರಡನೇ ಸಹಸ್ರಮಾನವನ್ನು ಇದೇ ದೃಷ್ಟಿಕೋನದಿಂದ ನೋಡಲಾಗುತ್ತಿದೆ ಮತ್ತು ದ್ವೇಷವನ್ನು ಪ್ರಚೋದಿಸಲು ಬಳಸುವ ಸಲಕರಣೆಯಾಗಿ ಮಾಡಲಾಗಿದೆ.

ಈ ಬಗ್ಗೆ ಸಪಾಟು ಸಾಮಾನ್ಯೀಕರಣಕ್ಕೆ ಯಾವ ಸಾಕ್ಷ್ಯಗಳನ್ನೂ ಇತಿಹಾಸಕಾರರು ಕಂಡುಕೊಂಡಿಲ್ಲ. ಆದರೆ ಅವರ ಅಭಿಪ್ರಾಯಗಳನ್ನು ಕಡೆಗಣಿಸಲಾಗುತ್ತಿದೆ. ಖಂಡಿತವಾಗಿ ಹಿಂದೂ ಮತ್ತು ಮುಸ್ಲಿಮರ ಮಧ್ಯೆ ಸಂಘರ್ಷಗಳಿದ್ದುವು – ಇಸ್ಲಾಂ ಪೂರ್ವದ ಅವಧಿಯಲ್ಲಿ ಹಿಂದೂಗಳು ಮತ್ತು ಬೌದ್ಧರ ಮಧ್ಯೆ ಸಂಘರ್ಷಗಳಿದ್ದ ಹಾಗೆ. ಕೆಲವು ಶಕ್ತಿಶಾಲಿ ಮುಸ್ಲಿಮರು ಹಿಂದೂ ದೇವಾಲಯಗಳಿಗೆ ದಾಳಿ ಮಾಡಿದ್ದೂ ನಿಜ– ಅದು ಸಂಪತ್ತಿನ ಲೂಟಿ ಮತ್ತು ಮತದ ಮೇಲಿನ ವಿರೋಧದಿಂದ ಕೂಡಾ. ಆದರೆ ಇಂಥಹದ್ದು ಇಸ್ಲಾಂಪೂರ್ವ ಕಾಲಕ್ಕೆ

ಪುಟ 10 ಕ್ಕೆ



ಪರಿಷ್ಕೃತ ಕನಿಷ್ಟ ವೇತನ ಜಾರಿಗೆ ರಾಜ್ಯದಾದ್ಯಂತ ಸಿಐಟಿಯು ಧರಣಿ



ಹೈಕೋರ್ಟು ತೀರ್ಪಿನಂತೆ ಪರಿಷ್ಕೃತ ಕನಿಷ್ಟ ಕೂಲಿ ಜಾರಿಗೊಳಿಸಬೇಕೆಂದು ಹಾಗೂ ವಿವಿಧ ಕಾರ್ಮಿಕರಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಉಡುಪಿ ಮತ್ತು ದ.ಕ. ಜಿಲ್ಲೆಗಳಲ್ಲಿ ಮೇ 21 ರಂದು ಪ್ರತ್ಯೇಕ ಪ್ರತಿಭಟನಾ ಧರಣಿ ನಡೆಯಿತು.

37 ವಿವಿಧ ಶೆಡ್ಯೂಲ್ಡ್ ಕೈಗಾರಿಕೆಗಳಿಗೆ ರಾಜ್ಯ ಸರಕಾರ ನಿಗದಿಗೊಳಿಸಿರುವ ಕನಿಷ್ಟ ವೇತನ ಅಧಿಸೂಚನೆಯನ್ನು ಹೈಕೋರ್ಟು ಎತ್ತಿ ಹಿಡಿದಿದೆ. ಕಾರ್ಮಿಕರಿಗೆ ಅಧಿಸೂಚನೆ ಹೊರಡಿಸಿದ ದಿನದಿಂದಲೇ ಶೇ.6ರಷ್ಟು ಬಡ್ಡಿಯೊಂದಿಗೆ ಬಾಕಿ ವೇತನವನ್ನು 8 ವಾರದೊಳಗೆ ನೀಡುವಂತೆ ಆದೇಶಿಸಿದೆ. ಈ ಆದೇಶ ಜಾರಿಗೊಳಿಸಬೇಕು ಎಂದು ಕಾರ್ಮಿಕರು ಒತ್ತಾಯಿಸಿದರು.

37 ವಿವಿಧ ಕೆಲಸಗಳಲ್ಲಿ ತೊಡಗಿರುವ ಕಾರ್ಮಿಕರ ಮೂಲವೇತನ ಹೆಚ್ಚಳವಾಗಿದೆ. ಅಧಿಸೂಚನೆಗಿಂತ ಕಡಿಮೆ ಕೂಲಿ ನೀಡುತ್ತಿರುವ ಆಡಳಿತ ಮಂಡಳಿ ಹಾಗೂ ಮಾಲೀಕರು ತತ್‌ಕ್ಷಣವೇ ಬಾಕಿ ಕೂಲಿಯನ್ನು ನೀಡಬೇಕು. ಕೋರ್ಟ್ ಆದೇಶವನ್ನು ಸಮರ್ಪಕವಾಗಿ ಜಾರಿಗೊಳಿಸಲು ಸರ್ಕಾರ, ಜಿಲ್ಲಾಡಳಿತ ಹಾಗೂ ಕಾರ್ಮಿಕ ಇಲಾಖೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಸ್ಕೀಮ್ ಕಾರ್ಮಿಕರಾದ ಅಂಗನವಾಡಿ, ಆಶಾ, ಬಿಸಿಯೂಟ ಕಾರ್ಯಕರ್ತರನ್ನೂ ಕನಿಷ್ಟ ಕೂಲಿ ವ್ಯಾಪ್ತಿಗೆ ಒಳಪಡಿಸಬೇಕು. ಬೆಲೆ ಏರಿಕೆ ಸೂಚ್ಯಂಕ ನಿಗದಿಯಲ್ಲಿನ ಮೋಸ ನಿಲ್ಲಿಸಬೇಕು. ಕಾರ್ಮಿಕ ಸಂಘದ ನೋಂದಣಿ ಶುಲ್ಕ ರೂ.10– ಇದ್ದುದನ್ನು ರೂ.1000ಕ್ಕೆ ಹೆಚ್ಚಳ ಮಾಡಿರುವುದನ್ನು ಹಿಂಪಡೆಯಬೇಕು. ಕಾರ್ಮಿಕ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಗೊಳಿಸಬೇಕು. ಬೀಡಿ ಕಾರ್ಮಿಕರಿಗೆ ಬಾಕಿ ಇರಿಸಿದ ಕನಿಷ್ಟ ಕೂಲಿ, ತುಟ್ಟಿಭತ್ತೆಯನ್ನು ನೀಡಬೇಕು ಎಂದು ಒತ್ತಾಯಿಸಲಾಯಿತು.

ಉಡುಪಿ:

ಮಣಿಪಾಲದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಧರಣಿ ನಡೆಸಲಾಯಿತು. ಸಿಐಟಿಯು ಉಡುಪಿ ಜಿಲ್ಲಾ ಸಂಚಾಲಕ ಕೆ.ಶಂಕರ್ ಮಾತನಾಡಿದರು. ಸಿಐಟಿಯು ಜಿಲ್ಲಾಧ್ಯಕ್ಷ ಪಿ.ವಿಶ್ವನಾಥ ರೈ, ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಮುಖಂಡರಾದ ವಿಠಲ ಪೂಜಾರಿ, ಶಶಿಧರ ಗೊಲ್ಲ, ಕವಿರಾಜ್, ದಾಸು ಭಂಡಾರಿ, ವೆಂಕಟೇಶ ಕೋಣಿ ಸುರೇಶ್ ಕಲ್ಲಾಗರ, ನಳಿನಿ ಮುಂತಾದವರು ಭಾಗವಹಿಸಿದ್ದರು.

ಮಂಗಳೂರು:



ಹೈಕೋರ್ಟ್ ಆದೇಶದಂತೆ ಕನಿಷ್ಠ ಕೂಲಿಯನ್ನು ಜಾರಿಗೊಳಿಸಬೇಕು,ಸ್ಕೀಮ್ ನೌಕರರಾದ ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆಯರನ್ನೂ ಕನಿಷ್ಠ ಕೂಲಿ ವ್ಯಾಪ್ತಿಗೆ ಒಳಪಡಿಸಬೇಕು, ತಂದೆ ತಾಯಿಗಳನ್ನೊಳಗೊಂಡು 5 ಘಟಕಗಳ ಆಧಾರದಲ್ಲಿ ಕನಿಷ್ಠ ಕೂಲಿ ರೂ.18,000/–ನಿಗದಿಗೊಳಿಸಬೇಕು, ಬೆಲೆಯೇರಿಕೆ ಸೂಚ್ಯಾಂಕ ನಿಗದಿಯಲ್ಲಿನ ಮೋಸ



ನಿಲ್ಲಿಸಬೇಕು,10 ರೂ.ಇದ್ದ ಕಾರ್ಮಿಕ ಸಂಘದ ನೊಂದಣಿ ಶುಲ್ಕವನ್ನು ರೂ.1000/–ಕ್ಕೆ ಹೆಚ್ಚಳ ಮಾಡಿರುವುದನ್ನು ಹಿಂಪಡೆಯಬೇಕು, ಕಾರ್ಮಿಕ ಇಲಾಖೆಯಲ್ಲಿನ ಖಾಲಿ ಇರುವ ಹುದ್ದೆಗಳಿಗೆ ಕೂಡಲೇ ನೇಮಕಾತಿಗೊಳಿಸಬೇಕು ಹಾಗೂ ಬೀಡಿ ಕಾರ್ಮಿಕರಿಗೆ ಬಾಕಿಯಿರಿಸಿದ ಕನಿಷ್ಟ ಕೂಲಿ–ತುಟ್ಟಿಭತ್ತೆಯನ್ನು ನೀಡಬೇಕೆಂದು ಒತ್ತಾಯಿಸಿ, CITU ನೇತ್ರತ್ವದಲ್ಲಿ ನಗರದಲ್ಲಿಂದು(21–05–2019) ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿಯೆದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.

ಸುಮಾರು 200 ಕ್ಕೂ ಮಿಕ್ಕಿದ ವಿವಿಧ ವಿಭಾಗದ ಕಾರ್ಮಿಕರು, "ಹೈಕೋರ್ಟ್ ಆದೇಶದಂತೆ ಕನಿಷ್ಠ ಕೂಲಿ ಜಾರಿಯಾಗಲಿ, ತಂದೆ ತಾಯಿ ಸೇರಿದಂತೆ 5 ಘಟಕಗಳ ಆಧಾರದಲ್ಲಿ ಕನಿಷ್ಠ ಕೂಲಿ ರೂ. 18,000 ನಿಗದಿಯಾಗಲಿ, ಬೆಲೆಯೇರಿಕೆ ಸೂಚ್ಯಾಂಕದಲ್ಲಿನ ಮೋಸವನ್ನು ನಿಲ್ಲಿಸಿರಿ" ಎಂಬಿತ್ಯಾದಿ ಘೋಷಣೆಗಳನ್ನು ಕೂಗಿದರು. ಬಳಿಕ ನಡೆದ ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸಿದ CITU ದ.ಕ. ಜಿಲ್ಲಾಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ, ಕಳೆದ ಹಲವಾರು ದಶಕಗಳಿಂದ ಕಾರ್ಮಿಕ ವರ್ಗ ಕನಿಷ್ಠ ಕೂಲಿಗಾಗಿ ನಡೆಸಿದ ಸಮರಧೀರ ಹೋರಾಟದ ಫಲವಾಗಿ 2016–17ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸರಕಾರವು ಕನಿಷ್ಠ ವೇತನವನ್ನು ಪರಿಷ್ಕರಿಸಲು ಮಾಲೀಕರು,ಕಾರ್ಮಿಕರು, ಸರಕಾರದ ಸಮ ಸಂಖ್ಯೆಯ ಪ್ರತಿನಿಧಿಗಳನ್ನೊಳಗೊಂಡ ಕನಿಷ್ಠ ಕೂಲಿ ಸಲಹಾ ಮಂಡಳಿಯಲ್ಲಿ ಚರ್ಚಿಸಿದ ನಂತರ ಸರಕಾರಕ್ಕೆ ಶಿಫಾರಸು ಮಾಡಿತ್ತು. ಈ ಶಿಫಾರಸ್ಸಿನ ಆಧಾರದಲ್ಲಿ ಸರಕಾರ ಕರಡು ಅಧಿಸೂಚನೆಯನ್ನು ಹೊರಡಿಸಿ, ಆಕ್ಷೇಪಗಳನ್ನು ಸ್ವೀಕರಿಸಿ ನಂತರ ಅಂತಿಮ ಅಧಿಸೂಚನೆಗಳನ್ನು ಹೊರಡಿಸಿತ್ತು. ಇದರ ವಿರುದ್ಧ ಸುಮಾರು 1700 ರಷ್ಟು ಮಾಲೀಕರು ಹಾಗೂ ಮಾಲೀಕರ ಸಂಘಗಳು ರಾಜ್ಯ ಹೈಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. 2–3 ವರ್ಷಗಳ ಕಾಲ ಹೈಕೋರ್ಟ್ ನಲ್ಲಿ ವಾದ ವಿವಾದಗಳನ್ನು ಆಲಿಸಿದ ನಂತರ ಗೌರವಾನ್ವಿತ ನ್ಯಾಯಮೂರ್ತಿ ಗಳಾದ ಕ್ರಷ್ಣ ದೀಕ್ಷಿತ್ ರವರ ಪೀಠವು 37 ವಿವಿಧ ಶೆಡ್ಯೂಲ್ ಕೈಗಾರಿಕೆಗಳಿಗೆ ರಾಜ್ಯ ಸರಕಾರ ನಿಗದಿಗೊಳಿಸಿರುವ ಕನಿಷ್ಠ ವೇತನ ಅಧಿಸೂಚನೆಯನ್ನು ಎತ್ತಿ ಹಿಡಿದಿರುವುದಲ್ಲದೆ, ಅಧಿಸೂಚನೆಯ ದಿನಾಂಕದಿಂದಲೇ 6% ಬಡ್ಡಿಯೊಂದಿಗೆ ಬಾಕಿಯನ್ನು 8 ವಾರಗಳೊಳಗೆ ಸಂದಾಯ ಮಾಡುವಂತೆಯೂ ಆದೇಶಿಸಿದೆ. ಒಟ್ಟಿನಲ್ಲಿ ಹೈಕೋರ್ಟ್ ನ ಈ ತೀರ್ಪಿನಿಂದಾಗಿ ಅಂಗಡಿ, ವಾಣಿಜ್ಯ ಸಂಸ್ಥೆಗಳು, ಅಟೋಮೊಬೈಲ್, ಆಸ್ಪತ್ರೆ, ನರ್ಸಿಂಗ್ ಹೋಂಗಳು, ಟೈಲರಿಂಗ್, ಹಾಸ್ಟೆಲ್, ಸೆಕ್ಯೂರಿಟಿ, ಹೋಟೇಲ್, ಬೇಕರಿಗಳು, ಇಟ್ಟಿಗೆ, ಮರದ



ಕೆಲಸ,ಗ್ಲಾಸ್ ಮುಂತಾದ 37 ವಿವಿಧ ಕೈಗಾರಿಕೆಗಳ ಖಾಯಂ–ಗುತ್ತಿಗೆ–ತಾತ್ಕಾಲಿಕ–ಬದಲಿ–ಹೊರಗುತ್ತಿಗೆ ಕಾರ್ಮಿಕರೆಲ್ಲರಿಗೂ ತಮ್ಮ ಮೂಲವೇತನವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ.ಇದು ರಾಜ್ಯದ ಕಾರ್ಮಿಕ ವರ್ಗದ ಹೋರಾಟಕ್ಕೆ ಸಂದ ಜಯ ಎಂದು ಕಾರ್ಮಿಕ ವರ್ಗವನ್ನು ಶ್ಲಾಘಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಅಖಖಿಗ ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು, ಕೇಂದ್ರ ಹಾಗೂ ರಾಜ್ಯ ಸರಕಾರಗಳ ತಪ್ಪು ಆರ್ಥಿಕ ನೀತಿಗಳಿಂದಾಗಿ ವಿಪರೀತ ಬೆಲೆಯೇರಿಕೆಯಾಗುತ್ತಿದ್ದು, ಮತ್ತೊಂದು ಕಡೆ ದುಡಿಮೆಗೆ ತಕ್ಕ ಪ್ರತಿಫಲವಿಲ್ಲದೆ ಕಾರ್ಮಿಕರು ಜೀವನ ನಡೆಸುವುದೇ ಕಷ್ಟಕರವಾಗಿದೆ. ಮಾತ್ರವಲ್ಲದೆ ಬೆಲೆಯೇರಿಕೆ ಸೂಚ್ಯಾಂಕದಲ್ಲಿ ಮಾರುಕಟ್ಟೆ ಬೆಲೆಯನ್ನು ಗಣನೆಗೆ ತೆಗೆದುಕೊಳ್ಳುವ ಬದಲು ಸಗಟು ವ್ಯಾಪಾರದ ಬೆಲೆಯನ್ನು ಅಂದಾಜಿಸುವ ಮೂಲಕ ಕಾರ್ಮಿಕರಿಗೆ ಮಹಾಮೋಸವನ್ನು ಮಾಡಲಾಗುತ್ತಿದೆ. ಸ್ಕೀಂ ನೌಕರರಾದ ಆಶಾ, ಬಿಸಿಯೂಟ, ಅಂಗನವಾಡಿ ಕಾರ್ಯಕರ್ತೆಯರನ್ನು ಕೂಡ ಕನಿಷ್ಠ ವೇತನ ಕಾಯಿದೆಯಡಿಯಲ್ಲಿ ತರಬೇಕಾಗಿದೆ. ಪ್ರತಿಯೊಬ್ಬ ಕಾರ್ಮಿಕನಿಗೂ ಸಂಘ ಕಟ್ಟುವ ಹಕ್ಕಿದ್ದರೂ, ಅದನ್ನು ತಡೆಯುವ ಸಲುವಾಗಿ ಕಾರ್ಮಿಕ ಸಂಘದ ಈಗಿದ್ದ ರೂ. 10 ನೋಂದಣಿ ಶುಲ್ಕವನ್ನು ರೂ. 1000 ಕ್ಕೆ ಏರಿಸುವ ಮೂಲಕ ಕಾರ್ಮಿಕರ ಒಗ್ಗಟ್ಟನ್ನು ಮುರಿಯಲು ಆಳುವ ವರ್ಗಗಳು ಪಿತೂರಿ ನಡೆಸುತ್ತಿದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಅಖಖಿಗ ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, ಸಮಾಜದಲ್ಲಿ ಸಂಪತ್ತನ್ನು ಸ್ರಷ್ಟಿಸುವ ಕಾರ್ಮಿಕ ವರ್ಗದ ಹಿತಾಸಕ್ತಿಯನ್ನು ಕಾಪಾಡಬೇಕಾದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ನಿರಂತರವಾಗಿ ಮಾಲೀಕರ ಪರವಾದ ನೀತಿಗಳನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿದೆ. ಕನಿಷ್ಠ ಕೂಲಿಯನ್ನು ಲೆಕ್ಕ ಹಾಕುವಾಗ ಕಾರ್ಮಿಕ, ಹೆಂಡತಿ, ಮಕ್ಕಳು ಸೇರಿದಂತೆ 3 ಘಟಕಗಳಾಗಿ ಪರಿಗಣಿಸಬೇಕೆಂದಿದ್ದರೂ ಮಾಲೀಕರು ಮಾತ್ರ ಹೆಂಡತಿ ದುಡಿಯುತ್ತಿರುವುದರಿಂದ ಅವಳನ್ನು ಸೇರಿಸಬಾರದೆಂದು ನ್ಯಾಯಾಲಯದಲ್ಲಿ ವಾದಿಸಿರುವುದು ತೀರಾ ನಾಚಿಕೆಗೇಡಿನ ಸಂಗತಿಯಾಗಿದೆ. ಆದರೆ ಸುಪ್ರೀಂ ಕೋರ್ಟ್ ನ ತೀರ್ಪಿನನ್ವಯ ಹೆತ್ತವರನ್ನು ನೋಡಿಕೊಳ್ಳುವ ಜವಾಬ್ದಾರಿ ಮಕ್ಕಳಾದ್ದರಿಂದ ತಂದೆ ತಾಯಿಯನ್ನು ಸೇರಿಸಿ 5 ಘಟಕಗಳನ್ನಾಗಿ ಮಾಡಬೇಕೆಂಬ ಕಾರ್ಮಿಕ ವರ್ಗದ ಬೇಡಿಕೆ ವಾಸ್ತವ ಸತ್ಯವನ್ನು ಪ್ರತಿಪಾದಿಸಿದೆ. ರಾಜ್ಯ ಸರಕಾರವು ಅಂಬೇಡ್ಕರ್ ಸಹಾಯ ಹಸ್ತ ಯೋಜನೆ ಯಡಿಯಲ್ಲಿ ಮನೆ ಕೆಲಸಗಾರರು, ಟೈಲರ್‌ಗಳು, ಮೆಕ್ಯಾನಿಕ್, ಹಮಾಲಿ ಕಾರ್ಮಿಕರು, ಕ್ಷೌರಿಕರು, ಚಿಂದಿ ಆಯುವವರು, ಹಾಗೂ ಚಾಲಕರಿಗೆ ಸ್ಮಾರ್ಟ್ ಕಾರ್ಡ್ ನೀಡುವುದಾಗಿ ಅರ್ಜಿ ಪಡೆದು ವರ್ಷ ಕಳೆದರೂ ಇನ್ನೂ ಕಾರ್ಡ್ ನೀಡದೇ ಇರುವುದು ಸರಕಾರದ ದಿವ್ಯನಿರ್ಲಕ್ಷ್ಯವನ್ನು ಎತ್ತಿ ತೋರಿಸಿದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ CITU ಜಿಲ್ಲಾ ನಾಯಕರಾದ ಯು.ಬಿ. ಲೋಕಯ್ಯ, ಸದಾ ಶಿವದಾಸ್, ಜಯಂತಿ .ಬಿ.ಶೆಟ್ಟಿ, ಯೋಗೀಶ್ ಜಪ್ಪಿನ ಮೊಗರು, ಜಯಂತ ನಾಯಕ್, ಪದ್ಮಾವತಿ ಶೆಟ್ಟಿ, ವಸಂತ ನಡ,ರಾಮಣ್ಣ ವಿಟ್ಲ ರವರು ಭಾಗವಹಿಸಿದ್ದರು.

ಪುಟ 10 ಕ್ಕೆ

ವಯಸ್ಸಿಗೆ ಆಯುಷ್ಯವನ್ನು ತುಂಬುವುದಕ್ಕಿಂತ ಆಯುಷ್ಯಕ್ಕೆ ಜೀವವನ್ನು ತುಂಬಬೇಕು – ಡಾ. ಪ್ರಕಾಶ್ ತೋಳಾರ್





ಬೈಂದೂರು ತಾಲೂಕು ಹಿರಿಯ ನಾಗರಿಕರ ವೇದಿಕೆಯ ಆಶ್ರಯದಲ್ಲಿ ಹಿರಿಯ ನಾಗರಿಕರ ಸಮಾವೇಶವು ದಿನಾಂಕ : 18, ಮೇ, 2019 ರಂದು ಬೈಂದೂರಿನ ಬಂಕೇಶ್ವರ ರಸ್ತೆಯ ಮಹಾಕಾಳಿ ದೇವಸ್ಥಾನದ ಸಭಾಂಗಣದಲ್ಲಿ ಯಶಸ್ವಿಯಾಗಿ ಜರುಗಿತು. ಕುಂದಾಪುರ ಶ್ರೀ ಮಾತಾ ಆಸ್ಪತ್ರೆಯ ವೈದ್ಯಾಧಿಕಾರಿ ಮನೋರೋಗ ತಜ್ಞ ಡಾ॥ ಪ್ರಕಾಶ್ ಸಿ. ತೋಳಾರ್‌ರವರು ಕಿರಿಯರಿಂದ ಹಿರಿಯರ ಶೋಷಣೆ, ಪಾಲಕರ ಪೋಷಣೆ, ಸಂರಕ್ಷಣೆ, ಹಿರಿಯ ನಾಗರಿಕರಿಗೆ ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯ ವೃದ್ಧಾಪ್ಯ ಹಾಗೂ ತೀವ್ರತರ ಕಾಯಿಲೆಯ ಸಮಸ್ಯೆ ಅವಶ್ಯಕತೆ ಇತ್ಯಾದಿ ಅರಿವು, ತಿಳುವಳಿಕೆ ಕುರಿತು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡುತ್ತಾ, ವಯಸ್ಸಿಗೆ ಆಯುಷ್ಯವನ್ನುತುಂಬುವುದಕ್ಕಿಂತ ಆಯುಷ್ಯಕ್ಕೆ ಜೀವವನ್ನು ತುಂಬಬೇಕು ಎಂದು ಹೇಳಿದರು. ಅವರು ಮುಂದುವರಿದು ಎಲ್ಲಾ ರೀತಿಯ ಮಾನಸಿಕ ರೋಗಗಳಿಗೆ ಚಿಕಿತ್ಸಾ ವಿಧಾನ ಮಧ್ಯಪಾನ ಇತರ ವ್ಯಸನಗಳಿಗೆ ದಾಸರಾಗುವುದು, ವೈವಾಹಿಕ ಹಾಗೂ ಕೌಟುಂಬಿಕ ಸಮಸ್ಯೆಗಳಿಗೆ ಸಲಹೆ ಮಾರ್ಗದರ್ಶನ ನೀಡಿದರು. ಸಂವಾದದಲ್ಲಿ ಹಿರಿಯ ನಾಗರಿಕರ ಆರೋಗ್ಯ ಸಮಸ್ಯೆಗಳ ಪ್ರಶ್ನೆಗಳಿಗೆ ಸೂಕ್ತ ಸಲಹೆ, ಮಾರ್ಗದರ್ಶನ ನೀಡಿದರು. ಮತ್ತು ಬೈಂದೂರಿನ ಹಿರಿಯ ನಾಗರಿಕರ ವೇದಿಕೆಯ ಸದಸ್ಯರಿಗೆ ತಮ್ಮ ಆಸ್ಪತ್ರೆಯ ವತಿಯಿಂದ ಉಚಿತ ಚಿಕಿತ್ಸಾ ಸೌಲಭ್ಯ ಕೊಡುತ್ತೇನೆ ಎಂದು ಸಭೆಯಲ್ಲಿ ಘೋಷಣೆಯನ್ನು ಮಾಡಿರುವುದಾಗಿ ಸಭೆಯಲ್ಲಿ ಡಾ॥ ಪ್ರಕಾಶ್ ತೋಳಾರ್‌ರವರನ್ನು ಹಿರಿಯ ನಾಗರಿಕರು ಸ್ವಾಗತಿಸಿ ಅಭಿನಂದಿಸಿದರು.

ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎಚ್. ವಸಂತ ಹೆಗ್ಡೆ ವಹಿಸಿದ್ದರು. ಕಾರ್ಯದರ್ಶಿ ಸಂಜೀವ ಆಚಾರ್ಯ ಬೈಂದೂರು ಚಟುವಟಿಕೆಯ ವರದಿ ಮಂಡಿಸಿದರು. ಉಪಾಧ್ಯಕ್ಷ ಶ್ರೀನಿವಾಸ ಮದ್ದೋಡಿ ವೇದಿಕೆಯಲ್ಲಿ ಇದ್ದರು. ಎಚ್. ರಾಮ ಶೇರುಗಾರ್ ವಂದಿಸಿದರು. ವೆಂಕಟೇಶ ಕೋಣಿ ಅತಿಥಿಗಳಿಗೆ ಗೌರವಿಸಿದರು. ಗೋವಿಂದ ಎಂ. ಸ್ವಾಗತ ಗೀತೆ ಹಾಡಿದರು.

–ವೆಂಕಟೇಶ ಕೋಣಿ

ಹಾಸನದ ಅಸ್ಮಿತೆಯಾಗಿರುವ ಆಲೂಗೆಡ್ಡೆ ಬೆಳೆಯನ್ನು ಉಳಿಸಲು.... ಪುಟ 5 ರಿಂದ

- ಬೆಳೆಯನ್ನು ಮಾರಾಟಮಾಡಲು ಹಾಸನದ ಎಪಿಎಂಸಿಯಲ್ಲಿ ಸರ್ಕಾರವೇ ಖರೀದಿ ಕೇಂದ್ರಗಳನ್ನು ತೆರೆದು ಕೃಷಿ ತಜ್ಞ ಡಾ.ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಉತ್ಪಾದನಾ ವೆಚ್ಚಕ್ಕೆ ಶೇ.50 ಲಾಭಾಂಶ ಸೇರಿಸಿ ಬೆಲೆ ನಿಗದಿ ಮಾಡಬೇಕು.
- ಆಲೂಗಡ್ಡೆಯನ್ನು ಮೌಲ್ಯವರ್ಧನೆ ಮಾಡುವ ಸಲುವಾಗಿ ಜಿಲ್ಲೆಯಲ್ಲಿ ಸರ್ಕಾರಿ ಸ್ವಾಮ್ಯದಲ್ಲಿ ಆಲೂಗಡ್ಡೆ ಉತ್ಪನ್ನಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸಬೇಕು.

ಆಲೂಗಡ್ಡೆ ಅಲ್ಪಾವಧಿಯಲ್ಲಿ ಬೆಳೆಯುವ ಹಾಸನ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, 31 ಸಾವಿರ ಹೆಕ್ಟೇರ್ ಭೂಪ್ರದೇಶದಲ್ಲಿ ಆಲೂಗಡ್ಡೆ ಬೆಳೆ ಕುಸಿತವಾಗಿರುವುದು ಇದು ಜಿಲ್ಲೆಯ ಆರ್ಥಿಕ ಚಟುವಟಿಕೆಯ ಮೇಲೆ ಗಂಭೀರ ಪರಿಣಾಮವನ್ನು ಬೀರುತ್ತದೆ. ಹಾಗಾಗಿ ಜಿಲ್ಲೆಯ ಅಭಿವೃದ್ಧಿಗೆ ದೊಡ್ಡ ಕೊಡುಗೆಯನ್ನು ಇದುವರೆಗು ನೀಡುತ್ತಾ ಬಂದಿರುವ ಆಲೂಗಡ್ಡೆ ರೈತರ ಸಮಸ್ಯೆಗಳನ್ನು ಸರ್ಕಾರ ಕೂಡಲೇ ಗಮನಿಸಿ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಂಡು ರೈತರನ್ನು ಮತ್ತು ಕೃಷಿಯನ್ನು ಉಳಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ, ಆಲೂಗಡ್ಡೆ ಬೆಳೆಗಾರರ ಹೋರಾಟ ಸಮಿತಿ ಒತ್ತಾಯಿಸುತ್ತದೆ.

ಅವರು ಪುರಾಣಗಳನ್ನು ಇತಿಹಾಸ ಎನ್ನುತ್ತಾರೆ.... ಪುಟ 8 ರಿಂದ

ಅಪರಿಚಿತವೇನಾಗಿರಲಿಲ್ಲ – ಕೆಲವು ಹಿಂದೂ ರಾಜರು ಕೂಡಾ ಸಂಪತ್ತಿನ ಶೇಖರಣೆಗಾಗಿ ದೇವಾಲಯಗಳನ್ನು ಲೂಟಿ ಮಾಡಿದ್ದಾರೆ ಮತ್ತು ನಾಶ ಮಾಡಿದ್ದಾರೆ ಕೂಡಾ. ಇಂಥ ಕ್ರಿಯೆಗಳಲ್ಲಿ ಮತೀಯ ಪೂರ್ವಗ್ರಹಗಳಿಗಿಂತ ಹೆಚ್ಚಿನದಾದುದು ಇದ್ದಿತ್ತು.

ಆದರೆ ಬಲಿಪಶುಗಳಾಗಿದ್ದೇವೆಂಬ ತರ್ಕವು, ಇಲ್ಲಿ ಇದ್ದ ಕುಖ್ಯಾತ ದಮನ ಪದ್ಧತಿಯ ಮುಂದೆ ವಿಡಂಬನೆಯಾಗಿ ಕಾಣುತ್ತಿದೆ – ಕೆಳಜಾತಿಯವರನ್ನು ಅಸ್ಪೃಶ್ಯರೆಂದು ಮಲಿನಗೊಂಡವರೆಂದು ಘೋಷಿಸಿರುವುದು – ಹಿಂದೂಗಳು ಮುಸ್ಲಿಮರ ಬಲಿಪಶುಗಳಾಗಿದ್ದೇವೆಂದು ಪರಿಗಣಿಸಿರುವ ಕಾಲವನ್ನೂ ಒಳಗೊಂಡು 2000 ವರ್ಷಗಳ ದೀರ್ಘಕಾಲ ಮೇಲುಜಾತಿ ಹಿಂದೂಗಳು ಈ ದಮನ ದಬ್ಬಾಳಿಕೆಯನ್ನು ನಡೆಸಿಕೊಂಡು ಬಂದಿದ್ದಾರೆ.

ಮುಸ್ಲಿಂ ಆಳ್ವಿಕೆಯ ಕಾಲದಲ್ಲಿ ಹಿಂದೂಧರ್ಮವು ಅನೇಕ ಗಮನಾರ್ಹವಾದ ತತ್ತ್ವ ಸಿದ್ಧಾಂತಗಳೊಂದಿಗೆ ಮುಖಾಮುಖಿಗೊಳಗಾಯಿತು. ಭಕ್ತಿ ಮಾರ್ಗದ ಹಲವು ಪಂಥಗಳು ಧರ್ಮವನ್ನು ಶ್ರೀಮಂತಗೊಳಿಸಿದವು ಮತ್ತು ಕೆಲವು ಹಿಂದೂ ಭಕ್ತರಿಂದ ಇವತ್ತಿಗೂ ಆಚರಿಸಲ್ಪಡುವ ರೂಪಗಳನ್ನು ತಾಳಿದವು. ಆದರೆ ಇವನ್ನು ವಿರಳ ವಿದ್ಯಮಾನಗಳೆಂದು ಪರಿಗಣಿಸಲಾಗಿದೆ. ಅಲ್ಲದೆ ಮುಸ್ಲಿಂ ಕವಿಗಳು ಹಿಂದೂ ದೇವರುಗಳನ್ನು ಹೊಗಳಿ ರಚಿಸಿದ ಉತ್ಕೃಷ್ಟ ಧಾರ್ಮಿಕ ಕಾವ್ಯಗಳ ಬಗ್ಗೆ – ಅವುಗಳಲ್ಲಿ ಕೆಲವನ್ನು ಶಾಸ್ತ್ರೀಯ ಸಂಗೀತದ ಕಚೇರಿಗಳಲ್ಲಿ ಇಂದಿಗೂ ಹಾಡಲಾಗುತ್ತಿದೆ – ಯಾವುದೇ ಉಲ್ಲೇಖವಿಲ್ಲ. ಆ ಕಾಲಾವಧಿಯ ಉನ್ನತ ಆಡಳಿತದ ಅಧಿಕಾರ ಸ್ಥಾನಗಳನ್ನು ಹೆಚ್ಚಾಗಿ ಮೇಲುಜಾತಿ ಹಿಂದೂಗಳೇ ನಿರ್ವಹಿಸುತ್ತಿದ್ದುದು ಎಂಬುದನ್ನು ಅನುಕೂಲಕರವಾಗಿ ಕಡೆಗಣಿಸಲಾಗಿದೆ.

ಸಮಕಾಲೀನ ಭಾರತದಲ್ಲಿ, ವಸಾಹತುಶಾಹಿ ವಿರೋಧದ ಸಂಕೇತವೂ ಹಾಗೂ ಭಾರತೀಯ ಸಮಾಜದಲ್ಲಿ ಸೆಕ್ಯುಲಾರ್‌ವಾದದ ಕೇಂದ್ರ ಆವಶ್ಯಕತೆಯನ್ನು ಮನಗಂಡವರೂ ಆದ ರಾಷ್ಟ್ರದ ಪ್ರಥಮ ಪ್ರಧಾನಿ ಜವಹರಲಾಲ ನೆಹರೂ ಅವರ ಮೇಲೆ ಎಡೆಬಿಡದೆ ನಡೆಸುತ್ತಿರುವ ದಾಳಿಗಳು ನಿಜವಾಗಿ ಸೆಕ್ಯುಲಾರ್ ಪ್ರಜಾಪ್ರಭುತ್ವದ ಮೇಲೆ ನಡೆಸುತ್ತಿರುವ ಪ್ರಚ್ಛನ್ನ ದಾಳಿಯಾಗಿದೆ. ಭಾರತದ ವಸಾಹತುವಿರೋಧಿ ಹೋರಾಟದ ಭಾಗವಾಗಿರದ ಆರ್‌ಎಸ್‌ಎಸ್‌ನಿಂದ ನೆಹರೂ ಬಗ್ಗೆ ದ್ವೇಷ ಮತ್ತು ಅವರ ಸಾಧನೆಗಳನ್ನು ಗೌಣಗೊಳಿಸುವ ಪ್ರಯತ್ನ ಕೂಡಾ ಹೊಮ್ಮಿಬರುತ್ತಿದೆ.

ಇತಿಹಾಸದ ಹಿಂದೂತ್ವದ ಆವೃತ್ತಿಯನ್ನು ಇಡೀ ಭಾರತೀಯ ಸಮಾಜದಾದ್ಯಂತ ನೆಟ್ಟು ಬೆಳೆಸುವುದರಲ್ಲಿರುವ ಅತಿ ಅಪಾಯಕಾರೀ ಅಂಶವೇನೆಂದರೆ – ವೃತ್ತಿಪರ ಚರಿತ್ರೆ ಮತ್ತು ಹಿಂದೂ ಬಹುತ್ವವಾದವನ್ನು ನ್ಯಾಯಬದ್ಧಗೊಳಿಸುವ ಭೂತಕಾಲದ ಆವೃತ್ತಿಯ ಮಧ್ಯದ ವಿಭಜನೆಯನ್ನು ಇನ್ನಷ್ಟು ಹೆಚ್ಚಿಸುವುದಾಗಿದೆ. ಎರಡನೆಯದಕ್ಕೆ ಸರಕಾರದ ಪೋಷಣೆ ಇದೆ; ಆರ್ಥಿಕ ಬೆಂಬಲವಿದೆ; ಮತ್ತು ಹಲವಾರು ರೀತಿಯಲ್ಲಿ ಜನಪ್ರಿಯಗೊಳಿಸಲಾಗಿದೆ. ಈ ಹಿಂದುತ್ವವಾದಿ ಇತಿಹಾಸವನ್ನು ವಿಮರ್ಶೆಗೊಳಪಡಿಸುವವರು, ಐತಿಹಾಸಿಕ ಸಂಶೋಧನೆಯನ್ನು ಬುಡಮೇಲುಗೊಳಿಸುವ ಒಂದು ಪ್ರಯತ್ನದ ಭಾಗವಾಗಿ ರಾಷ್ಟ್ರವಿರೋಧಿಗಳು ಎಂಬ ಹಣೆಪಟ್ಟಿ ಈಗಾಗಲೇ ಹಚ್ಚಿಸಿಕೊಂಡಿದ್ದಾರೆ.

International New York Times.

ದಿ: 20–5–2019ರ ಡೆಕ್ಕನ್ ಹೆರಾಲ್ಡ್‌ನ 'ಪನೋರಮಾ' ಭಾಗದಲ್ಲಿ (ಪುಟ 11) ಪ್ರಕಟವಾದ ರೊಮಿಲ್ಲಾ ಥಾಪರ್‌ರ ಲೇಖನದ ಕನ್ನಡಾನುವಾದ.

ಪರಿಷ್ಕೃತ ಕನಿಷ್ಟ ವೇತನ ಜಾರಿಗೆ ರಾಜ್ಯದಾದ್ಯಂತ ಸಿಐಟಿಯು ಧರಣಿ........ ಪುಟ 9 ರಿಂದ

ಹೋರಾಟದ ನೇತ್ರತ್ವವನ್ನು ಅಖಖಿಗ ಮುಖಂಡರಾದ ಶಿವಕುಮಾರ್, ಜಯಲಕ್ಷ್ಮಿ, ಭಾರತಿ ಬೋಳಾರ, ಬಾಬು ದೇವಾಡಿಗ, ವಸಂತಿ ಕುಪ್ಪೆ ಪದವು, ಅಹಮ್ಮದ್ ಭಾವ ಮುಂತಾದವರು ವಹಿಸಿದ್ದರು.

ಮಂಡ್ಯ

ಕೋರ್ಟ್ ಆದೇಶದಂತೆ ಕನಿಷ್ಠ ಕೂಲಿಯನ್ನು ಜಾರಿಗೊಳಿಸಬೇಕು,ಸ್ಕೀಮ್ ನೌಕರರಾದ ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆಯರನ್ನೂ ಕನಿಷ್ಠ ಕೂಲಿ ವ್ಯಾಪ್ತಿಗೊಳಪಡಿಸಬೇಕು, ತಂದೆ ತಾಯಿಗಳನ್ನೊಳಗೊಂಡು 5 ಘಟಕಗಳ ಆಧಾರದಲ್ಲಿ ಕನಿಷ್ಠ ಕೂಲಿ ರೂ.18,000/– ನಿಗದಿಗೊಳಿಸಬೇಕು, ಬೆಲೆಯೇರಿಕೆ ಸೂಚ್ಯಾಂಕ ನಿಗದಿಯಲ್ಲಿನ ಮೋಸ ನಿಲ್ಲಿಸಬೇಕು,ಅಸಂಘಟಿತ ಕಾರ್ಮಿಕರಾದ ಮನೆಕೆಲಸಗಾರರು, ಟೈಲರ್, ಮೆಕ್ಯಾನಿಕ್, ಹಮಾಲಿಗಳಿಗೆ ಸ್ಮಾರ್ಟ್ ಕಾರ್ಡ್ ನೀಡಬೇಕು, 10 ರೂ. ಇದ್ದ ಕಾರ್ಮಿಕ ಸಂಘದ ನೊಂದಣಿ ಶುಲ್ಕವನ್ನು ರೂ.1000/–ಕ್ಕೆ ಹೆಚ್ಚಳ ಮಾಡಿರುವುದನ್ನು ಹಿಂಪಡೆಯಬೇಕು, ಕಾರ್ಮಿಕ ಇಲಾಖೆಯಲ್ಲಿನ ಖಾಲಿ ಇರುವ ಹುದ್ದೆಗಳಿಗೆ ಕೂಡಲೇ ನೇಮಕಾತಿಗೊಳಿಸಬೇಕು ಹಾಗೂ ಬೀಡಿ ಕಾರ್ಮಿಕರಿಗೆ ಬಾಕಿಯಿರಿಸಿದ ಕನಿಷ್ಟ ಕೂಲಿ–ತುಟ್ಟಿಭತ್ತೆಯನ್ನು ನೀಡಬೇಕೆಂದು ಒತ್ತಾಯಿಸಿ ಇಂದು ಬೆಳಿಗ್ಗೆ 10ಕ್ಕೆ ಮಂಡ್ಯದ ಸಿಲ್ವರ್ ಜೂಬ್ಬಿಲಿ ಪಾರ್ಕ್‌ನಿಂದ CITU ನೇತ್ರತ್ವದಲ್ಲಿ ಮಂಡ್ಯದ ಕಾರ್ಮಿಕ ಅಧಿಕಾರಿಗಳು ಕಚೇರಿಯೆದುರು ಪ್ರತಿಭಟನೆ ನಡೆಯಿತು.

2016–17ನೇ ಸಾಲಿನಿಂದ ಕರ್ನಾಟಕ ರಾಜ್ಯ ಸರಕಾರ ಕನಿಷ್ಠ ವೇತನ ಪರಿಷ್ಕರಿಸಲು ಮಾಲೀಕರು, ಕಾರ್ಮಿಕರು, ಸರಕಾರದ ಸಮಸಂಖ್ಯೆಯ ಪ್ರತಿನಿಧಿಗಳನ್ನೊಳಗೊಂಡ ಕನಿಷ್ಠ ಕೂಲಿ ಸಲಹಾ ಮಂಡಳಿಯಲ್ಲಿ ಚರ್ಚಿಸಿದ ನಂತರ ಸರಕಾರಕ್ಕೆ ಶಿಫಾರಸು ಮಾಡಿತ್ತು. ಈ ಶಿಫಾರಸ್ಸಿನ ಆಧಾರದಲ್ಲಿ ಸರಕಾರ ಕರಡು ಅಧಿಸೂಚನೆಯನ್ನು ಹೊರಡಿಸಿ, ಆಕ್ಷೇಪಗಳನ್ನು ಸ್ವೀಕರಿಸಿ ನಂತರ ಅಂತಿಮ ಅಧಿಸೂಚನೆಗಳನ್ನು ಹೊರಡಿಸಿತ್ತು.

ಇದರ ವಿರುದ್ಧ ಮಾಲೀಕರು ಹಾಗೂ ಮಾಲೀಕರ ಸಂಘಗಳು ರಾಜ್ಯ ಹೈಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.2–3 ವರ್ಷಗಳ ಕಾಲ ಹೈಕೋರ್ಟ್ ನಲ್ಲಿ ವಾದ ವಿವಾದಗಳನ್ನು ಆಲಿಸಿದ ನಂತರ ಗೌರವಾನ್ವಿತ ನ್ಯಾಯಮೂರ್ತಿ ಗಳಾದ ಕ್ರಷ್ಣ ದೀಕ್ಷಿತ್ ರವರ ಪೀಠವು 37 ವಿವಿಧ ಶೆಡ್ಯೂಲ್ ಕೈಗಾರಿಕೆಗಳಿಗೆ ರಾಜ್ಯ ಸರಕಾರ ನಿಗದಿಗೊಳಿಸಿರುವ ಕನಿಷ್ಠ ವೇತನ ಅಧಿಸೂಚನೆಯನ್ನು ಎತ್ತಿ ಹಿಡಿದಿರುವುದಲ್ಲದೆ, ಅಧಿಸೂಚನೆಯ ದಿನಾಂಕದಿಂದಲೇ 6% ಬಡ್ಡಿಯೊಂದಿಗೆ ಬಾಕಿಯನ್ನು 8 ವಾರಗಳೊಳಗೆ ಸಂದಾಯ ಮಾಡುವಂತೆಯೂ ಆದೇಶಿಸಿದೆ. ಒಟ್ಟಿನಲ್ಲಿ ಹೈಕೋರ್ಟ್ ನ ಈ ತೀರ್ಪಿನಿಂದಾಗಿ ಅಂಗಡಿ,ವಾಣಿಜ್ಯ ಸಂಸ್ಥೆಗಳು, ಅಟೋಮೊಬೈಲ್,ಆಸ್ಪತ್ರೆ, ನರ್ಸಿಂಗ್ ಹೋಂಗಳು, ಟೈಲರಿಂಗ್, ಹಾಸ್ಟೆಲ್, ಸೆಕ್ಯೂರಿಟಿ, ಹೋಟೇಲ್, ಬೇಕರಿಗಳು, ಇಟ್ಟಿಗೆ, ಮರದ ಕೆಲಸ, ಗ್ಲಾಸ್ ಮುಂತಾದ 37 ವಿವಿಧ ಕೈಗಾರಿಕೆಗಳ ಖಾಯಂ–ಗುತ್ತಿಗೆ–ತಾತ್ಕಾಲಿಕ–ಬದಲಿ–ಹೊರಗುತ್ತಿಗೆ ಕಾರ್ಮಿಕರೆಲ್ಲರೂ ತಮ್ಮ ಮೂಲವೇತನವನ್ನು ಹೆಚ್ಚಿಸಿಕೊಳ್ಳಲು ಅರ್ಹರಾಗಿದ್ದಾರೆ ಎಂದು CITU ಮಂಡ್ಯ ಜಿಲ್ಲಾ ಅಧ್ಯಕ್ಷರಾದ ಉ.ರಾಮಕೃಷ್ಣ ತಿಳಿಸಿದರು.

ಈ ಪ್ರತಿಭಟನೆಯಲ್ಲಿ CITU ಮುಖಂಡರಾದ ಕುಮಾರಿ.ಶಿವಕುಮಾರ್ ಕಟ್ಟಡ ಕಾರ್ಮಿಕ ಸಂಘದ. ಪ್ರಧಾನ ಕಾರ್ಯದರ್ಶಿ ತಿಮ್ಮೇಗೌಡ. ಅಂಗನವಾಡಿ ನೌಕರರ ಸಂಘದ ಮುಖಂಡರಾದ ಜಯಲಕ್ಷ್ಮಿಮ್ಮ ಬಿಸಿ ಊಟ ನೌಕರರ ಸಂಘದ ಪುಟ್ಟಮ್ಮ. ವೆಂಕಟಲಕ್ಷ್ಮಮ್ಮ. ರಾಜು ಬಿದಿಬದಿ ವ್ಯಾಪಾರಿಗಳ ಸಂಘದ ಚಂದ್ರಶೇಖರ ರವರು ಭಾಗವಹಿಸಿದರು.

–ಡಾ. ಪ್ರಕಾಶ ಸಿ. ರಾವ್,
ಎಂ.ಬಿ.ಬಿ.ಎಸ್.
ಮಾಜಿ ಅಧ್ಯಕ್ಷರು, ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು

ವೈದ್ಯಕೀಯ ರಂಗ ಸೇವೆಯೇ ಸುಲಿಗೆಯೇ

ಆರೋಗ್ಯ ಎಂಬುದು ಸಾಮಾಜಿಕ ಹೊಣೆಗಾರಿಕೆ ಎಂದು ತಿಳಿದು ಬಂದು ಶತಮಾನಗಳೇ ಆಗಿವೆ. ಆರೋಗ್ಯ ಎಂದರೆ ದೈಹಿಕ, ಮಾನಸಿಕ, ಸಾಮಾಜಿಕ ಸುಸ್ಥಿತಿ ಕಾಪಾಡುವುದು, ಕೇವಲ ರೋಗ ಇಲ್ಲದಿರುವುದಲ್ಲ. ಈಗ ವೈದ್ಯಕೀಯ ರಂಗ ಜನರ ಆರೋಗ್ಯದ ಬದಲು ಜನರ ವೈದ್ಯಕೀಯ ಅಗತ್ಯತೆಗಳ ಬಗ್ಗೆ ಗಮನ ಹರಿಸಿದೆ. ಆರೋಗ್ಯ ಬಗ್ಗೆ ಗಮನ ಹರಿಸದಿರುವುದು ನಿರ್ಲಕ್ಷ್ಯವಲ್ಲವೇ, ಇತರರು ಸುಲಿಗೆ ಮಾಡಲು ಬಿಟ್ಟಂತಲ್ಲವೇ?. ಇಂದು ವಿಜ್ಞಾನ ಅಪಾರವಾಗಿ ಬೆಳೆದಿದೆ. ಕೃಷಿ ಕ್ಷೇತ್ರವನ್ನು ಸರ್ಕಾರಗಳು ಕಡೆಗಣಿಸಿದರೂ, ಆಹಾರ ಪದಾರ್ಥಗಳು ಅಪಾರವಾಗಿ ದೊರಕುತ್ತಿವೆ. ಆದರೆ ವೈದ್ಯಕೀಯ ಸೇವೆಯು, ಆಹಾರ ಮುಂತಾದವುಗಳು ಶ್ರೀಮಂತರಿಗೆ ದೊರಕುತ್ತಿವೆ; ಬಡವರಿಗೆ ಕಡೆಗಣಿಸಲ್ಪಟ್ಟಿವೆ. ವೃದ್ಧರಿಗೆ, ಮಕ್ಕಳಿಗೆ, ಮಹಿಳೆಯರಿಗೆ, ಎಸ್.ಸಿ.–ಎಸ್.ಟಿ. ಜಾತಿಗಳವರಿಗೆ ಸುಲಭವಾಗಿ ದೊರಕುತ್ತಿಲ್ಲ. ಈ ಸತ್ಯವನ್ನು ಸರ್ಕಾರಿ ಅಂಕಿ ಅಂಶಗಳಲ್ಲೇ ಕಾಣಬಹುದು. ಈ ತಾರತಮ್ಯ, ಅವೈಜ್ಞಾನಿಕ ನೀತಿಗಳಿಗೆ ಸರ್ಕಾರವೇ ಕಾರಣ.

ಜನರಿಗೆ ಆರೋಗ್ಯ ದೊರಕಬೇಕು, ಜನಾರೋಗ್ಯ ಸುಧಾರಿಸಬೇಕು, ಇದು ಕೇವಲ ಆಸ್ಪತ್ರೆ ಔಷಧಿ, ವೈದ್ಯರಿಂದ ಸಾಧ್ಯವಿಲ್ಲ. ಆರೋಗ್ಯ ನೀತಿ ರೂಪುಗೊಳ್ಳಬೇಕು ಹಾಗೂ ಜನರು ಆ ವ್ಯವಸ್ಥೆಯನ್ನೂ ಬಳಸಲು ತಯಾರಾಗಬೇಕು. ಅದು ಹಾಗಾಗದಿದ್ದರೆ ಆರೋಗ್ಯ ಒಂದು



ಸೇವೆಯಾಗುವುದಿಲ, ಸುಲಿಗೆಯಾಗುತ್ತದೆ. ಜನರ ಆರೋಗ್ಯ ಸಾಧಿಸಲು ಸರ್ಕಾರದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅವಶ್ಯಕತೆ ಇದೆ. ಆಸ್ಪತ್ರೆಗಳು ಜನರ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ಜವಾಬ್ದಾರಿ ತೆಗೆದುಕೊಳ್ಳಲಾರರು.

ಇಂದು ನಮ್ಮ ಸಮಾಜದಲ್ಲಿಯ ರೋಗ ಸಮಸ್ಯೆಗಳನ್ನು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯಿಂದ ಸರಿಪಡಿಸಬಹುದು. ಇಂದು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನೂ ನೀಡುವ ವೈದ್ಯರು ಖಾಸಗಿ ವೈದ್ಯರಾಗಿದ್ದಾರೆ. ಅವರಿಗೆ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ಬಗ್ಗೆ ಮಾಹಿತಿಯೂ ಇಲ್ಲ. ಅವರಿಗೆ ವೈದ್ಯಕೀಯದಲ್ಲಿ ಮೇಲಿಂದ ಮೇಲೆ ಮುಂದುವರಿದ ಕಲಿಕೆಯೂ ದೊರಕುತ್ತಿಲ್ಲ. ಇಂದು ಅವರು ರೋಗಿಗೆ ಔಷಧಿ ಬರೆದು ಕೊಡುವ, ಆಸ್ಪತ್ರೆಯಲ್ಲಿ ದಾಖಲಿಸುವ ವೈದ್ಯರಾಗಿದ್ದಾರೆ.

ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ವಿವಿಧ ಆಯಾಮವನ್ನು ಅರಿಯದಾಗಿದ್ದಾರೆ. ಆದ್ದರಿಂದ ಜನರ ಚಿಕಿತ್ಸೆಯನ್ನು ಸುಲಿಗೆ ಎನ್ನಬಹುದಾಗಿದೆ. ಇನ್ನು ಕೆಲವು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ವೈದ್ಯರು ಸರ್ಕಾರಿ ಆಸ್ಪತ್ರೆಯಲ್ಲಿದ್ದಾರೆ ಹಾಗೂ ಅವರು ಅಲ್ಲಿಯ ಜನದಟ್ಟಣೆಯಿಂದಾಗಿ ಜನರಿಗೆ ಸಮರ್ಪಕ ಚಿಕಿತ್ಸೆ ನೀಡಲಾಗುತ್ತಿಲ್ಲ. ಇದನ್ನು ಸುಲಿಗೆ ಅನ್ನಲಾಗದಿದ್ದರು, ಇದನ್ನು ಸಮಾಜದ ಚಿಕಿತ್ಸೆ ಎನ್ನಲು ಸಾಧ್ಯವಿಲ್ಲ.

ಇನ್ನು ಆಸ್ಪತ್ರೆಯಲ್ಲಿ ದ್ವಿತೀಯ ಹಾಗೂ ತೃತೀಯ ಹಂತದ ಆರೋಗ್ಯ ಸೇವೆಗಳನ್ನು ನೀಡಲಾಗುತ್ತಿದೆ. ಆದರೆ ಅಲ್ಲಿ ಚಿಕಿತ್ಸೆ ದುಬಾರಿ. ಸರ್ಕಾರ ಅಲ್ಲಿಯ ಚಿಕಿತ್ಸೆ ಬಗ್ಗೆ ಯಾವುದೇ ಅಧ್ಯಯನ ಮಾಡಿ ನ್ಯೂನತೆಗಳನ್ನೂ ಸರಿಪಡಿಸಿಲ್ಲ ಹಾಗೂ ಇದರಿಂದಾಗಿ ಇವನ್ನೂ ಸುಲಿಗೆ ಎನ್ನಬಹುದು!

ನಮ್ಮ ದೇಶದಲ್ಲಿ ಆಸ್ಪತ್ರೆಗಳಿಗೆ ಹೋದರೆ ನಿಮಗೆ ಅವರು ಹೇಳುವುದು ನಿಮ್ಮ ಹತ್ತಿರ ಇನ್ಶೂರೆನ್ಸ್ ಇದೆಯೇ ಎಂದು. ನಿಮ್ಮ ಹತ್ತಿರ ಇನ್ಶೂರೆನ್ಸ್ ಇದ್ದರೆ, ನಿಮ್ಮಿಂದ ಹೆಚ್ಚು ಸುಲಿಗೆ ಸಾಧ್ಯ. ಆಸ್ಪತ್ರೆಗಳಲ್ಲಿ ಅನಗತ್ಯ ಪರೀಕ್ಷೆ, ಅನಗತ್ಯ ಚಿಕಿತ್ಸೆ, ಅನಗತ್ಯ ಆಪರೇಶನ್ ಮಾಡಿ ನಿರಂತರವಾಗಿ ಸುಲಿಗೆ ಮಾಡಲಾಗುತ್ತಿದೆ. ಸರ್ಕಾರ ಈ ಸುಲಿಗೆಯ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಈಗ ಸರ್ಕಾರವೇ ಇನ್ಶೂರೆನ್ಸ್‌ಗಾಗಿ ಆಯುಷ್ಮಾನ್ ಭಾರತ್ ಎಂಬ ಯೋಜನೆಯನ್ನು ತಯಾರಿಸಿದೆ. ಇದು ಚುನಾವಣಾ ಗಿಮಿಕ್‌ಗಾಗಿ. ಇದು ಯಶಸ್ವಿಯಾಗಲು ಅಪಾರ ಹಣಕಾಸು ಬೇಕು. ಆದ್ದರಿಂದ ಅದು ಈಗ ಕಾರ್ಯರೂಪದಲ್ಲಿದರೂ ಯಶಸ್ವಿಯಾಗಿಲ್ಲ ಎನ್ನಬಹುದು. ಇದೊಂದು ತರಹದ ಸುಲಿಗೆ ಎನ್ನಬಹುದು.

ಸರ್ಕಾರಿ ಆಸ್ಪತ್ರೆಗಳಲ್ಲಿ ವಿಪರೀತ ಜನ ನಿಬಿಡ ಇರುವುದರಿಂದ ಜನರು ಖಾಸಗಿ ಸೇವೆ ಪಡೆಯಲು ಹೋಗುತ್ತಾರೆ. ಖಾಸಗೀ ಸೇವೆಗಳು (ಕಾರ್ಪೊರೇಟ್ ಆಸ್ಪತ್ರೆಗಳು) ಸುಲಿಗೆಯ ಕೇಂದ್ರಗಳಾಗಿವೆ!

ಜನರಿಗೆ ಉಚಿತ ಸೇವೆಗಳು ದೊರಕಬೇಕು, ವೈಜ್ಞಾನಿಕವಾದ ಚಿಕಿತ್ಸೆ ದೊರಕಬೇಕು ಹಾಗೂ ಎಲ್ಲರಿಗೂ ಎಲ್ಲ ಸಮಯದಲ್ಲೂ ಎಲ್ಲ ರೀತಿಯ ಚಿಕಿತ್ಸೆಗಳು ದೊರಕಬೇಕು. ಅಂತಹ ಚಿಕಿತ್ಸೆಯನ್ನು ಸುಲಿಗೆ ರಹಿತ ಎನ್ನಬಹುದು. ಜನಾರೋಗ್ಯ ವ್ಯವಸ್ಥೆ



ಸರಿಯಾಗಿದ್ದರೆ ಮಾತ್ರ ಇದು ಸಾಧ್ಯ. ಇಂದು ಆಯುರ್ವೇದ, ಹೋಮಿಯೋಪತಿ, ಯುನಾನಿ ಚಿಕಿತ್ಸೆಗಳನ್ನು ಸರ್ಕಾರವೇ ಮಾನ್ಯ ಮಾಡಿದೆ. ಆದರೆ ಆ ಪದ್ಧತಿಗಳಲ್ಲಿ ಯಾವುದು ಸಮಂಜಸ ಚಿಕಿತ್ಸೆ ಎಂದು ತೀರ್ಮಾನಿಸಲಾಗಿಲ್ಲ. ಕೇವಲ ನಮ್ಮ ಪುರಾತನ ವೈದ್ಯ ಪದ್ಧತಿಯನ್ನೂ ಪ್ರೋತ್ಸಾಹಿಸಲು ಈ ಪದ್ಧತಿಯು ಜಾರಿಗೆ ಬಂದಿದೆ. ಆ ಚಿಕಿತ್ಸೆಗಳ ಬಗ್ಗೆ ಭ್ರಮ ಹುಟ್ಟಿಸಲಾಗಿದೆ. ಆ ಚಿಕಿತ್ಸೆ ನೀಡುವ ಖಾಸಗೀ ಕೇಂದ್ರಗಳಿವೆ. ಅಲ್ಲಿ ಅಪಾರ ಸುಲಿಗೆಯಾಗುತ್ತಿದೆ. ಇದನ್ನು ಸರ್ಕಾರ ತಡೆಯುವ ಯೋಚನೆಗೂ ಹೋಗುವುದಿಲ್ಲ.

ಭಾರತದಲ್ಲಿ ಖೋಟ ವೈದ್ಯರ ಹಾವಳಿ ಅಪಾರ. ಅವರ ಬಗ್ಗೆ ಹೇಳುವುದಾದರೆ ಸರ್ಕಾರ ಅವರ ಮೂಲತ ಸುಲಿಗೆಯನ್ನು ಮಾಡಲು ಪರವಾನಗಿ ಕೊಟ್ಟಿದೆಯೆಂದು!

ಆರೋಗ್ಯವೆಂದರೆ ದೈಹಿಕ, ಮಾನಸಿಕ ಸಾಮಾಜಿಕ ಆಯಾಮಗಳಿರುತ್ತವೆ. ಆದರೆ 95% ವೈದ್ಯರು ಕೇವಲ ದೈಹಿಕ ಆಯಾಮಕ್ಕೆ ಮಹತ್ವ ನೀಡುತ್ತಾರೆ. ಇಂದು ಜನರಿಗೆ ಮಾನಸಿಕ ಸಮಸ್ಯೆಗಳನ್ನು ತಡೆಗಟ್ಟಲು, ಮಾನಸಿಕ ಚಿಕಿತ್ಸೆಯೊಂದಿಗೆ, ರೋಗಿಗೆ ನೆಮ್ಮದಿ ನೀಡಲು ಆಪ್ತಸಮಾಲೋಚನೆ ಅಗತ್ಯವಿದೆ. ಅದರ ಬಗ್ಗೆ ಸರ್ಕಾರ ದಿವ್ಯ ನಿರ್ಲಕ್ಷ್ಯ ತೋರಿಸಿದೆ. ಯಾವುದೇ ರೋಗವನ್ನು ತಡೆಗಟ್ಟಲು ಸಾಧ್ಯವಿಲ್ಲದ, ಯಾವುದೇ ರೋಗವನ್ನು ಗುಣಪಡಿಸಲು ಸಾಧ್ಯವಿಲ್ಲದ, ರೋಗದ ಬಗ್ಗೆ ಅಪಪ್ರಚಾರ ಮಾಡಿ, ಸರ್ಕಾರವೇ ಸುಲಿಗೆಗೆ ಕಾರಣವಾಗಿದೆ!. ಅನೇಕ ಬಾರಿ ಎಲ್ಲ ವಿಧಾನಗಳಿಂದ ರೋಗ ಗುರುತಿಸಲ್ಪಡದೇ ಹೋಗುತ್ತಾರೆ. ಅನೇಕ ಬಾರಿ ಚಿಕಿತ್ಸೆ ನಿರಾಕರಿಸಲ್ಪಡುತ್ತಾರೆ ಹಾಗೂ ಸಾವೂ ಸಂಭವಿಸುತ್ತದೆ. ಇದು ಸುಲಿಗೆಯ ಹೆಚ್ಚುವರಿ!

ವ್ಯವಸ್ಥೆಯಲ್ಲಿ ವೈದ್ಯರ ಪಾತ್ರ ಹಿರಿದು. ಆದರೆ ವೈದ್ಯರು ಎಲ್ಲವನ್ನೂ ತಿಳಿದೂ ತಿಳಿಯದಂತೆ ಇದ್ದಾರೆ. ಸಮಂಜಸ ವಿಶ್ಲೇಷಣೆ ಮಾಡಿ ಆರೋಗ್ಯ ಜನಾರೋಗ್ಯದ ಬಗ್ಗೆ ಸರ್ಕಾರಕ್ಕೆ ಸೂಕ್ತ ನಿಲುವು ನೀಡಲಾಗಿದ್ದರೆ. ಖಾಸಗಿ ವೈದ್ಯರು ಸುಲಿಗೆ ಮಾಡಲು ಮುಂದಾಗಿದ್ದಾರೆಂದರೆ ತಪ್ಪಾಗುವುದಿಲ್ಲ!

ಜನಸಾಮಾನ್ಯರು ಪ್ರಜಾಪ್ರಭುತ್ವದಲ್ಲಿ ಮುಖ್ಯ ಪಾತ್ರವಹಿಸುತ್ತಾರೆ. ಆದರೆ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ದುರ್ಬಲ ಆಗಿದೆ. ಜನರಿಗೆ ತಮ್ಮ ಹಕ್ಕು ಗೊತ್ತಿಲ್ಲ. ಚಿಕಿತ್ಸೆ ವಿಷಯದಲ್ಲಿ ದಿಕ್ಕು ತೋಚದೇ ಎಲ್ಲವನ್ನು ನಂಬುತ್ತಾರೆ. ನಿರಂತರವಾಗಿ ಸುಲಿಗೆಗೆ ಬಲಿಯಾಗುತ್ತಾರೆ. ಅನೇಕ ಬಾರಿ ಈ ವಿವಿಧ ವೈದ್ಯಕೀಯ ಪದ್ಧತಿಗಳಿಂದ ಗೊಂದಲಗೊಂಡು ತಪ್ಪು ತೀರ್ಮಾನ ತೆಗೆದುಕೊಳ್ಳುತ್ತಾರೆ.

ಇಂದು ಸುಲಿಗೆಗೆ ನಮ್ಮ ಆರೋಗ್ಯ ವ್ಯವಸ್ಥೆ ಕಾರಣ. ವ್ಯವಸ್ಥೆ ಸರಿಯಾಗಿದ್ದರೆ ವೈದ್ಯರ ಸುಲಿಗೆಗೆ ಜನರು ತುತ್ತಾಗುತ್ತಿರಲಿಲ್ಲ. ಸರ್ಕಾರ ಈಗಲಾದರೂ ಈ ವ್ಯವಸ್ಥೆ ಸರಿಪಡಿಸಲು ಮುಂದಾಗುತ್ತದೆಯೇ. ಇಂದಿನ ಪರಿಸ್ಥಿತಿಯಲ್ಲಿ ಯಾವ ಸರ್ಕಾರವೂ ಆರೋಗ್ಯ ಪರಿಸ್ಥಿತಿಯನ್ನೂ ಸರಿಪಡಿಸಿ ಸುಲಿಗೆಯನ್ನೂ ತಡೆಗಟ್ಟಲು ಸಾಧ್ಯವಿಲ್ಲ. ಎಲ್ಲ ಸರ್ಕಾರಗಳು ಇದನ್ನೂ ಸಾಬೀತು ಪಡಿಸಿವೆ. ಇದಕ್ಕೆ ಒಂದೇ ಪರಿಹಾರ ಆರೋಗ್ಯವನ್ನು ರಾಷ್ಟ್ರೀಕರಣಗೊಳಿಸುವುದು.

ಆರೋಗ್ಯ ವ್ಯವಸ್ಥೆ ರಾಷ್ಟ್ರೀಕರಣಗೊಂಡರೂ ಆ ವ್ಯವಸ್ಥೆ ಮೇಲೆ ಸರ್ಕಾರ, ಜನರು ನಿರಂತರ ಹದ್ದಿನ ಕಣ್ಣು ಇಟ್ಟರೆ ಮಾತ್ರ, ವ್ಯವಸ್ಥೆ ಸುಲಿಗೆ ರಹಿತವಾಗಲು ಸಾಧ್ಯ.

ನಮ್ಮ ಸಂವಿಧಾನಕ್ಕೆ ಬಿದ್ದಿರುವ ದಳ್ಳುರಿ...... ಪುಟ 6 ರಿಂದ

ಅಲ್ಲಿ ಕರ್ತವ್ಯಗಳನ್ನು ನೀಡಬೇಕಾಗಿತ್ತು ಎಂದಿದ್ದಾರೆ (10ನೆಯ ದುರ್ಗಾ ದಾಸ್ ಬಸು ಸ್ಮಾರಕ ಉಪನ್ಯಾಸ, ಫೆಬ್ರವರಿ 11, 2017). ಅವರ ಮಾತುಗಳು ಹೀಗಿವೆ: 'ಆದ್ದರಿಂದ, ಸಾಮಾಜಿಕ ಬದುಕಿನ ಅಡಿಪಾಯವಾಗಿ ಹಕ್ಕುಗಳನ್ನು ಮತ್ತು ಹಕ್ಕುಗಳನ್ನು ಆಧಾರ ಮಾಡಿಕೊಂಡ ಸಮಾಜವನ್ನು ಸ್ಥಾಪಿಸುವುದಕ್ಕೆ ಪ್ರತಿಯಾಗಿ ಈ ಭೂಮಿಯ ಪ್ರಾಚೀನ ತತ್ವಶಾಸ್ತ್ರಜ್ಞರು ಕರ್ತವ್ಯಗಳನ್ನು ಆಧಾರ ಮಾಡಿಕೊಂಡ ಸಮಾಜದ ಸ್ಥಾಪನೆಯನ್ನು ಬಯಸಿದ್ದರು. ಅಲ್ಲಿ ನಾಗರಿಕರಿಗೆ ನೀಡಿರುವ ಹಕ್ಕು ಎಂದರೆ ಕರ್ತವ್ಯವನ್ನು ನಿರ್ವಹಿಸುವ ಹಕ್ಕು' ಎಂದು ಹೇಳಿ ಮನುಷ್ಯರಿಗಿರುವುದೊಂದೇ ಹಕ್ಕು: ಅದು ಕರ್ತವ್ಯವನ್ನು ನಿರ್ವಹಿಸುವುದು' ಎಂದು ಅವರು ಭಗವದ್ಗೀತೆಯ 'ಕರ್ಮಣ್ಯೇವಾಧಿಕಾರಸ್ತೆ' ಎಂಬ ಉಕ್ತಿಯನ್ನು ಉಲ್ಲೇಖಿಸುತ್ತಾ 'ನಿಮ್ಮ ಹಕ್ಕು ಎಂದರೆ ಕರ್ತವ್ಯವನ್ನು ನಿರ್ವಹಿಸುವುದು' ಎಂದು ಘೋಷಿಸುತ್ತಾರೆ. ಶತಶತಮಾನಗಳಿಂದ ವೈದಿಕವು ಶೂದ್ರರಿಗೆ ಮತ್ತು ಅತಿಶೂದ್ರರಿಗೆ ಮೇಲಿನ ಮೂರು ವರ್ಣಗಳ ಸೇವೆ ಮಾಡುವ ಕರ್ತವ್ಯವನ್ನು ಹೇರುತ್ತಾ ಬಂದಿತ್ತು. ಇದನ್ನು ಊರ್ಜಿತಗೊಳಿಸುವುದು ಸಂವಿಧಾನ ವಿರೋಧಿ ಬಣಗಳ ಉದ್ದೇಶವಾಗಿದೆ. ಇಲ್ಲಿ ಕರ್ತವ್ಯವೆಂದರೆ ಸೇವೆ ಎನ್ನುವ ಅರ್ಥವೂ ಇದೆ. 'ಸೇವೆ' ಎನ್ನುವುದು ವೈದಿಕ ಪರಿಭಾಷೆ.

ಜಸ್ಟೀಸ್ ರಾಮ ಜೋಯಿಸ್ ಅವರ ಈ ಹೇಳಿಕೆಯಲ್ಲಿರುವ 'ಈ ಭೂಮಿಯ ಪ್ರಾಚೀನ ತತ್ವಶಾಸ್ತ್ರಜ್ಞರು' ಎಂದರೆ ಯಾರು? ಈ ತತ್ವಶಾಸ್ತ್ರದ ಕೃತಿಗಳಾವುವು?. ಇದಲ್ಲದೆ ಅವರು ತಮ್ಮ ಕೃತಿಗಳಲ್ಲಿ ಮತ್ತೆ ಮತ್ತೆ ಡಾ. ಬಿ. ಆರ್. ಅಂಬೇಡ್ಕರ್ ಸಂವಿಧಾನಕ್ಕೆ ಪ್ರತಿಯಾಗಿ 'ಭಾರತೀಯ ಪರಂಪರೆಯ ಸಂವಿಧಾನ' ಎಂಬ ನುಡಿಯನ್ನು ಬಳಸುತ್ತಾರೆ. ಆರ್ಗನೈಸರ್ ಎಂಬ ಪರಿವಾರದ ಪತ್ರಿಕೆಯಲ್ಲಿ 1949ರಲ್ಲಿ ಈ ಬಗ್ಗೆ ಬರೆದ ಮಾತುಗಳು ಇವು: 'ಹಿಂದೂರಾಷ್ಟ್ರದಲ್ಲಿ ವೇದಗಳ ನಂತರ ಅತಿಮುಖ್ಯವಾಗಿ ಆರಾಧಿಸುವ ಗ್ರಂಥವೆಂದರೆ ಮನುಸ್ಮೃತಿ' (ಆರ್ಗನೈಸರ್, ನವೆಂಬರ್ 3, 1949). ಈ ಪರಿವಾರದ ಪವಿತ್ರ ಕೃತಿ ಬಂಚ್ ಆಫ್ ಥಾಟ್ಸ್ ನಲ್ಲಿ '--- ನಮ್ಮ ಸಂವಿಧಾನದಲ್ಲಿ ವಿಶಿಷ್ಟವಾದ ಭಾರತೀಯ ಸಾಂವಿಧಾನಿಕ ಬೆಳವಣಿಗೆ ಬಗ್ಗೆ ಉಲ್ಲೇಖಗಳೇ ಇಲ್ಲ' (ಬಂಚ್ ಆಫ್ ಥಾಟ್ಸ್ , 1966, ಪು. 238) ಎಂದು ಡಾ. ಬಿ. ಆರ್. ಅಂಬೇಡ್ಕರ್ ಪ್ರಣೀತ ಸಂವಿಧಾನವನ್ನು ಟೀಕಿಸುತ್ತಿದ್ದಾರೆ.

ಇವರು ರಾಜಧರ್ಮ, ರಾಜನ ಕರ್ತವ್ಯ ಮತ್ತು ಬದುಕಿನ ಗುರಿಗಳು ಎನ್ನುವ ಧರ್ಮ, ಅರ್ಥ, ಕಾಮಗಳ ಬಗ್ಗೆ ಮಾತನಾಡುತ್ತಾರೆ. ಅವರು ಉಲ್ಲೇಖಿಸುವ ಕೃತಿಗಳೆಂದರೆ ವೇದಗಳು, ಮನುಧರ್ಮಶಾಸ್ತ್ರ, ಭಗವದ್ಗೀತೆ, ಮಹಾಭಾರತ, ರಾಮಾಯಣ, ಚಾಣುಕ್ಯನ ಅರ್ಥಶಾಸ್ತ್ರ ಇತ್ಯಾದಿ. ಆದರೆ ಇವರು ತಮ್ಮ ಮನುಸ್ಮೃತಿಯನ್ನು ಆಧರಿಸಿದ ಸೂತ್ರಗಳಲ್ಲಿ ಸಮಾನತೆಯ ಬಗ್ಗೆ, ಅಸ್ಪೃಶ್ಯತೆ ನಿವಾರಣೆ, ಅತಿಶೂದ್ರರನ್ನು ಚಾತುರ್ವರ್ಣದಲ್ಲಿ ಸೇರಿಸಿಕೊಳ್ಳದಿರುವುದರ ಬಗ್ಗೆ, ಚಾತುರ್ವರ್ಣದ ಬಗ್ಗೆ ಚಕಾರವೆತ್ತುವುದಿಲ್ಲ. ಇವರ ಪ್ರಕಾರ ಪಶ್ಚಿಮದಿಂದ ಬಂದದ್ದೆಲ್ಲವನ್ನು ತಿರಸ್ಕರಿಸಬೇಕು. ಅವುಗಳಲ್ಲಿ ಒಳ್ಳೆಯದಿದ್ದರೆ ಅವುಗಳನ್ನು ಆಯ್ಕೆ ಮಾಡಿಕೊಳ್ಳೋಣ ಎಂಬ ಮಾತನ್ನು ನೆಪ ಮಾತ್ರಕ್ಕೆ ಬರೆಯುತ್ತಾರೆ. ಡಾ. ಬಿ. ಆರ್ ಅಂಬೇಡ್ಕರ್ ಪ್ರಣೀತ ಸಂವಿಧಾನ ವಿರೋಧಿಗಳು ತಮ್ಮ ಹೇಳಿಕೆಗಳಲ್ಲಿ ಸೌಜನ್ಯಕ್ಕಾದರೂ ಮಹಿಳೆಯರ ಬಗ್ಗೆ, ಲಿಂಗ ಅಸಮಾನತೆಯ ಬಗ್ಗೆ, ಮಹಿಳೆಯರ ಹಕ್ಕುಗಳ ಬಗ್ಗೆ ಮಾತನಾಡುವುದಿಲ್ಲ. ಈ ವಿಷಯದಲ್ಲಿ ಭಾರತೀಯ ಪರಂಪರೆಯ ಕೊಡುಗೆಯೇನು ಎಂಬುದನ್ನು ಇವರು ಹೇಳುವುದಿಲ್ಲ. ಚಾತುರ್ವರ್ಣ ನಿಯಮದ ಪ್ರಕಾರ ಶೂದ್ರರ ಕರ್ತವ್ಯವೆಂದರೆ ಮೇಲಿನ ಮೂರು ವರ್ಣಗಳ ಸೇವೆ ಮಾಡುವುದು. ಈ ವ್ಯವಸ್ಥೆಯನ್ನು ಊರ್ಜಿತಗೊಳಿಸುವುದರ ಬಗ್ಗೆ ಜಸ್ಟೀಸ್ ರಾಮ ಜೋಯಿಸ್ ಮಾತನಾಡುತ್ತಿದ್ದಾರೆ. ಅವರ ಪ್ರಕಾರ 'ನ್ಯಾಯ' ಮತ್ತು 'ಧರ್ಮ'ಗಳು ಅಭಿನ್ನ.

ಅಚ್ಛೇ ದಿನ್‌ಗಳಿಗೆ ವಿದಾಯ: ಮೋಡಗಳಾಚೆಯಿಂದ ಮೋದಿ 2.0



ಚಿತ್ರಕೃಪೆ: ನ್ಯೂಸ್‌ಲಾಂಡ್ರಿ

2019ರ ಸಾರ್ವತ್ರಿಕ ಚುನಾವಣೆಗಳ ತೀರ್ಪು ಎಲ್ಲರನ್ನೂ ಒಳಗೊಳ್ಳುವ ದೇಶ ನಿರ್ಮಾಣಕ್ಕಾಗಿ ನವಭಾರತದಿಂದ ಬಂದಿರುವ ಜನಾದೇಶ ಎಂದಿರುವ ನರೇಂದ್ರ ಮೋದಿಯವರು ತನ್ನ ಎರಡನೇ ಆಡಳಿತಾವಧಿಯಲ್ಲಿ ದುರುದ್ದೇಶದಿಂದ, ಕೆಟ್ಟ ಆಶಯದಿಂದ ಏನನ್ನೂ ಮಾಡುವುದಿಲ್ಲ, ತಪ್ಪು ಮಾಡಬಹುದು, ಆದರೆ ಎಂದೂ ದುರ್ಭಾವನೆಯಿಂದ ಮಾಡುವುದಿಲ್ಲ ಎಂದು ತಮ್ಮ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತಾಡುತ್ತ ಪ್ರತಿಜ್ಞೆ ಕೈಗೊಂಡಿದ್ದಾರೆ. ಅವರು ಇನ್ನೂ ಎರಡು ಪ್ರತಿಜ್ಞೆಗಳನ್ನು ಮಾಡಿದ್ದಾರೆ. ಅವರ ಕೆಲಸವನ್ನು ವಿಮರ್ಶಿಸುವಾಗ ಇವನ್ನು ಗಮನದಲ್ಲಿಟ್ಟು ಕೊಳ್ಳಬೇಕಂತೆ.

ಏಳು ಸುತ್ತುಗಳ ಸಾರ್ವತ್ರಿಕ ಚುನಾವಣೆಗಳು ಮುಗಿಯುತ್ತಿದ್ದಂತೆ ಬಯಲಿಗೆ ಬಂದಿರುವ ಕೆಲವು ಸಂಗತಿಗಳ ಹಿನ್ನೆಲೆಯಲ್ಲಿ ಈ ಪ್ರತಿಜ್ಞೆಗಳನ್ನು ಪರೀಕ್ಷಿಸಬೇಕು ಎಂಬುದು ಅವರ ಆಶಯವಿರಲಿಕ್ಕಿಲ್ಲ. ಇದು ಬಹುಶಃ ಅಚ್ಛೇ ದಿನ್ ಇತ್ಯಾದಿ ಜುಮ್ಲಾಗಳೇ ಇರದ ಮುಂದಿನ ಐದು ವರ್ಷಗಳಿಗೆ ಮಾತ್ರ ಅನ್ವಯವಾಗುವಂತದ್ದು. ಅದೇನೇ ಇರಲಿ, ಆ ಸಂಗತಿಗಳನ್ನು ನೋಡೋಣ. ಒಬ್ಬ ಟ್ವಿಟರಿಗ ಈ ಪಟ್ಟಿಯನ್ನು ತಯಾರಿಸಿದ್ದಾರೆ:

- ಸಿಬಿಐ ಬೊಫೋರ್ಸ್ ಬಗ್ಗೆ ಕೋರ್ಟಿನಲ್ಲಿ ಹಾಕಿರುವ ಅರ್ಜಿಯನ್ನು ಹಿಂತೆಗೆದುಕೊಂಡಿದೆ.
- ಮುಲಾಯಂ ಸಿಂಗ್ ಯಾದವ್ ಮತ್ತು ಅಖಿಲೇಶ್ ಯಾದವ್ ವಿರುದ್ಧ ಆದಾಯಕ್ಕೆ ಮೀರಿ ಆಸ್ತಿ ಹೊಂದಿರುವ ಕೇಸುಗಳಲ್ಲಿ ಸಾಕ್ಷ್ಯಾಧಾರಗಳಿಲ್ಲ ಎಂದು ಸಿಬಿಐ ಹೇಳಿದೆ.
- ಚುನಾವಣಾ ಆಯೋಗದ ಒಬ್ಬ ಆಯುಕ್ತರು ಬಹಿರಂಗವಾಗಿ ಭಿನ್ನಮತ ವ್ಯಕ್ತಪಡಿಸಿದ್ದಾರೆ
- ಪೆಟ್ರೋಲ್ ಬೆಲೆಗಳು ಕೊನೆಯ ಸುತ್ತಿನ ನಂತರ ಏರಿವೆ.
- ನಮೋ ಟಿವಿ ಕಾಣೆಯಾಗಿದೆ.
- ಎಲ್ಲಕ್ಕೂ ಮಿಗಿಲಾಗಿ ಭಾರತೀಯ ವಾಯುಪಡೆ ತನ್ನದೇ ಹೆಲಿಕಾಪ್ಟರನ್ನು ಹೊಡೆದು ಉರುಳಿಸಿರುವುದಾಗಿ ಪರೋಕ್ಷವಾಗಿ ಒಪ್ಪಿಕೊಂಡಿದೆ.

ಈ ಕೊನೆಯದ್ದು ಈ ಚುನಾವಣೆಗಳಲ್ಲಿ ಪ್ರಮುಖ ಪಾತ್ರ ವಹಿಸಿದಂತೆ ಕಾಣುತ್ತಿರುವ ಪುಲ್ವಾಮ, ಬಾಲಾಕೋಟ್ ಮತ್ತು ರಾಷ್ಟ್ರೀಯ ಭದ್ರತೆಯ ಮಾತುಗಳ ಸಂದರ್ಭದಲ್ಲಿ ಗಮನಾರ್ಹ(ಸಬ್‌ರಂಗ್, ಮೇ 22).

ಫೆಬ್ರುವರಿ 27ರಂದು, ಅಂದರೆ ಪುಲ್ವಾಮ ಭಯೋತ್ಪಾದಕ ದಾಳಿಗೆ ಉತ್ತರವಾಗಿ ಭಾರತೀಯ ವಾಯುಪಡೆಯ ವಿಮಾನಗಳು ಬಾಲಾಕೋಟ್ ಮೇಲೆ ಪ್ರಹಾರ ನಡೆಸಿದ ಮರುದಿನ ಕಾಶ್ಮೀರದ ಬುಡ್ಗಾಮ್‌ನಲ್ಲಿ ವಾಯುಪಡೆಯ ಹೆಲಿಕಾಪ್ಟರ್ ಒಂದು ಕ್ಷಿಪಣಿ ದಾಳಿಗೆ ಗುರಿಯಾಗಿ. ಅದರಲ್ಲಿದ್ದ ಆರು ಸಿಬ್ಬಂದಿ ಮತ್ತು ಒಬ್ಬ ಭಾರತೀಯ ನಾಗರಿಕ ಮೃತಪಟ್ಟರು. ಆ ವೇಳೆಗೆ ಪಾಕಿಸ್ತಾನೀ ವಾಯುಪಡೆಯ ಎಫ್–16 ವಿಮಾನವನ್ನು ಹೊಡೆದುರುಳಿಸಿದ್ದು ಮತ್ತು ವಿಂಗ್ ಕಮಾಂಡರ್ ಅಭಿನಂದನ್ ವಾಪಸಾತಿಯ ಅಬ್ಬರದ ನಡುವೆ ಈ ಸುದ್ದಿ ಮುಚ್ಚಿ ಹೋಯಿತು. ಆದರೆ ಆಗಲೇ ಈ ದುರ್ಘಟವೆ ‘ಫ್ರೆಂಡ್ಲಿ’ ಪ್ರಹಾರದಿಂದ ಆಗಿರಬಹುದು ಎಂದು ಮಾಜಿ ಜಮ್ಮು –ಕಾಶ್ಮೀರ ಮುಖ್ಯಮಂತ್ರಿ ಹಾಗೂ ಕೆಲವು ಪತ್ರಿಕೆಗಳು ಗುಮಾನಿ ವ್ಯಕ್ತಪಡಿಸಿದ್ದರು. ಅದರೆ ವಾಯುಪಡೆ ಮತ್ತು ಸರಕಾರ ಈ ಬಗ್ಗೆ ಪ್ರತಿಕ್ರಿಯಿಸಲಿಲ್ಲ.

ಈಗ, ಈ ಬಗ್ಗೆ ತನಿಖೆ ನಡೆದಿದ್ದು, ಈ ದುರ್ಘಟನೆ ನಮ್ಮ ವಾಯುಪಡೆಯ ಲೋಪದಿಂದಲೇ ನಡೆದಿದೆ ಎಂದು ದೃಢ ಪಟ್ಟಿದ್ದರೂ, ಈ ಬಗ್ಗೆ ಚುನಾವಣೆಗಳು ಮುಗಿಯುವ ವರೆಗೆ ‘ನಿಧಾನವಾಗಿ ಮುಂದುವರೆಯಬೇಕು’ ಎಂದು ‘ಮೇಲಿನಿಂದ’ ಆದೇಶವಿದ್ದುದಾಗಿ ರಕ್ಷಣಾ ವಿಶ್ಲೇಷಕರೊಬ್ಬರು ಹೇಳಿರುವುದಾಗಿ ವರದಿಯಾಗಿದೆ.

ಭಾರತೀಯ ವಾಯುಪಡೆ ಈ ವಿಷಯದಲ್ಲಿ ತನ್ನ ಕೆಲವು ಅಧಿಕಾರಿಗಳ ಮೇಲೆ ‘ಕೊಲೆಯೆಂದಾಗದ ದಂಡನೀಯ ನರಹತ್ಯೆ’ಯ ಆರೋಪ ಹಾಕಲಿರುವುದಾಗಿ ಮೇ 21ರಂದು ಅಂದರೆ ಕೊನೆಯ ಸುತ್ತಿನ ಮತದಾನದ ಎರಡು ದಿನಗಳ ನಂತರ ವರದಿ ಮಾಡಿದವು. ಈಗಾಗಲೇ ಇಬ್ಬರು ಹಿರಿಯ ಅಧಿಕಾರಿಗಳ ಮೇಲೆ ಶಿಸ್ತುಕ್ರಮಗಳನ್ನು ಕೈಗೊಳ್ಳಲಾಗಿದೆಯಂತೆ. ಚುನಾವಣಾ ಸಮರದಲ್ಲಿ, ಆಚಾರ ಸಂಹಿತೆಯನ್ನು ಉಲ್ಲಂಘಿಸಿಲ್ಲ ಎಂಬ ಕ್ಲೀನ್ ಚಿಟ್‌ಗಳೊಂದಿಗೆ ಬಾಲಾಕೋಟ್ ಕಾರ್ಯಾಚರಣೆ ಮತ್ತು ಎಫ್–16 ವಿಮಾನ ಹೊಡೆದುರುಳಿಸಿದ ‘ಎದೆಗಾರಿಕೆ’ಯ ಪ್ರಚಾರ ಬಾಚಿಕೊಂಡವರಿಗೆ ಮುಜುಗರವಾಗದಿರಲಿ ಎಂದು ಈ ಸುದ್ದಿ ವಿಳಂಬವಾಗಿ ಬೆಳಕಿಗೆ ಬಂದಿದೆ ಎಂದು ಹೇಳಲಾಗುತ್ತಿದೆ.



ಸರಕಾರ ತನ್ನ ಉಳಿದ ಕ್ಲೀನ್‌ಚಿಟ್‌ಗಳನ್ನು ಮರುಹಂಚುತ್ತಿದೆಯೇ?
ವ್ಯಂಗ್ಯಚಿತ್ರ: ಆರ್.ಪ್ರಸಾದ್

ಇದಲ್ಲದೆ ಚುನಾವಣಾ ಪ್ರಚಾರ ಭರದಿಂದ ಸಾಗುತ್ತಿದ್ದಾಗಲೇ, ಅಂದರೆ ಮಾದರಿ ಆಚಾರ ಸಂಹಿತೆ ಜಾರಿಯಲ್ಲಿದ್ದಾಗಲೇ ಪರಿಸರ ರಕ್ಷಣೆಯ ಉದ್ದೇಶದಿಂದ ಪ್ರಕಟಿಸಿದ್ದ ‘ಪರಿಸರ ಪರಿಣಾಮ ನಿರ್ಧಾರಣೆ ಅಧಿಸೂಚನೆ, 2006’ರಲ್ಲಿ ಕೈಯಾಡಿಸಿ ಅದನ್ನು ಉದ್ದಿಮೆದಾರರ ಪರವಾಗಿ ಬದಲಿಸುವ ಕಸರತ್ತು ನಡೆದಿದೆ ಎಂದು ವರದಿಯಾಗಿದೆ(ಸ್ಕ್ರಾಲ್.ಇನ್, ಮೇ 24).

ಅಚ್ಛೇ ದಿನ್‌ಗಳ ಅವಧಿಯಲ್ಲಿ ಪರಿಸರ ಕಾಯ್ದೆಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳು ಸತತವಾಗಿ ನಡೆದಿವೆ ಎಂದೂ ಹೇಳಲಾಗುತ್ತಿತ್ತು. ಇದು ಅರಣ್ಯವಾಸಿಗಳ, ಬುಡಕಟ್ಟು ಜನಗಳ ಮತ್ತು ಅಂಚಿನಲ್ಲಿರುವ ರೈತರ ಹಿತಗಳನ್ನು ಬಲಿಗೊಟ್ಟು ಉದ್ದಿಮೆದಾರರ ಲಾಭಗಳನ್ನು ಹೆಚ್ಚಿಸುವ ಪ್ರಯತ್ನಗಳು ಎಂದು ಬೇರೆ ಹೇಳಬೇಕಾಗಿಲ್ಲ. ಅರಣ್ಯ ಹಕ್ಕುಗಳ ಕಾಯ್ದೆಯನ್ನು ಸುಪ್ರಿಂ ಕೋರ್ಟಿನಲ್ಲಿ ಪಟ್ಟಭದ್ರರ ಪರವಾಗಿ ಪ್ರಶ್ನಿಸುತ್ತಿದ್ದಾಗ ಸರಕಾರೀ ವಕೀಲರ ಗೈರುಹಾಜರಿಯಿಂದಾಗಿ ಲಕ್ಷಾಂತರ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸಲಾರಂಭಿಸಿದ್ದು, ಅದಕ್ಕೆ ತೀವ್ರ ಪ್ರತಿಭಟನೆಯ ನಂತರ ಸರಕಾರ ಎಚ್ಚೆತ್ತುಕೊಂಡು ಸುಪ್ರಿಂ ಕೊರ್ಟಿಗೆ ಧಾವಿಸಿದ್ದು ತೀರಾ ಹಳೆಯ ಸುದ್ದಿಯೇನೂ ಅಲ್ಲ.

ಈ ವಿಷಯ ಮತ್ತೆ ವಿಚಾರಣೆಗೆ ಬರಲಿದೆ. ಜತೆಗೆ ರಫೇಲ್ ವ್ಯವಹಾರದ ಕುರಿತ ಮೊಕದ್ದಮೆಯಲ್ಲಿ ಸರಕಾರ ನ್ಯಾಯಾಲಯವನ್ನು ತಪ್ಪುದಾರಿಗೆಳೆದಿದೆ ಎಂಬುದೂ ವಿಚಾರಣೆಗೆ ಬರಲಿದೆ, ಜತೆಗೆ ರಾಜಕೀಯ ಪಕ್ಷಗಳಿಗೆ ದೇಣಿಗೆಗಳನ್ನು ಪಾರದರ್ಶಕಗೊಳಿಸುವ ಹೆಸರಿನಲ್ಲಿ ತಂದ ಅಪಾರದರ್ಶಕ ಚುನಾವಣಾ ಬಾಂಡು ಎಂಬ ಕ್ರಮದ ವಿಚಾರಣೆಯೂ ಬರಲಿದೆ. ಈ ಎಲ್ಲ ಸಂದರ್ಭಗಳಲ್ಲೂ ಪ್ರಧಾನಿಗಳ ಮೇಲೆ ಹೇಳಿದ ಪ್ರತಿಜ್ಞೆ(ಗಳು) ಹೇಗೆ ಕೆಲಸ ಮಾಡಬಹುದು ಎಂಬುದು ಕುತೂಹಲಕಾರಿ.




ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

“ಮೇ23ರ ನಂತರ ಎನ್‌ಡಿಎ ಅಧಿಕಾರಕ್ಕೆ ಮರಳುವುದಾದರೆ, ನನಗೆ ಯೋಚನೆಯಿಲ್ಲ. ಜೋಕುಗಳು ತಾವಾಗಿಯೇ ಬರೆದುಕೊಳ್ಳುತ್ತವೆ. ಇಲ್ಲವಾದರೆ ನಾನು ಹೆಚ್ಚು ಕಷ್ಟಪಟ್ಟು ಕೆಲಸ ಮಾಡಬೇಕಾಗುತ್ತದೆ”–ಇದು ವ್ಯಂಗ್ಯಚಿತ್ರಕಾರ ಅರವಿಂದ ತೆಗ್ಗಿನಮಠ ರವರ ಫೇಸ್‌ಬುಕ್ ಉದ್ಗಾರ–ಕೊನೆಯ ಸುತ್ತಿನ ಮತದಾನದ ದಿನ.

“2019ರ ಚುನಾವಣೆಗಳಲ್ಲಿ ಏನಾದರೂ ಸೋತಿದ್ದರೆ ಅದು ‘ಗಂಭೀರತೆ’. ಗಂಭೀರ ವಿಷಯಗಳು ಚುನಾವಣೆಯಲ್ಲಿ ಕಾಣೆಯಾದವು. ಆದರೆ ಕಾರ್ಟೂನಿನ ಜಗತ್ತಿನಲ್ಲಿ ಗಂಭೀರ ವಿಷಯಗಳು ಉಳಿದುಕೊಂಡಿವೆ. ಸಂದರ್ಶನ ಆರಂಭವಾಗುತ್ತಿದ್ದಂತೆ ಜನ ನಗಲು ಆರಂಭಿಸುತ್ತಿದ್ದರು. ವ್ಯಂಗ್ಯವಿಲ್ಲದಿದ್ದಿದ್ದರೆ 2019ರ ಚುನಾವಣೆಗೆ ಗಂಭೀರತೆ ಬರುತ್ತಿರಲಿಲ್ಲ. ಪತ್ರಕರ್ತರ ಜಾಗವನ್ನು ನಟರು ಆಕ್ರಮಿಸಿದರು, ಪ್ರಶ್ನೆಗಳು ಚುಟುಕಗಳಾದವು. ಕೆಲವೊಮ್ಮೆ ನೇತಾಗಳೇ ಸ್ವತಃ ಕಾರ್ಟೂನ್‌ಗಳಾಗುತ್ತಿದ್ದರೋ ಎಂದನಿಸುತ್ತಿತ್ತು ಕಾರ್ಟೂನಿಸ್ಟ್ ಕೇವಲ ಸ್ಕೆಚ್ ಮಾಡಿದರಷ್ಟೇ ಸಾಕಾಗುತ್ತಿತ್ತು...,” ಇದು ಪ್ರತಿಪಕ್ಷಗಳನ್ನೇ ಪ್ರಶ್ನಿಸುತ್ತಿದ್ದ ಮುಖ್ಯಧಾರೆಯ ಮಾಧ್ಯಮಗಳ ನಡುವೆ ಅಧಿಕಾರಸ್ಥರನ್ನು ಪ್ರಶ್ನಿಸುವ ಪತ್ರಕರ್ತರ ಈಗ ಹಳೆಯದಾಗಿರುವ ಮೌಲ್ಯವನ್ನು ಎತ್ತಿ ಹಿಡಿಯಲು ಹೆಣಗಿದ ಎನ್‌ಡಿಟಿವಿಯ ರವೀಶ್ ಕುಮಾರ್ ಟಿಪ್ಪಣಿ.

ಈ ಅಂಕಣದಲ್ಲಿ ಇಂತಹ ವ್ಯಂಗ್ಯಚಿತ್ರಗಳು ಸಂದಿಗ್ಧ–ವಿಶ್ಲೇಷಣೆಯನ್ನು ಗ್ರಾಫಿಕ್ ಆಗಿ ಪ್ರಸ್ತುತ ಪಡಿಸಲು ಬಹುವಾಗಿ ನೆರವಾಗಿವೆ. ಅಚ್ಛೇದಿನ್‌ನ ಕೊನೆಯಲ್ಲಿ ಇಂತಹ ‘ಗಂಭಿರತೆ’ಯನ್ನು ತುಂಬಿಕೊಂಡ ಕೊನೆಯ ಅಚ್ಛೇ ದಿನ್ ಘಟನೆಯ, ಪ್ರಧಾನಿಗಳ ಕೇದಾರನಾಥ ಯಾತ್ರೆಯ, ಮೂರು ವ್ಯಂಗ್ಯಚಿತ್ರಗಳು ಇಲ್ಲಿವೆ.



ಅರವಿಂದ ತೆಗ್ಗಿನಮಠ



ಮಂಜುಲ್, ಮಿಡ್‌ಡೇ



ಸತೀಶ್ ಆಚಾರ್ಯ ಸಿಫಿ.ಕಾಂ

ಭಾರತ–ಅಮೆರಿಕ ವ್ಯಾಪಾರ ಸಂಬಂಧಗಳು: ಅವರ 'ಸ್ವರಕ್ಷಣಾತ್ಮಕ' ನೀತಿಗಳಿಗೆ ನಮ್ಮ ಸಂತೋಷದ 'ಸ್ವೀಕೃತಿ'?



ಅಮೇರಿಕಾ ತನ್ನ 'ಸ್ವರಕ್ಷಣಾತ್ಮಕ' ನೀತಿಯನ್ನು ಈಗ ಆರ್ಥಿಕವಾಗಿ ಬಲಗೊಳ್ಳುತ್ತಿರುವ ದೇಶಗಳು ತಾವೇ ಸಂತೋಷದಿಂದ ಒಪ್ಪುವಂತೆ ಅವರ 'ಮನವೊಲಿಸುವ' ಹೊಸದೊಂದು ಕಾರ್ಯತಂತ್ರಕ್ಕಿಳಿದಿದೆ. ಈ ನಿಟ್ಟಿನಲ್ಲಿ ಚೀನಾದೊಂದಿಗೆ ಅದರ ಆಟ ನಡೆಯಲಿಲ್ಲ. ಅದು ಬಗ್ಗಲಿಲ್ಲ ಮಾತ್ರವಲ್ಲ ಅದು ಅಮೇರಿಕಾದ ಸಾಲು ಸಾಲು ರಫ್ತುಗಳ ಮೇಲೆ ಹೆಚ್ಚಿನ ಆಮದು ಸುಂಕ ವಿಧಿಸಿದೆ. ಆದರೆ ಯಾವ ಪ್ರತೀಕಾರಾತ್ಮಕ ಕ್ರಮಗಳನ್ನೂ ಕೈಗೊಳ್ಳದೆ ಒಪ್ಪಿಕೊಳ್ಳುವಂತೆ ಮತ್ತು ಅದರ ಜೊತೆಯಲ್ಲಿ, ಸಾಧ್ಯವಾದರೆ, ಆಮದು ಸುಂಕವನ್ನು ತಗ್ಗಿಸುವಂತೆ ಭಾರತದ ಮನವೊಲಿಸುವ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಿರುವಂತೆ ಕಾಣುತ್ತದೆ. ಇರಾನಿನಿಂದ ತೈಲ ಕೊಳ್ಳಕೂಡದು, ತನ್ನ ತುಟ್ಟಿಯಾದ ತೈಲವನ್ನು ಕೊಳ್ಳಬೇಕು ಎಂಬ ಅಮೇರಿಕದ ತಗಾದೆಗೆ ಮೋದಿ ಸರ್ಕಾರವು, ಚೀನಾದಂತಲ್ಲದೆ, ಸಂಪೂರ್ಣವಾಗಿ ತಲೆಬಾಗಿದೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಹತ್ತೊಂಭತ್ತನೇ ಶತಮಾನದ ಕೊನೆಯ ಮತ್ತು ಇಪ್ಪತ್ತನೇ ಶತಮಾನದ ಆದಿ ಭಾಗದ ಅವಧಿಯಲ್ಲಿ, ಆಗ ಬಲ ಹೊಂದುತ್ತಿದ್ದ ಯೂರೋಪಿನ ದೇಶಗಳಿಗೆ ಮತ್ತು ಅಮೇರಿಕಾಗೆ ಹೋಲಿಸಿದರೆ, ಬಂಡವಾಳಶಾಹಿ ಜಗತ್ತಿನ ಅಂದಿನ ದಿಗ್ಗಜ ಎನಿಸಿದ್ದ ಬ್ರಿಟನ್ನಿನ ಚಾಲ್ತಿ ಖಾತೆಯು ಕೊರತೆಯಲ್ಲಿತ್ತು. ನಿಜ ಸಂಗತಿಯೆಂದರೆ, ಇಂತಹ ಕೊರತೆ ಮುಂಚೂಣಿ ದೇಶದ ಸ್ವಭಾವವೇ ಆಗಿದೆ. ಏಕೆಂದರೆ, ಅಂತಾರಾಷ್ಟ್ರೀಯ ಕರೆನ್ಸಿ ವಿನಿಮಯ ಸಂಬಂಧಿತವಾಗಿ ಆ ಮುಂಚೂಣಿ ದೇಶವು ವ್ಯಾವಹಾರಿಕ ದೃಷ್ಟಿಯಿಂದ ಇತರೆ ದೇಶಗಳ ಬೆಳವಣಿಗೆಗೆ ಅವಕಾಶ ಕಲ್ಪಿಸುವ ಅವಶ್ಯಕತೆಯಿಂದಾಗಿ, ಆ ದೇಶದ ಚಾಲ್ತಿ ಖಾತೆಯಲ್ಲಿ ಕೊರತೆ ಉಂಟಾಗುತ್ತಿತ್ತು.

ಅದೇ ರೀತಿಯಲ್ಲಿ, ಈಗ ಬಲಗೊಳ್ಳುತ್ತಿರುವ ದೇಶಗಳಿಗೆ ಹೋಲಿಸಿದರೆ, ಇಂದಿನ ಬಲಾಢ್ಯ ಅರ್ಥವ್ಯವಸ್ಥೆ ಎನಿಸಿರುವ ಅಮೇರಿಕಾದ ಚಾಲ್ತಿ ಖಾತೆಯು ಕೊರತೆಯಲ್ಲಿದೆ. ಅದು ಸ್ವಾಭಾವಿಕವೇ. ಆದರೆ, ಅಂದಿನ ಬ್ರಿಟನ್ ಮತ್ತು ಇಂದಿನ ಬಲಾಢ್ಯ ಅಮೇರಿಕಾ ದೇಶಗಳ ಚಾಲ್ತಿ ಖಾತೆಯ ಕೊರತೆಗಳಲ್ಲಿ ಒಂದು ವ್ಯತ್ಯಾಸವಿದೆ. ಯಾವ ದೇಶಗಳೊಂದಿಗೆ ಬ್ರಿಟನ್ನಿನ ಚಾಲ್ತಿ ಖಾತೆ ಕೊರತೆಯಲ್ಲಿತ್ತೊ ಆ ದೇಶಗಳಿಗೇ ಬ್ರಿಟನ್ ಬಂಡವಾಳವನ್ನು ಒದಗಿಸಿಯೂ ತನ್ನ ಚಾಲ್ತಿ ಖಾತೆಯ ಕೊರತೆಯನ್ನು ನಿಭಾಯಿಸಿಕೊಳ್ಳುತ್ತಿತ್ತು. ಹೇಗೆಂದರೆ, ಬ್ರಿಟನ್ ತನ್ನ ಅಧೀನದಲ್ಲಿದ್ದ ವಸಾಹತು ದೇಶಗಳಿಗೆ ಅಲ್ಲಿನ ಉದ್ದಿಮೆಗಳು ನಾಶಗೊಳ್ಳುವಂತಹ ರಫ್ತುಗಳ ಮೂಲಕ ತನ್ನ ಚಾಲ್ತಿ ಖಾತೆಯಲ್ಲಿ ಹೆಚ್ಚುವರಿ ಉಳಿಯುವಂತೆ ನೋಡಿಕೊಳ್ಳುತ್ತಿತ್ತು ಮತ್ತು ಆ ವಸಾಹತು ದೇಶಗಳ ಬರುವ ರಫ್ತು ಹೆಚ್ಚುವರಿಯನ್ನು ಬಿಟ್ಟಿಯಾಗಿ ಲಪಟಾಯಿಸಿಕೊಂಡು ತಾನು ಮಾಡಬೇಕಾದ ಪಾವತಿಗಳನ್ನು ಇತ್ಯರ್ಥಮಾಡಿಕೊಳ್ಳುತ್ತಿತ್ತು. ಈ ರೀತಿಯಲ್ಲಿ, ಬ್ರಿಟನ್ ಆಗ ಬಲಗೊಳ್ಳುತ್ತಿದ್ದ ದೇಶಗಳೊಂದಿಗಿನ ತನ್ನ ಬಂಡವಾಳ ಖಾತೆ ಮತ್ತು ಚಾಲ್ತಿ ಖಾತೆಯ ಕೊರತೆಗಳನ್ನು ಸರಿದೂಗಿಸಿಕೊಂಡು ತನಗೆ ವ್ಯಾಪಾರದ ಶಿಲ್ಕು ಸಮಸ್ಯೆ ಉಂಟಾಗದಂತೆ ನೋಡಿಕೊಂಡಿತು.

ಅಂತಹ ಸಾಧ್ಯತೆಗಳು ಅಮೇರಿಕದ ಪಾಲಿಗೆ ಲಭ್ಯವಿಲ್ಲ. ಹಿಂದೆ "ವಸಾಹತು"ಗಳಾಗಿದ್ದ ದೇಶಗಳಿಂದ, ಬೌದ್ಧಿಕ ಆಸ್ತಿ ಹಕ್ಕು ಮತ್ತು ಅಂತಹ ಹಕ್ಕುಸ್ವಾಮ್ಯಗಳ ಮೂಲಕ ಅಮೇರಿಕಾ ಈಗ ತನ್ನ ಚಾಲ್ತಿ ಖಾತೆಯಲ್ಲಿ ಹೆಚ್ಚುವರಿ ಉಳಿಯುವಂತೆ ನೋಡಿಕೊಳ್ಳುತ್ತಿದೆ. ಆದರೂ, ಅದರ ವ್ಯಾಪಾರ ಶಿಲ್ಕು ಚುಕ್ತಾ ಮಾಡಿಕೊಳ್ಳಲು ಇದಿಷ್ಟೇ ಗಳಿಕೆ ಎಟುಕುವುದಿಲ್ಲ. ವಸಾಹತೀಕರಣವು ರಾಜಕೀಯವಾಗಿ ಕೊನೆಗೊಂಡಿದ್ದರಿಂದಾಗಿ, ಹಿಂದೆ ವಸಾಹತುಗಳಾಗಿದ್ದ ದೇಶಗಳಿಂದ ಬಿಟ್ಟಿಯಾಗಿ ಹಣ ಮಾಡಿಕೊಳ್ಳುತ್ತಿದ್ದ ರೀತಿಯಲ್ಲಿ ಬಲಿಷ್ಟ ಬಂಡವಾಳಶಾಹಿ ದೇಶಗಳಿಗೆ ಬಿಟ್ಟಿ ಹಣ ಗಳಿಸುವುದು ಈಗ ಅಸಾಧ್ಯವಾಗಿದೆ. ಹಾಗಾಗಿ, ತನ್ನ ವ್ಯಾಪಾರ ಶಿಲ್ಕು ಬಗೆಹರಿಸಿಕೊಳ್ಳುವ ಸಲುವಾಗಿ ಗತ್ಯಂತರವಿಲ್ಲದೆ ಬಹಳ ವರ್ಷಗಳಿಂದ ಅಮೇರಿಕಾ ಹೊರ ದೇಶಗಳಿಂದ ಸಾಲ ಪಡೆಯುತ್ತಿದೆ. ವಿಶ್ವದ ಅತ್ಯಂತ ಬಲಶಾಲಿ ಬಂಡವಾಳಶಾಹಿ ದೇಶ ಎನಿಸಿರುವ ಅಮೇರಿಕಾ ಈಗ ಅತಿ ದೊಡ್ಡ ಸಾಲಗಾರನೂ ಆಗಿದೆ. ಇಂತಹ ಒಂದು ಪರಿಸ್ಥಿತಿ ಬಂಡವಾಳಶಾಹಿ ಇತಿಹಾಸದಲ್ಲಿ ಸೃಷ್ಟಿಯಾಗಿರುವುದು ಇದೇ ಮೊದಲು. ಹಾಗಾಗಿ, ಹೊರ ದೇಶಗಳಿಂದ ಮಿತಿ ಇಲ್ಲದೇ ಪಡೆಯುತ್ತಿದ್ದ ಸಾಲಗಳ ಮೇಲೆ ಅಮೇರಿಕಾ ಈಗ ಕಡಿವಾಣ ಹಾಕಬಯಸಿದೆ.

ಜೊತೆಗೆ, ಬೇರೆ ದೇಶಗಳಲ್ಲಿ ಉದ್ದಿಮೆಗಳನ್ನು ನಾಶಗೊಳ್ಳುವಂತಹ ರಫ್ತುಗಳ ಮೂಲಕ ತನ್ನ ಆಂತರಿಕ ಆರ್ಥಿಕ ಚಟುವಟಿಕೆಗಳನ್ನು ಪೋಷಿಸಿಕೊಳ್ಳುವುದೂ ಅಮೇರಿಕಕ್ಕೆ ಸಾಧ್ಯವಿಲ್ಲವಾಗಿದೆ. ಹಿಂದೊಮ್ಮೆ ಅತ್ಯಂತ ಬಲಶಾಲಿ ವಸಾಹತುಶಾಹಿ ಶಕ್ತಿ ಎನಿಸಿದ್ದ ಬ್ರಿಟನ್ ಅಂತಹ ಉದ್ದಿಮೆಗಳ ನಾಶದ ರಫ್ತುಗಳನ್ನು ಬೇಕಾದಷ್ಟು ಮಾಡಬಹುದಿತ್ತು ಏಕೆಂದರೆ, ಅದರ ವಸಾಹತು ಮಾರುಕಟ್ಟೆಗಳು ಅದರ ಹತೋಟಿಯಲ್ಲಿದ್ದು ಅದಕ್ಕೆ 'ಸುಲಭವಾಗಿ ಒದಗು'ತ್ತಿದ್ದವು. ಆದರೆ, ಅಮೇರಿಕಾಗೆ 'ಸುಲಭವಾಗಿ ಒದಗುವ' ಅಂತಹ ವಸಾಹತು ಮಾರುಕಟ್ಟೆಗಳು ಇಲ್ಲ.

ತನ್ನ ಆಂತರಿಕ ಆರ್ಥಿಕ ಚಟುವಟಿಕೆಗಳ ಮಂದ ಗತಿ ಮತ್ತು ಏರುತ್ತಿರುವ ಹೊರಗಿನ ಸಾಲದ ಹೊರೆಯ ಸನ್ನಿವೇಶದಲ್ಲಿ ಅಮೇರಿಕಾ 'ಸ್ವರಕ್ಷಣಾತ್ಮಕ' ವ್ಯಾಪಾರ ನೀತಿಗಳನ್ನು ಅಳವಡಿಸಿಕೊಳ್ಳುವ ಹೊಸದೊಂದು ಸಾಹಸದಲ್ಲಿ ತೊಡಗಿದೆ. ತನ್ನ ಈ 'ಸ್ವರಕ್ಷಣಾತ್ಮಕ' ನೀತಿಯನ್ನು ಈಗ ಬಲಗೊಳ್ಳುತ್ತಿರುವ ದೇಶಗಳು ತಾವೇ ಸಂತೋಷದಿಂದ ಒಪ್ಪುವಂತೆ ಅವರ 'ಮನವೊಲಿಸುವ' ಕಾರ್ಯತಂತ್ರವದು. ಅಮೇರಿಕಾ ಈ ನಿಟ್ಟಿನಲ್ಲಿ ಚೀನಾದ ಮನವೊಲಿಸಲು ಪ್ರಯತ್ನಿಸಿತು. ಇಂತಹ ಪ್ರಯತ್ನಗಳ ಮೂಲಕ ಮಂದ ಗತಿಯಲ್ಲಿರುವ ತನ್ನ ಆರ್ಥಿಕ ಚಟುವಟಿಕೆಗಳನ್ನು ಚುರುಕುಗೊಳಿಸುವ ಮತ್ತು ತನ್ನ ವ್ಯಾಪಾರ ಶಿಲ್ಕು ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಭಾರದ ಹೊರೆಯನ್ನು ಇತರ ದೇಶಗಳು ಹೊರುವಂತೆ ಮಾಡಬಹುದು ಎಂದು ಅಮೇರಿಕಾ ಆಶಿಸಿದೆ. ಆದರೆ, ಚೀನಾದೊಂದಿಗೆ ಅದರ ಆಟ ನಡೆಯಲಿಲ್ಲ. ಚೀನಾ ಬಗ್ಗಲಿಲ್ಲ ಮಾತ್ರವಲ್ಲ ಅದು ಅಮೇರಿಕಾದ ಸಾಲು ಸಾಲು ರಫ್ತುಗಳ ಮೇಲೆ ಹೆಚ್ಚಿನ ಆಮದು ಸುಂಕ ವಿಧಿಸಿದೆ.

ತನ್ನ ಈ ಸ್ವರಕ್ಷಣಾತ್ಮಕ ನೀತಿಯನ್ನು ಯಾವ ಪ್ರತೀಕಾರಾತ್ಮಕ ಕ್ರಮಗಳನ್ನೂ ಕೈಗೊಳ್ಳದೆ ಒಪ್ಪಿಕೊಳ್ಳುವಂತೆ ಮತ್ತು ಅದರ ಜೊತೆಯಲ್ಲಿ, ಸಾಧ್ಯವಾದರೆ, ಆಮದು ಸುಂಕವನ್ನು ತಗ್ಗಿಸುವಂತೆ ಭಾರತದ ಮನವೊಲಿಸಲು ಅಮೇರಿಕಾ ಪ್ರಯತ್ನಿಸುತ್ತಿದೆ. ಜೊತೆಗೆ, ಏಷ್ಯಾದ ದೇಶಗಳಿಂದ ಕಳೆದ ಹತ್ತು ಹದಿನೈದು ವರ್ಷಗಳಿಂದ ಭಾರತವು ಹೆಚ್ಚು ಹೆಚ್ಚಾಗಿ ತರಿಸಿಕೊಳ್ಳುತ್ತಿರುವ ಆಮದು ವಸ್ತುಗಳನ್ನು ತನ್ನಿಂದಲೇ ಆಮದು ಮಾಡಿಕೊಳ್ಳುವಂತೆಯೂ ಭಾರತದ ಮನವೊಲಿಸುತ್ತಿದೆ. ಅಮೇರಿಕವು ಏಷ್ಯಾದ ದೇಶಗಳ ರಫ್ತುಗಳನ್ನು ಪಲ್ಲಟಗೊಳಿಸಿ ತನ್ನ ಉತ್ಪನ್ನಗಳಿಗೆ ಭಾರತದ ಮಾರುಕಟ್ಟೆಗೆ ಸುಲಭ ಪ್ರವೇಶ ದೊರಕಿಸಿಕೊಳ್ಳುವ ಮೂಲಕ ಭಾರತದೊಂದಿಗಿನ ವ್ಯಾಪಾರದ ಶಿಲ್ಕು ಗಾತ್ರವನ್ನು ತಗ್ಗಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಈ ಉದ್ದೇಶಕ್ಕಾಗಿ, ಅಮೇರಿಕಾದ ಒಂದು ತಂಡವು ಶೀಘ್ರದಲ್ಲೇ ಭಾರತಕ್ಕೆ ಬರಲಿದೆ.

ಈ ಸಂಬಂಧವಾಗಿ, ಭಾರತದೊಂದಿಗೆ ಅಮೇರಿಕಾಗೆ ಎರಡು ಸಮಸ್ಯೆಗಳಿವೆ. ಮೊದಲನೆಯದು, ಮಾರಾಟದ ಸರಕುಗಳ ಶಿಲ್ಕು ಭಾರತಕ್ಕೆ ಅನುಕೂಲಕರವಾಗಿವೆ. ಎರಡನೆಯದು, ಬೌದ್ಧಿಕ ಆಸ್ತಿ ಹಕ್ಕುಸ್ವಾಮ್ಯದ ಭಾರತದ ವ್ಯವಸ್ಥೆ ಅಮೇರಿಕಕ್ಕೆ ಅನುಕೂಲಕರವಾಗಿಲ್ಲ.

ಭಾರತವು ಅಮೇರಿಕಾಗೆ ಮಾರಿದ ಸರಕು ಸಾಮಗ್ರಿಗಳಿಂದಾಗಿ 2017ರಲ್ಲಿ ವ್ಯಾಪಾರದ ಶಿಲ್ಕು 27.3 ಬಿಲಿಯನ್ ಡಾಲರ್‌ನಷ್ಟು ಮೊತ್ತವು ಭಾರತದ ಪರವಾಗಿತ್ತು. 2018ರಲ್ಲಿ ಅದು ಸುಮಾರು ನಾಲ್ಕು ಬಿಲಿಯನ್ ಡಾಲರ್‌ನಷ್ಟು ಇಳಿದಿದೆ. ಕಾರಣ, ಮೆರಿಕಾದ ಸರಕುಗಳಿಗೆ ಭಾರತವು ಬೇಡಿಕೆಯು ಹೆಚ್ಚಳವಾಗಿದೆ, ಮುಖ್ಯವಾಗಿ, ಇಂಧನ ಮತ್ತು ನಾಗರಿಕ ವಿಮಾನಗಳನ್ನು ಅಮೇರಿಕಾದಿಂದ ಆಮದು ಮಾಡಿಕೊಂಡಿದೆ. ಆದಾಗ್ಯೂ, ಭಾರತದ ವ್ಯಾಪಾರದ ಶಿಲ್ಕು ಮೊತ್ತವು ಗಣನೀಯವೇ. ಈ ಅಂತರವನ್ನು ಅಮೇರಿಕಾ ತಗ್ಗಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ಒಂದು ದಶಕದ ಹಿಂದೆ ಭಾರತದ ಆಮದುಗಳ ಪಾಲಿನಲ್ಲಿ ಅಮೇರಿಕಾದ ಭಾಗ 8.5% ಇತ್ತು. ಈಗ ಅದು 5.7%ಗೆ ಇಳಿದಿದೆ. ಇದೇ ಅವಧಿಯಲ್ಲಿ, ಭಾರತದ ಆಮದುಗಳ ಪಾಲಿನಲ್ಲಿ ಚೀನಾದ ಭಾಗ 11% ಗಿಂತಲೂ ಕಡಿಮೆ ಇದ್ದದ್ದು ಈಗ 16%ಗೆ ಏರಿದೆ. ಅಂದರೆ, ಭಾರತದ ಆಮದುಗಳು ಏಷ್ಯನ್ ಮೂಲಗಳತ್ತ ಹೊರಳಿವೆ. ಅದನ್ನು ಬದಲಿಸಲು ಅಮೇರಿಕಾ ಪ್ರಯತ್ನಿಸುತ್ತಿದೆ.

ಭಾರತವು ಆಮದು ಮಾಡಿಕೊಳ್ಳುತ್ತಿರುವ ಸೇಬು, ಬಾದಾಮಿ ಮುಂತಾದ ಪದಾರ್ಥಗಳ ಬಗ್ಗೆ ತನ್ನ ಮನೋಭಾವವನ್ನು ಬದಲಿಸಿಕೊಳ್ಳಬೇಕೆಂದು ಕಳೆದ ದಶಕದುದ್ದಕ್ಕೂ ಅಮೇರಿಕಾ ಒತ್ತಾಯಿಸಿದೆ. ಅದೇ ರೀತಿಯಲ್ಲಿ, ಭಾರತವು ವ್ಯಾಪಾರದ ಜಿಎಸ್‌ಪಿ ಕಾರ್ಯಕ್ರಮದ(ಆದ್ಯತೆಗಳ ಸಾಮಾನ್ಯಗೊಳಿಸಿದ ವ್ಯವಸ್ಥೆ–ಅಮೆರಿಕಾದ ಆಮದು ಸುಂಕಗಳಲ್ಲಿ ರಿಯಾಯ್ತಿ ಪಡೆವ ವ್ಯವಸ್ಥೆ) ಅಡಿಯಲ್ಲಿ ಮಾಡುತ್ತಿರುವ ರಫ್ತಿನ ಪಟ್ಟಿಯಿಂದ ಅನೇಕ ಐಟಂಗಳನ್ನು ತೆಗೆದು ಹಾಕಲಾಗಿದೆ. ಜೊತೆಯಲ್ಲಿ, ಇರಾನಿನಿಂದ ತೈಲ ಕೊಳ್ಳಕೂಡದು ಎಂದು ಅಮೇರಿಕ ಹೇರಿದ ಒತ್ತಡದಿಂದಾಗಿ, ಇರಾನಿನಿಂದ ಆಮದಾಗುತ್ತಿದ್ದ ತೈಲದ ಒಂದು ಭಾಗವು ಅಮೇರಿಕಾದ ಪಾಲಾಗಲಿದೆ. ಇರಾನಿನಿಂದ ತೈಲ ಕೊಳ್ಳಕೂಡದು ಎಂಬ ಅಮೇರಿಕದ ತಗಾದೆಗೆ ಮೋದಿ ಸರ್ಕಾರವು, ಚೀನಾದಂತಲ್ಲದೆ, ಸಂಪೂರ್ಣವಾಗಿ ತಲೆಬಾಗಿದೆ. ಇರಾನಿನ ತೈಲದ ಬೆಲೆ ಅಗ್ಗವಾಗಿದೆ. ಅಮೇರಿಕದ ತೈಲದ ಬೆಲೆ ತುಟ್ಟಿಯಾಗಿದೆ. ಭಾರತಕ್ಕೆ ಮಾರುವ ತೈಲದ ಬೆಲೆ ಅಗ್ಗವಾಗಿರುವುದಿಲ್ಲ ಎಂಬುದನ್ನು ಅಮೇರಿಕಾ ಸ್ಪಷ್ಟಪಡಿಸಿದೆ. ಆದರೂ ಅಮೇರಿಕಾದ ಒತ್ತಡಕ್ಕೆ ಮೋದಿ ಸರ್ಕಾರ ತಲೆಬಾಗಿದೆ. ಹಾಗಾಗಿ, ಮೋದಿ ಸರ್ಕಾರವು, ತುಟ್ಟಿ ಬೆಲೆಯಲ್ಲಿ ತೈಲ ಕೊಳ್ಳುವಂತೆ ಯಾರೂ ನಮ್ಮ ಕೈ ತಿರುಚಲಾಗದು ಎಂಬ ಭಾರತದ ಹೆಮ್ಮೆಯ ನಿಲುವನ್ನು ಸ್ವಲ್ಪವೂ ಸಂಕೋಚವಿಲ್ಲದೆ ಮಣ್ಣು ಪಾಲು ಮಾಡಿದೆ. ಭಾರತದ ಹಿತದೃಷ್ಟಿಯಿಂದ ನೋಡಿದಾಗ ಇವೆಲ್ಲವುಗಳಿಗೂ ಪ್ರಾಮುಖ್ಯತೆ ಇದೆಯಾದರೂ, ಅಮೇರಿಕಾದ ಹಿತದೃಷ್ಟಿಯಿಂದ ನೋಡಿದಾಗ ಅವು ನಗಣ್ಯ ಎನಿಸುತ್ತವೆ.

ಭಾರತದ ಮೇಲೆ ಅಮೇರಿಕಾ ಒತ್ತಡ ಹೇರುತ್ತಿರುವ ಇನ್ನೊಂದು ವಿಷಯವೆಂದರೆ ಕೃಷಿ ವಲಯ. ಅಕ್ಕಿ, ಗೋಧಿ ಮುಂತಾದ ಧಾನ್ಯಗಳಿಗೆ ಭಾರತವು ವಿಶ್ವ ವ್ಯಾಪಾರ ಸಂಸ್ಥೆಯ ಅನುಮತಿಗಿಂತಲೂ ಹೆಚ್ಚಿನ ಸಬ್ಸಿಡಿ ಕೊಡುತ್ತಿದೆ ಎಂಬುದು ಅಮೇರಿಕಾದ ಬಹಳ ವರ್ಷಗಳ ಆಕ್ಷೇಪಣೆ. ವಿಶ್ವ ವ್ಯಾಪಾರ ಸಂಸ್ಥೆಯು 1995ರಲ್ಲಿ ಆರಂಭವಾದ ಸಮಯದಲ್ಲಿ ಅಮೇರಿಕಾ ಕೃಷಿಗೆ ಕೊಟ್ಟದ್ದ 61 ಬಿಲಿಯನ್ ಡಾಲರ್ ಸಬ್ಸಿಡಿ ಮೊತ್ತವು 2016ರಲ್ಲಿ 135 ಬಿಲಿಯನ್ ಡಾಲರ್‌ಗೆ ಏರಿದೆ. ಅಮೇರಿಕಾದ ಈ ನಿಲುವು "ಸ್ವೀಕಾರಾರ್ಹ", ಆದರೆ, ಬಹು ದೊಡ್ಡ ಸಂಖ್ಯೆಯ ಬಡ ಮತ್ತು ನಿರ್ಗತಿಕ ರೈತರಿಗೆ ಭಾರತ ಕೊಡುವ ಸಣ್ಣ ಮೊತ್ತದ ಸಬ್ಸಿಡಿ ಸ್ವೀಕಾರಾರ್ಹವಲ್ಲ. ಏಕೆಂದರೆ ಅದು "ಬೆಲೆಗಳ ವಿರೂಪ"ಕ್ಕೆ ಕಾರಣವಾಗುತ್ತದೆಯಂತೆ. ಅಮೇರಿಕಾದಲ್ಲಿ ರೈತರ ಸಂಖ್ಯೆ ಬಹಳ ಕಡಿಮೆ ಇರುವುದರಿಂದ ಅವರಿಗೇ ನೇರವಾಗಿ ಸಬ್ಸಿಡಿ ಕೊಡುವುದರಿಂದ "ಬೆಲೆಗಳ ವಿರೂಪ" ಇರುವುದಿಲ್ಲ ಎಂಬ ವಾದ ಮಂಡಿಸಲಾಗಿದೆ. ವಾಸ್ತವವಾಗಿ, ಅಮೇರಿಕಾದ ಈ ಬೃಹತ್ ಗಾತ್ರದ ಸಬ್ಸಿಡಿಯು ಜಾಗತಿಕ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳಲು ಬಳಕೆಯಾಗುತ್ತಿದೆ. ಆದರೆ, ಭಾರತದ ಲಕ್ಷ ಲಕ್ಷ ಮಂದಿ ಬಡ ರೈತರಿಗೆ ಸಬ್ಸಿಡಿಯನ್ನು ವರಮಾನ ಬೆಂಬಲವಾಗಿ ಕೊಡಲಾಗದು; ಅವರಿಗೆ ಬೆಲೆ ಬೆಂಬಲ ರೂಪದಲ್ಲಿ ಸಬ್ಸಿಡಿ ಕೊಡಬೇಕಾಗುತ್ತದೆ. ಅಮೇರಿಕಾ ಕರಾರುವಾಕ್ಕಾಗಿ ಆಕ್ಷೇಪಿಸುತ್ತಿರುವುದು ಇದನ್ನೇ.

ಭಾರತದಲ್ಲಿ ಬೌದ್ಧಿಕ ಆಸ್ತಿಯ ಹಕ್ಕುಗಳಿಗನುಗುಣವಾಗಿ ರೂಪುಗೊಳಿಸಿ ಜಾರಿಗೆ ತಂದಿರುವ ಪೇಟೆಂಟ್ ಕಾಯ್ದೆಯು ಜೆನೆರಿಕ್ ಔಷದಿ ವಲಯಕ್ಕೆ ಒಂದು ಹೊಡೆತವಾಗಿ ಪರಿಣಮಿಸಿದೆ. ಈ ಪೇಟೆಂಟ್ ಕಾಯ್ದೆಯು ಜಾರಿಗೆ ಬರುವ ಮುನ್ನ ಅಸ್ತಿತ್ವದಲ್ಲಿದ್ದ ಭಾರತೀಯ ಪೇಟೆಂಟ್ ಕಾಯ್ದೆಯು ಒಂದು ಮಾದರಿ ಶಾಸನವಾಗಿತ್ತು. ಅದು, ತಂತ್ರಜ್ಞಾನದ ಮೇಲೆ ಮುಂದುವರೆದ ದೇಶಗಳು ಹೊಂದಿದ್ದ ಏಕಸ್ವಾಮ್ಯವನ್ನು ತಕ್ಕಮಟ್ಟಿಗೆ ಮುರಿದಿತ್ತು. ಆದರೆ, ಈ ಕಾಯ್ದೆಯನ್ನು 'ಟ್ರಿಪ್ಸ್'(ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಪಟ್ಟ ಒಪ್ಪಂದ)ಗೆ ಹೊಂದಿಸುವ ಸಲುವಾಗಿ, ಅಂದರೆ, ಒಂದು ಔಷಧಿಯ ಉತ್ಪಾದನಾ ಪ್ರಕ್ರಿಯೆಗೆ ಬದಲಾಗಿ ಆ ಔಷಧಿಗೇ ಪೇಟೆಂಟ್ ಕೊಡುವ ಸಲುವಾಗಿ ಹಿಂದಿನ ಕಾಯ್ದೆಯನ್ನು ಕೈ ಬಿಡಲಾಗಿತ್ತು. ಈ ಬದಲಾವಣೆಯಿಂದಲೂ ತೃಪ್ತಿಯಾಗದ ಅಮೇರಿಕವು ಆಗಿನಿಂದಲೂ ಜೆನೆರಿಕ್ ಔಷದಿ ತಯಾರಿಕೆಯನ್ನು ಕೈಬಿಡುವಂತೆ ಭಾರತದ ಮೇಲೆ ವ್ಯವಸ್ಥಿತವಾಗಿ ಒತ್ತಡ ಹೇರುತ್ತಲೇ ಇದೆ. ಭಾರತಕ್ಕೆ ಭೇಟಿ ಕೊಡಲಿರುವ ಅಮೇರಿಕಾದ ವ್ಯಾಪಾರ ನಿಯೋಗವು ಈ ಒತ್ತಡವನ್ನು ಮುಂದುವರೆಸಲಿದೆ.

ಅಮೇರಿಕಾದ ಇಂತಹ ನಿಲುವುಗಳು, ಮುಕ್ತ ವ್ಯಾಪಾರ ಕುರಿತ ತರ್ಕ ನಿಂತಿರುವುದೇ ವಸಾಹತುವಾದದ ಅಸ್ತಿತ್ವದ ಮೇಲೆ ಎಂಬುದನ್ನು ಪ್ರದರ್ಶಿಸುತ್ತಿವೆ. ವಸಾಹತುವಾದವು ಉತ್ತುಂಗದಲ್ಲಿದ್ದಾಗ ಮುಕ್ತ ವ್ಯಾಪಾರದ ಬಗ್ಗೆ ಢಾಂಬಿಕವಾಗಿದ್ದರೂ ನಡೆಯುತ್ತಿತ್ತು, ಏಕೆಂದರೆ, ಮಾರಾಟವಾಗದೇ ಉಳಿದ ಸರಕುಗಳನ್ನು ವಸಾಹತುಗಳಲ್ಲಿ ಹೇಗಾದರೂ ಮಾರಬಹುದಿತ್ತು. ಮುಕ್ತ ವ್ಯಾಪಾರವು ಒಳ್ಳೆಯದಾಗಿಯೇ ಕಂಡಿತ್ತು ಏಕೆಂದರೆ, ಅದರಿಂದ ಮುಂದುವರೆದ ಯಾವುದೇ ದೇಶವು ಹಾನಿಗೊಳಗಾಗಲಿಲ್ಲ. ಮುಕ್ತ ವ್ಯಾಪಾರವು ಎಂದೂ ಸಂಪೂರ್ಣವಾಗಿ ಮುಕ್ತವಾಗಿ ಇರಲೇ ಇಲ್ಲ. ಆದರೆ, ಮುಂಚೂಣಿಯ ದೇಶವು ತನಗೆ ಅನಾನುಕೂಲವಾಗದ ರೀತಿಯಲ್ಲಿ ಮುಕ್ತ ವ್ಯಾಪಾರ ಪದ್ಧತಿಯನ್ನು ಜಾರಿಯಲ್ಲಿಟ್ಟಿತ್ತು. ಅದು ಉತ್ಪಾದಿಸಿದ ಹೆಚ್ಚುವರಿ ಸರಕುಗಳು ರಫ್ತಾಗುತ್ತಿದ್ದ ವಸಾಹತುಗಳು ಲೆಕ್ಕಕ್ಕೇ ಇರಲಿಲ್ಲ. ಆದರೆ, ವಸಾಹತುವಾದವು ಇಲ್ಲದಿರುವಾಗ ಈ ವಾದವೂ ಕುಸಿದು ಬೀಳುತ್ತದೆ. ಕಳೆದ ಹಲವಾರು ವರ್ಷಗಳಿಂದ ವಿಶ್ವವು ಏಗುತ್ತಿರುವುದು ಈ ಪರಿಸ್ಥಿತಿಯೊಂದಿಗೇ.

ಅಮೇರಿಕಾದ ಸ್ವರಕ್ಷಣಾತ್ಮಕ ವ್ಯಾಪಾರ ನೀತಿಗಳನ್ನು ಚೀನಾ ಮತ್ತು ಭಾರತದಂತಹ ದೇಶಗಳು ತಾವೇ ಸಂತೋಷದಿಂದ ಒಪ್ಪಿಕೊಂಡರೆ ಅದು ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವ ಭಾರವನ್ನು ತಾವೇ ಹೊರುವುದು ಎಂದಾಗುತ್ತದೆ. ಆದರೆ ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವ ಉದ್ದೇಶಕ್ಕಾಗಿ ಈ ದೇಶಗಳು ತಮ್ಮ ತಮ್ಮ ಪ್ರಭುತ್ವದ ಶಕ್ತಿಯನ್ನೂ ಬಳಸಿಕೊಳ್ಳಲಾರವು. ಏಕೆಂದರೆ, ಅವು ವಿತ್ತೀಯ ಕೊರತೆಯ ಗಡಿಯನ್ನು ಒಂದು ಮಿತಿಯಿಂದ ಆಚೆ ದಾಟಲಾರವು. ಈ ಉದ್ದೇಶಕ್ಕಾಗಿ ಅವು ತಮ್ಮ ಹಣಕಾಸು ನೀತಿಯನ್ನಷ್ಟೇ ಬಳಸಿಕೊಳ್ಳಬಲ್ಲವು. ಆದರೆ, ಬೇಡಿಕೆಯ ಕೊರತೆ ಇರುವ ಸನ್ನಿವೇಶದಲ್ಲಿ, ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವ ಗುರಿ ಸಾಧಿಸಲು ಹಣಕಾಸು ನೀತಿಯಷ್ಟೇ ಸಾಲುವುದಿಲ್ಲ. ಪರಿಣಾಮವಾಗಿ, ಒಟ್ಟು ಬೇಡಿಕೆಯ ಕೊರತೆಯ ಪರಿಸ್ಥಿತಿ ಮುಂದುವರೆಯುತ್ತದೆ. ಬೇಡಿಕೆಗೆ ಕೊರತೆ ಇರುವ ಪರಿಸ್ಥಿತಿಯಲ್ಲಿ, ಎಷ್ಟು ಸಾಧ್ಯವೊ ಅಷ್ಟು ದೊಡ್ಡ ಮಾರುಕಟ್ಟೆಗಳನ್ನು ಹಿಡಿಯಲು ಕಿತ್ತಾಟ ನಡೆಯುತ್ತದೆ. ತನ್ನ ಸ್ವರಕ್ಷಣಾತ್ಮಕ ವ್ಯಾಪಾರ ನೀತಿಯನ್ನು ಬೇರೆಯವರು ಸ್ವೀಕರಿಸುವಂತೆ ಮಾಡುವ ಅಮೇರಿಕಾದ ಪ್ರಯತ್ನ ಸಫಲವಾಗುವುದು ಸಾಧ್ಯವೇ ಇಲ್ಲ. ●

ಸರಕಾರಕ್ಕೆ ಬೇಕಾಗಿಲ್ಲದೆ ಕೋಮುಗಲಭೆ 24 ಗಂಟೆಗಳಿಗಿಂತ..... ಪುಟ 16 ರಿಂದ

ಜಾರಿಯಾದವು. ಹೀಗೆ ದೊರೆತ ಕುಮ್ಮಕ್ಕಿನಿಂದಾಗಿ ಕೋಮುವಾದವು ರಥಯಾತ್ರೆ, ಮಸೀದಿ ಧ್ವಂಸ ಮುಂತಾದ ಹೆಸರಿನಲ್ಲಿ ಅಸಂಖ್ಯ ಜನರ ಸಾವು ನೋವಿಗೆ ಕಾರಣವಾಯಿತು. ಬಾಬರಿ ಮಸೀದಿ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿ ಅದರ ರುವಾರಿ ಎಲ್.ಕೆ. ಅಡ್ವಾಣಿಗಾಗಲಿ, ಪಾಲ್ಗೊಂಡ ಪ್ರಮುಖರಿಗಾಗಲಿ ಯಾವುದೇ ಶಿಕ್ಷೆ ಆಗಿಲ್ಲ. ಇದು ನಮ್ಮ ಕಾಲದ ವಿಪರ್ಯಾಸ. ಸಾರ್ವಜನಿಕರ ಸಮ್ಮುಖದಲ್ಲೇ ಈ ಹಿಂಸೆ ನಡೆದರೂ ಉತ್ತರದಾಯಿತ್ವವೇ ಇಲ್ಲದ, ಜವಾಬ್ದಾರಿ ಹೊರದ, ಶಿಕ್ಷೆಯೂ ಆಗದ ಹಿಂಸೆಗೆ ಭಾರತ ಸಾಕ್ಷಿಯಾಗಿದೆ. ಬಾಬರಿ ಮಸೀದಿ ಉರುಳಿದ ದಿನ ಸಂಜೆ ಮುಂಬೈನಲ್ಲಿ ಆರಂಭವಾದ ಗಲಭೆ 1993ರ ಜನವರಿಗೂ ಹಬ್ಬಿದ ಕೋಮು ಹಿಂಸಾಚಾರವನ್ನು ಪುಸ್ತಕದಲ್ಲಿ ತೀಸ್ತಾರವರು ಉಲ್ಲೇಖಿಸಿದ್ದಾರೆ ಎಂದು ರಾಜಶೇಖರ್ ಹೇಳಿದರು.

'ಕೋಮುವಾದದ ಕೇಂದ್ರವೇ ಶ್ರೀಕೃಷ್ಣ ಮಠ' : ದಿನೇಶ್ ಅಮೀನ್ ಮಟ್ಟು.

ರಾಮಮಂದಿರ ಕುರಿತ ಹೇಳಿಕೆಗಳನ್ನು ಈಗಲೂ ನೀಡುತ್ತಲೇ ಇರುವ ಪೇಜಾವರ ಶ್ರೀಗಳು ಇಂದಿಗೂ ಕ್ರಾಂತಿಕಾರಿಗಳೇ ಆಗಿದ್ದಾರೆ. ಶ್ರೀ ಕೃಷ್ಣ ಮಠವು ಕೋಮುವಾದದ ಕೇಂದ್ರವಾಗಿದೆ ಎಂದು ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಹೇಳಿದರು.

ತೀಸ್ತಾ ಸೆಟಲ್ವಾಡ್ ಅವರ ಪುಸ್ತಕ ಬಿಡುಗಡೆ ಸಮಾರಂಭದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು 'ಮುಸ್ಲಿಮರಿಗಾಗಿ ಇಫ್ತಾರ್ ಕೂಟವನ್ನು ಸ್ವಾಮೀಜಿ ಏರ್ಪಡಿಸಿದರೆ ಸಂತೋಷಪಡುತ್ತಾರೆ. ಆದರೆ ಕೋಮುವಾದದ ಬಲೆಯಲ್ಲಿ ಬೀಳದಂತೆ ಕರಾವಳಿಯ ಜನರು ಎಚ್ಚರಿಕೆ ವಹಿಸಬೇಕು' ಎಂದು ಅವರು ಕಿವಿಮಾತು ಹೇಳಿದರು.

ಚುನಾವಣಾ ರಾಜಕಾರಣದ ಮೂಲಕ ಕೋಮುವಾದವನ್ನು ಹಿಮ್ಮೆಟ್ಟಿಸುವುದು ಸಾಧ್ಯವಿಲ್ಲ. ಅದಕ್ಕಿಂತಲೂ ಪ್ರಬಲವಾಗಿ ಸಾಂಸ್ಕೃತಿಕ ರಾಜಕಾರಣದ ಮೂಲಕ ಕೋಮುವಾದವನ್ನು ಸೋಲಿಸಬೇಕು. ಗುಜರಾತ್ ಮತ್ತು ಮಂಗಳೂರನ್ನು ಗಮನಿಸಿದರೆ ಎರಡೂ ಕಡೆ ಉದ್ಯಮವೇ ಮುಖ್ಯವಾಗಿದೆ. ಕರಾವಳಿಯ ಕೋಮುವಾದದ ಹಿಂದೆ ರಾಜಕಾರಣವಿಲ್ಲ. ಬದಲಾಗಿ ಮಾರುಕಟ್ಟೆ, ವ್ಯಾಪಾರ ಮುಖ್ಯವಾಗಿ ಇದೆ. ಒಬ್ಬ ಮುಸ್ಲಿಮರ ಅಂಗಡಿ ಸುಟ್ಟು ಹೋದರೆ ಮುಂದಿರುವ ಕೊಂಕಣಿಯ ಅಥವಾ ಇತರ ಹಿಂದೂಗಳ ಅಂಗಡಿಗೆ ವ್ಯಾಪಾರ ಆಗುತ್ತದೆ. ಆದ್ದರಿಂದ ಇಲ್ಲಿನ ಸಾಂಸ್ಕೃತಿಕ ರಾಜಕಾರಣದಲ್ಲಿ ಕೋಲ, ಬಲಿ, ರಾಷ್ಟ್ರಗೀತೆ ಇರುತ್ತದೆ. ಯಕ್ಷಗಾನವು ಕೋಮುವಾದ ಸೇರಿಕೊಂಡು ಕುಲಗೆಟ್ಟು ಹೋಗಿದೆ. ಹಿಂದೆಲ್ಲ ಪರಿಸ್ಥಿತಿ ಹೀಗಿರಲಿಲ್ಲ. ಎಂದು ಅಭಿಪ್ರಾಯಪಟ್ಟರು.

ಮುಸ್ಲಿಮರಲ್ಲಿ ಅಸುರಕ್ಷತೆಯ ಭಾವನೆ ಇದೆ. ತೀಸ್ತಾ ಅವರ ಪರವಾಗಿ ಕಾರ್ಯಕ್ರಮಗಳಿಗೆ ಬರುತ್ತಾರೆ. ಹೋರಾಟಗಳನ್ನು ಹೇಗೆ ರೂಪಿಸಬೇಕು ಮತ್ತು ತಾರ್ಕಿಕ ಅಂತ್ಯವನ್ನು ಹೇಗೆ ನೀಡಬೇಕು ಎಂಬುದನ್ನು ತೀಸ್ತಾ ನಿರೂಪಿಸಿದ್ದಾರೆ. ಅವರ ಹೋರಾಟದ ದಾರಿ ನಮಗೆ ಮಾದರಿಯಾಗಬೇಕು ಎಂದು ದಿನೇಶ್ ಅಮೀನ್ ಮಟ್ಟು ಹೇಳಿದರು.

ಮಂಗಳೂರಿನಲ್ಲಿ ತೀಸ್ತಾ ಬಗ್ಗೆ ಕುತೂಹಲ:

ನಿವೃತ್ತ ಪ್ರಾಧ್ಯಾಪಕ ಹಾಗೂ ಮಂಗಳೂರಿನ ಸೈಂಟ್ ಎಲೋಶಿಯಸ್ ಕಾಲೇಜಿನ ರಿಜಿಸ್ಟ್ರಾರ್ ಪ್ರೊ.ಎ.ಎಂ.ನರಹರಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿ ತೀಸ್ತಾ ಸೆಟಲ್ವಾಡ್ ಅವರ ಪುಸ್ತಕವನ್ನು ಬಿಡುಗಡೆ ಮಾಡಿದರು. ಪುಸ್ತಕದ ಅನುವಾದಕಿ ಪತ್ರಕರ್ತೆ ಸತ್ಯಾ ಎಸ್. ಮಾತನಾಡಿದರು. ಕ್ರಿಯಾ ಮಾಧ್ಯಮದ ನಿರ್ದೇಶಕರಲ್ಲೊಬ್ಬರಾದ ಯಶವಂತ ಮರೋಳಿ ಸ್ವಾಗತಿಸಿದರು. ಇನ್ನೊಬ್ಬ ನಿರ್ದೇಶಕ ಬೆಂಗಳೂರಿನ ವಸಂತರಾಜ್ ಎನ್.ಕೆ. ವಿಚಾರ ಸಂಕಿರಣ ಮತ್ತು ತೀಸ್ತಾ ಪುಸ್ತಕದ ಪ್ರಕಟಣೆ ಬಗ್ಗೆ ಪ್ರಾಸ್ತಾವಿಕವಾದ ಮಾತುಗಳನ್ನಾಡಿದರು. ಹಿರಿಯ ಸೌಹಾರ್ದ ಸಾಮಾಜಿಕ ಕಾರ್ಯಕರ್ತ ನಿವೃತ್ತ ಡಿವೈಎಸ್‌ಪಿ ಟಿ.ಸಿ.ಎಂ.ಶರೀಫ್, ಸಮುದಾಯ ಮಂಗಳೂರು ಇದರ ಅಧ್ಯಕ್ಷ ಪ್ರೊ.ರಾಜೇಂದ್ರ ಉಡುಪ, ಕಾರ್ಯದರ್ಶಿ ಮನೋಜ್ ವಾಮಂಜೂರು ವೇದಿಕೆ ಮೇಲಿದ್ದರು. ಜಿಲ್ಲೆಯ ಹಿರಿಯ ಮಾನವ ಹಕ್ಕು ಹೋರಾಟಗಾರರಾದ ಪಿ.ಬಿ.ಡೇಸಾ, ಸುರೇಶ್ ಭಟ್ ಬಾಕ್ರಬೈಲ್, ಹಲವರು ಲೇಖಕರು, ಅಧ್ಯಾಪಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬಿಡುಗಡೆಗೊಂಡ 'ಸಂವಿಧಾನದ ಕಾಲಾಳು' ಪುಸ್ತಕದ 90 ಪ್ರತಿಗಳು ಸಭೆಯಲ್ಲೇ ಮಾರಾಟವಾದವು.

'ಮುಂದಿನ ದಿನಗಳು ಭೀಕರ' : ತೀಸ್ತಾ

– ವಸಂತರಾಜ ಎನ್.ಕೆ.

'2019ರ ಚುನಾವಣೆಯಲ್ಲೂ ಕೋಮುವಾದಿ ಪಕ್ಷವೇ ಮತ್ತೆ ಅಧಿಕಾರಕ್ಕೆ ಬಂದರೆ ದೇಶ ಮತ್ತಷ್ಟು ಅಪಾಯಕ್ಕೆ ಸಿಲುಕಲಿದೆ' ಎಂದು ಅವರು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ "ಪ್ರಜಾಪ್ರಭುತ್ವದ ರಕ್ಷಣೆಯಲ್ಲಿ ನಾವು–ನೀವು" ಎಂಬ ವಿಚಾರ ಸಂಕಿರಣದಲ್ಲಿ ಮಾತನಾಡುತ್ತಾ ಎಚ್ಚರಿಸಿದರು. 'ಕಳೆದ ಐದು ವರ್ಷಗಳಲ್ಲಿ ದೇಶಭಕ್ತಿಯ ಹೆಸರಿನಲ್ಲಿ ನಿರಂತರವಾಗಿ ಗುಂಪು ಹಲ್ಲೆಗಳು ನಡೆದಿವೆ. ದಲಿತ, ಆದಿವಾಸಿಗಳು, ಅಲ್ಪಸಂಖ್ಯಾತರನ್ನು ಹೇಗೆಲ್ಲಾ ತುಳಿಯಬೇಕೋ ಅದೆಲ್ಲವನ್ನು ಪ್ರಭುತ್ವದ ಮಾರ್ಗದರ್ಶನದಲ್ಲಿಯೇ ತುಳಿದಿದ್ದಾಗಿದೆ. ಆಹಾರ ಸಂಸ್ಕೃತಿ, ವಾಕ್‌ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗಿದೆ' ಎಂದು ಅವರು ಆರೋಪಿಸಿದರು.

'ಜೆಎನ್‌ಯು ಮಾತ್ರವಲ್ಲದೇ ಶೇ.30ರಿಂದ 40ರಷ್ಟು ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳ ಮೇಲೆ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗಿದೆ. ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಮುಂದುವರಿಯದಂತೆ ಶುಲ್ಕ ಹೆಚ್ಚಳ ಹಾಗೂ ದಲಿತರಿಗೆ, ಹಿಂದುಳಿದ ವರ್ಗಗಳಿಗೆ ಇರುವ ಸೀಟುಗಳ ಪ್ರಮಾಣವನ್ನು ಕಡಿತಗೊಳಿಸಲಾಗಿದೆ. ಅರಣ್ಯ ಹಕ್ಕು ಕಾಯ್ದೆಯ ಹೆಸರಿನಲ್ಲಿ ಆದಿವಾಸಿಗಳ ಬದುಕನ್ನೇ ಕಸಿದುಕೊಳ್ಳಲಾಗುತ್ತಿದೆ' ಎಂದರು. 'ಒಂದು ವೇಳೆ ಬಿಜೆಪಿಯೇ ಅಧಿಕಾರಕ್ಕೆ ಬಂದರೆ ಇನ್ನಷ್ಟು ಕಟುವಾದ ಜನ–ವಿರೋಧಿ ಕಾಯಿದೆಗಳನ್ನು ಜಾರಿಗೆ ತರುವ ಸಾಧ್ಯತೆಯಿದೆ. ಎಲ್ಲಾ ಸಾಂವಿಧಾನಿಕ ಸಂಸ್ಥೆಗಳ ಸ್ವತಂತ್ರ ಸ್ವಾಯತ್ತ ಕೆಲಸ ಅಸಾಧ್ಯವೆನ್ನುವ ಸ್ಥಿತಿ ಬರಲಿದೆ.' ಎಂದರು. ಇಂತಹ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವ ರಕ್ಷಣೆಗೆ ತಕ್ಷಣದ, ಮಧ್ಯಮಗಾಮಿ, ದೂರಗಾಮಿ ಕ್ರಮಗಳನ್ನು ರೂಪಿಸುವ ಅಗತ್ಯವಿದೆ. ಇದಕ್ಕಾಗಿ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯ ಅಗತ್ಯವಂತೂ ಇದ್ದೇ ಇದೆ. ಪ್ರಜಾಪ್ರಭುತ್ವ ಶಕ್ತಿಗಳ ನಡುವೆ ಭಿನ್ನಾಭಿಪ್ರಾಯ ಸಹಜವಾದರೂ, ಅವುಗಳ ಬಗ್ಗೆ ಪರಸ್ಪರ ಗಂಭೀರ ಸಂವಾದವನ್ನು ಪ್ರಬುದ್ಧತೆಯಿಂದ ನಡೆಸಬೇಕಾಗಿದೆ ಎಂದು ಅವರು ಕರೆ ಕೊಟ್ಟರು.

ಬೆಂಗಳೂರಿನಲ್ಲಿ ಮಾಜಿ ಶಿಕ್ಷಣ ಸಚಿವರಾದ ಪ್ರೊ. ಬಿ.ಕೆ.ಚಂದ್ರಶೇಖರ್ ಪುಸ್ತಕ ಬಿಡುಗಡೆ ಮಾಡಿ ಅಧ್ಯಕ್ಷತೆ ವಹಿಸಿದ್ದರು. ಚಿಂತಕ ಶಿವಸುಂದರ್ ವಿವರವಾಗಿ ಪುಸ್ತಕ ಪರಿಚಯ ಮಾಡಿದರು. ರಾಯಚೂರು ವಿ.ವಿ. ವಿಶೇಷಾಧಿಕಾರಿ ಪ್ರೊ. ಮುಜಫ್ಫರ್ ಅಸ್ಸಾದಿ "ಪ್ರಜಾಪ್ರಭುತ್ವದ ರಕ್ಷಣೆಯಲ್ಲಿ ನಾವು–ನೀವು" ಕುರಿತು ಮಾತನಾಡಿದರು. ಸತ್ಯಾ ಎಸ್ ಅನುವಾದಕರಾಗಿ ತಮ್ಮ ಅನುಭವದ ಬಗ್ಗೆ ಮಾತನಾಡಿದರು. ಎಸ್.ಕೆ. ಗೀತಾ ಕ್ರಿಯಾ ಮಾಧ್ಯಮದ ಪರವಾಗಿ ಸಮಾರಂಭದ ನಿರೂಪಣೆ ಮಾಡಿದರು. ಬೆಂಗಳೂರಿನ ಕಾರ್ಯಕ್ರಮವನ್ನು ಸೈಂಟ್ ಜೋಸೆಫ್ಸ್ ಕಾಲೇಜಿನ ಸೋಶಿಯಲ್ ವರ್ಕ್ ವಿಭಾಗದ ಜೆಂಡರ್ ಸೆಲ್ ಜತೆ ಸಹಯೋಗದಲ್ಲಿ ಸಂಘಟಿಸಲಾಗಿತ್ತು.

ಕೇಳಿ ಬಂದ ದನಿಗಳು

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಭದ್ರಬುನಾದಿ ಇದೆ. 20ನೇ ಶತಮಾನದ ಮಧ್ಯ ಭಾಗದಿಂದ ಸಂವಿಧಾನದ ರಚನೆ, ಸಾಂವಿಧಾನಿಕ ಪ್ರಜಾಪ್ರಭುತ್ವ ವ್ಯವಸ್ಥೆಯ ಜಾರಿ, ಮೀಸಲಾತಿ, ವಿಕೇಂದ್ರೀಕರಣ ಮುಂತಾದ ಕ್ರಾಂತಿಗಳು ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ್ದವು. ಆದರೆ 1990ರ ದಶಕದ ನಂತರ ನಿರಂತರ ದಾಳಿಗಳಿಂದ ಪ್ರಜಾಪ್ರಭುತ್ವದ ಅಂತಃಸತ್ವಕ್ಕೆ ಗಾಯಗಳಾಗುತ್ತಲೇ ಇವೆ. ದಿನಕಳೆದಂತೆ ಗಾಯಗಳು ಹೆಚ್ಚಾಗುತ್ತಿದ್ದು, ನಾವೀಗ ಗಾಯಗೊಂಡ ಪ್ರಜಾಪ್ರಭುತ್ವದಲ್ಲಿ ಇದ್ದೇವೆ. ಎಲ್ಲರಿಗೂ ಸಮಾನ ಪ್ರಾತಿನಿಧ್ಯ ಕೊಡುವಂತಹ ವ್ಯವಸ್ಥೆ, ಮೀಸಲಾತಿಯ ಪರಿಣಾಮಕಾರಿ ಅನುಷ್ಠಾನ ಎಲ್ಲ ಕ್ಷೇತ್ರಗಳಲ್ಲೂ ಜಾರಿಗೊಳಿಸುವಂತಹ ವಾತಾವರಣವನ್ನು ಮರುರೂಪಿಸುವತ್ತ ಕಾರ್ಯಪ್ರವೃತ್ತರಾದರೆ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವುದರತ್ತ ಸಾಗಬಹುದು

– ಪ್ರೊ. ಮುಜಫ್ಫರ್ ಅಸ್ಸಾದಿ

ಅನ್ಯಾಯದ ವಿರುದ್ಧ ನಾವು ಮೌನವಾಗಿರದೆ ಧ್ವನಿ ಎತ್ತುವ ಅನಿವಾರ್ಯತೆಯನ್ನು ಸ್ಪಷ್ಟ ಪಡಿಸುವ ಸಂವಿಧಾನದ ಕಾಲಾಳು ಕೃತಿ ತೀಸ್ತಾ ಸ್ವಗತ. ಇಂದು ನಾವು ಕಾಣುತ್ತಿರುವ ಕೋಮುವಾದ ಕೇವಲ ರಾಷ್ಟ್ರಪ್ರಭುತ್ವದ ಹಿಂಸೆ ದಬ್ಬಾಳಿಕೆ ಮಾತ್ರವಲ್ಲ. ನಾಗರಿಕ ಸಮಾಜದ ಹಿಂಸೆಯೂ ಆಗಿದೆ. ಪ್ರಸ್ತುತ ಕಾಣುತ್ತಿರುವ ರಾಷ್ಟ್ರಪ್ರಭುತ್ವದ ಹಿಂಸೆ ಮತ್ತು ನಾಗರಿಕ ಸಮಾಜದ ಹಿಂಸೆ ಆರೆಸ್ಸೆಸ್‌ನಲ್ಲಿ ಏಕೀಭವಿಸುತ್ತದೆ'

– ಜಿ. ರಾಜಶೇಖರ್

***

ಸಂಸತ್ತಿನ ಬಾಗಿಲಿಗೆ ತಲೆ ಮುಟ್ಟಿಸಿ ನಮಸ್ಕಾರ ಮಾಡಿದ ಪ್ರಧಾನಿ ನರೇಂದ್ರ ಮೋದಿ, ದೇಶದ ಯಾವುದೇ ಪ್ರಮುಖ ವಿಷಯಗಳ ಚರ್ಚೆಯಲ್ಲಿ ಭಾಗವಹಿಸಲೇ ಇಲ್ಲ.

– ಪ್ರೊ. ಬಿ.ಕೆ. ಚಂದ್ರಶೇಖರ್

ಕೋಮುವಾದ ಎದುರಿಸಿ ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವದ ರಕ್ಷಣೆ ಸುಲಭವಲ್ಲ. ಚುನಾವಣಾ ರಾಜಕಾರಣಕ್ಕಿಂತ ಪ್ರಬಲ ಅಸ್ತ್ರ ಸಾಂಸ್ಕೃತಿಕ ರಾಜಕಾರಣ ಇಂದಿನ ತುರ್ತು ಅಗತ್ಯ. ಜನಸಾಮಾನ್ಯರು ಸಾಂಸ್ಕೃತಿಕ ರಾಜಕಾರಣವನ್ನು ಅರಿತುಕೊಂಡಾಗಲೇ ಇಂದು ಉದ್ಭವಿಸಿದ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯ. ಸಾಂಸ್ಕೃತಿಕ ರಾಜಕಾರಣವನ್ನು ಅರ್ಥ ಮಾಡಿಕೊಳ್ಳಬೇಕಾದರೆ 'ಕೋಮುವಾದದ ಪ್ರಯೋಗಶಾಲೆ'ಗಳೆನಿಸಿಕೊಂಡ ಗುಜರಾತ್ ಮತ್ತು ಮಂಗಳೂರಿನ ಅವಲೋಕನ ಮಾಡಬೇಕು. ಗುಜರಾತ್ ಮತ್ತು ಮಂಗಳೂರಿನ ನಡುವೆ ಹಲವು ಸಾಮ್ಯತೆಗಳಿವೆ.

– ದಿನೇಶ್ ಅಮೀನ ಮಟ್ಟು

ಎಷ್ಟೊಂದು ವಿಶ್ಲೇಷಣೆಗಳು
ಬಹು ವ್ಯಾಖ್ಯಾನಗಳು
ನಿಜ, ಹಲವು ಸತ್ಯಗಳು!
ಸಾಕಷ್ಟಾಯಿತು ಮಾತು
ಆಗಬೇಕಿರುವುದೀಗ ಕ್ರಿಯೆ
ಕನಿಷ್ಠ, ನಾಲ್ಕು ಹೆಜ್ಜೆಯ ನಡಿಗೆ
ಇಂದಿನಿಂದಲೇ, ಸಾಧ್ಯವಾದರೆ ಈಗಿನಿಂದಲೆ
ನಾಳೆಯ ಹೊತ್ತಿಗೆ ಒಂದು ಪುಟ್ಟ ಪಯಣ

ಮಿತ್ರರೇ, ಈ ಕ್ಷಣ
ಮಲಗಿದವರು ಎದ್ದು ಕೂಡುವುದು
ಎದ್ದವರು ಎಬ್ಬಿಸುವುದು
ಕೂತವರು ನಿಲ್ಲುವುದು
ನಿಂತವರು ನಡೆ ಆರಂಭಿಸುವುದು
ಇಷ್ಟಾದರೂ ಸಾಕು
ಸರಿ, ನಮ್ಮ ಗ್ರಂಥವೇ ಪವಿತ್ರ
ಆದರೂ ಸಾವಿರ ಪುಟಗಳ ತತ್ವ
ತಾಳೆ ನೋಡೋಣ ನಾಲ್ಕು ಹೆಜ್ಜೆಗಳೊಂದಿಗೆ.

ನಿಜ, ಶತ್ರುವಿನ ಸಿಂಹಾಸನ ಇನ್ನಷ್ಟು ಎತ್ತರಿಸಿದೆ
ಸಾಮ್ರಾಜ್ಯ ವಿಸ್ತರಿಸಿದೆ, ಅಚ್ಚರಿಯೇನು ಬಂತು
ಅಗೋ, ನಮ್ಮ ದಾರಿಗಳಲ್ಲಿ ಮುಳ್ಳು ಬೆಳೆದಿದೆ
ಮನೆಗಳಲ್ಲಿ ಜೇಡ ಕಟ್ಟಿದೆ...
ಕನಸುಗಾರರು ನಾವು, ಕನಸುಗಳೂ ನೂರು
ಇರಲಿರಲಿ, ಇಲ್ಲದಿದ್ದರೆ ಹೇಗೆ?
ಹಾಗೇ, ಹಿಡಿಯೋಣ ಕೈಯಲ್ಲಿ
ಕನಿಷ್ಠ ಒಂದು ಕಸಬರಿಗೆ,
ಸಾಧ್ಯವಾದರೆ ಒಂದು ಪುಟ್ಟ ಕುಡಗೋಲು,
ಉಡಿಯಲ್ಲಿರಲಿ ಒಂದಿಷ್ಟು ಬೀಜ
ಬೆನ್ನಿಗಿರಲಿ ನೀರಬಿಂದಿಗೆ...
ಸರಿ, ಇನ್ನು ಹೊರಡೋಣ...
ಯಾವದಿಕ್ಕಿಗೆ?
ಕುಂತೇ ಕೇಳಿದರೆ ಹೇಗೆ ಗೆಳೆಯರೆ
ಎದ್ದು ನಿಂತರಷ್ಟೇ ಕಾಣುವುದು ದಾರಿ.

–ಪೀರ್ ಬಾಷಾ

ಯುರೋ ಪಾರ್ಲಿಮೆಂಟಿಗೆ ಚುನಾವಣೆಗಳು

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಯುರೋ ಪಾರ್ಲಿಮೆಂಟಿಗೆ ಮೇ23ರಿಂದ 26ರ ವರೆಗೆ ಚುನಾವಣೆ ನಡೆಯುತ್ತಿದೆ. ಯುರೋ ಪಾರ್ಲಿಮೆಂಟಿನ ಚುನಾವಣೆ ರಾಷ್ಟ್ರೀಯ ಚುನಾವಣೆಗಳಷ್ಟು ಆಸಕ್ತಿ, ಗಮನ ಸೆಳೆಯದಿದ್ದರೂ ಅವುಗಳಿಗೆ ಅವುಗಳದ್ದೇ ಆದ ಪ್ರಾಮುಖ್ಯತೆಯಿದೆ. ಯುರೋ ಕೂಟದ 28 ದೇಶಗಳ 51 ಕೋಟಿ ಜನರನ್ನು ಪ್ರತಿನಿಧಿಸುವ ಯುರೋ ಪಾರ್ಲಿಮೆಂಟಿನ 751 ಸದಸ್ಯರ ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. 1979ರಲ್ಲಿ ಆರಂಭವಾದ ಯುರೋ ಪಾರ್ಲಿಮೆಂಟಿಗೆ ಇದು 9ನೇ ಚುನಾವಣೆಗಳು. ಬ್ರೆಕ್ಸಿಟ್ ಜಾರಿಯಾದರೆ (ಅಂದರೆ ಬ್ರಿಟನ್ ಯುರೋ ಕೂಟ ಬಿಡುವ ಪ್ರಕ್ರಿಯೆ ಪೂರ್ಣವಾದ ಮೇಲೆ) ಸದಸ್ಯರ ಸಂಖ್ಯೆ 705ಕ್ಕೆ ಇಳಿಯಲಿದೆ. ಆದರೆ ಬ್ರೆಕ್ಸಿಟ್ ಇನ್ನೂ ಜಾರಿಯಾಗದಿರುವುದರಿಂದ ಈ ಚುನಾವಣೆಗಳಲ್ಲಿ ಬ್ರಿಟನ್ ಭಾಗವಹಿಸುತ್ತಿದೆ. ಬ್ರೆಕ್ಸಿಟ್ ಈ ಚುನಾವಣೆಯ ವಿಷಯ ಕೂಡಾ ಆಗಿದೆ. ಬ್ರೆಕ್ಸಿಟ್ ಅಲ್ಲದೆ ವಲಸೆಗಾರರ ಸಮಸ್ಯೆ ಮತ್ತು ವಲಸೆಯ ವಿರುದ್ಧ ಉಗ್ರ ಬಲಪಂಥೀಯ ಪಕ್ಷಗಳು ಚಳುವಳಿಗಳು ನಡೆಸುತ್ತಿರುವ ಹಿಂಸಾತ್ಮಕ ಪ್ರಚಾರಾಂದೋಲನ, ಈ ಚುನಾವಣೆಗಳಲ್ಲಿ ಇನ್ನೊಂದು ಪ್ರಮುಖ ವಿಷಯವಾಗಿದೆ. ಉಗ್ರ ಬಲಪಂಥೀಯರಲ್ಲದೆ ನಡು–ಬಲಪಂಥೀಯರು ಅದೇ ಧೋರಣೆ ಅನುಸರಿಸುತ್ತಿದ್ದಾರೆ. ಆದರೆ ಈ ಸಮಸ್ಯೆ ದೊಡ್ಡ ಚುನಾವಣಾ ವಿಷಯವಾಗಿ ಉಗ್ರ ಬಲಪಂಥೀಯರ ಬಲ ಯುರೋ ಪಾರ್ಲಿಮೆಂಟಿನಲ್ಲಿ ಹೆಚ್ಚುವ ಆತಂಕ ಇತರ ರಾಜಕೀಯ ಬಣಗಳನ್ನು ಕಾಡುತ್ತಿದೆ.

ಯುರೋಪಿನ ದೇಶಗಳಲ್ಲಿ ವಿವಿಧ ರಾಜಕೀಯ ಬಣಗಳಿಗೆ ಸೇರಿದ ಪಕ್ಷಗಳು ಖಂಡದಾದ್ಯಂತ ಕೂಟಗಳನ್ನು ರಚಿಸಿಕೊಂಡು ಈ ಚುನಾವಣೆಗಳಲ್ಲಿ ಸ್ಪರ್ಧಿಸುತ್ತವೆ. ಯುರೋಪಿನಲ್ಲಿ ಪ್ರಮುಖ 5 ಬಣಗಳಿವೆ. ಕ್ರಿಶ್ಚಿಯನ್ ಡೆಮೊಕ್ರಾಟ್ ಪಕ್ಷಗಳಂತಹ ನಡು–ಬಲಪಂಥೀಯ ಪಕ್ಷಗಳ ಕೂಟ ಯುರೋಪಿಯನ್ ಪೀಪಲ್ಸ್ ಪಾರ್ಟಿ (ಇ.ಪಿ.ಪಿ) 221 ಸೀಟುಗಳನ್ನು ಪಡೆದು ಅತಿ ದೊಡ್ಡ ಬಣ ಎನಿಸಿಕೊಂಡಿದೆ. ಸೋಶಲಿಸ್ಟ್ ಮತ್ತು ಡೆಮೊಕ್ರಾಟಿಕ್ ಪಕ್ಷಗಳ (ಎಸ್.& ಡಿ) ನಡು–ಎಡಪಂಥೀಯ ಕೂಟ 191 ಸೀಟುಗಳನ್ನು ಹೊಂದಿದ್ದು ಎರಡನೇ ಅತಿ ದೊಡ್ಡ ಬಣವಾಗಿದೆ. ಯುರೋಪಿನ ಕನ್ಸರ್ವೇಟಿವ್ಸ್ ಮತ್ತು ರಿಫೊರ್ಮಿಸ್ಟ್ಸ್ (ಇ.ಸಿ.ಆರ್.) ಎಂಬ ಬಲಪಂಥೀಯ ಪಕ್ಷಗಳ ಕೂಟ 76 ಸೀಟು ಹೊಂದಿದ್ದು ಮೂರನೇಯ ಅತಿ ದೊಡ್ಡ ಬಣವೆಂದು ಪರಿಗಣಿತವಾಗಿದೆ. 67 ಸೀಟುಗಳನ್ನು ಪಡೆದಿರುವ ಅಲಾಯನ್ಸ್ ಆಫ್ ಲಿಬರಲ್ಸ್ ಅಂಡ್ ಡೆಮೊಕ್ರಾಟ್ಸ್ (ಎ.ಎಲ್.ಡಿ.ಇ.) ನಾಲ್ಕನೆಯ ದೊಡ್ಡ ಬಣವಾಗಿದೆ. ಐದನೇ ಅತಿ ದೊಡ್ಡ ಬಣವಾಗಿ ಕಮ್ಯುನಿಸ್ಟ್ ಮತ್ತು ಇತರ ಎಡಪಂಥೀಯ ಪಕ್ಷಗಳ ಯುರೋಪಿಯನ್ ಎಡ ಕೂಟ 52 ಸೀಟು ಹೊಂದಿದ್ದು 5ನೇ ದೊಡ್ಡ ಬಣವಾಗಿದೆ. ಇವಲ್ಲದೆ ಗ್ರೀನ್ ಪಕ್ಷಗಳ ಮತ್ತು ಉಗ್ರ ಬಲಪಂಥೀಯ ಪಕ್ಷಗಳ (ಇ.ಎ.ಪಿ.ಎನ್) ಕೂಟಗಳಿವೆ. ಈ ಬಣಗಳ ನಡುವೆ ವಿಷಯಕ್ಕೆ ಸಂಬಂಧಿಸಿದಂತೆ ಸಹಕಾರ–ಸಂಘರ್ಷಗಳು ಏರ್ಪಡುತ್ತವೆ.

ಈ ಚುನಾವಣೆಗಳಲ್ಲಿ ಈ ರಾಜಕೀಯ ಬಣಗಳ ಬಲಾಬಲಗಳು ಭಾರೀ ಬದಲಾವಣೆಗಳು ಕಾಣಬಹುದು ಎಂದು ಹೇಳಲಾಗಿದೆ. ಬಲಪಂಥೀಯ ಮತ್ತು ನಡು–ಬಲಪಂಥೀಯ ಕೂಟಗಳು ದುರ್ಬಲವಾಗಿ ಉಗ್ರ–ಬಲಪಂಥೀಯ ಕೂಟ ಎರಡನೇ ಸ್ಥಾನ ಗಳಿಸುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ. ಎಡ ಪಂಥೀಯ ಕೂಟದ ಬಲ ಅಷ್ಟೇ ಇರಬಹುದು ಎಂದು ನಿರೀಕ್ಷಿಸಲಾಗಿದೆ. ಯುರೋಪಿನಾದ್ಯಂತ ಗ್ರೀನ್ ಪಕ್ಷಗಳು ಬಲಗೊಂಡಿದ್ದು ಗ್ರೀನ್ ಮತ್ತು ಉದಾರವಾದಿ ಕೂಟಗಳು ಯುರೋ ಪಾರ್ಲಿಮೆಂಟಿನಲ್ಲಿ ಬಲಗೊಳ್ಳಬಹುದೆಂದು ನಿರೀಕ್ಷಿಸಲಾಗಿದೆ. ಯುರೋ ಪಾರ್ಲಿಮೆಂಟಿನಲ್ಲಿ ಸಾಮಾನ್ಯವಾಗಿ ಮಿತವ್ಯಯ ಮತ್ತು ಇತರ ನವ–ಉದಾರವಾದಿ ನೀತಿಗಳನ್ನು ಬಲವಾಗಿ ವಿರೋಧಿಸುವಲ್ಲಿ ಕಾರ್ಮಿಕರ ಹಕ್ಕುಗಳನ್ನು ಎತ್ತಿ ಹಿಡಿಯುವಲ್ಲಿ, ಬಹುರಾಷ್ಟ್ರೀಯ ಕಾರ್ಪೊರೇಟ್ ಪರ ನೀತಿಗಳನ್ನು ವಿರೋಧಿಸುವಲ್ಲಿ, ಮಿಲಿಟರಿವಾದಿ ವಿದೇಶ ನೀತಿಗಳನ್ನು ವಿರೋಧಿಸುವಲ್ಲಿ ಎಡಪಂಥೀಯ ಕೂಟ ಮುಂಚೂಣಿಯಲ್ಲಿದೆ. ಅದೇ ರೀತಿ ವಲಸೆ ಸಮಸ್ಯೆಯ ಬಗ್ಗೆ ವ್ಯಾಪಕವಾಗಿ ಹರಡುತ್ತಿರುವ ಜನಾಂಗೀಯ–ದ್ವೇಷ ಮತ್ತು ಹೊರಗಿಡುವ ಅಮಾನವೀಯ ನೀತಿಗಳನ್ನು ಈ ಕೂಟ ಬಲವಾಗಿ ವಿರೋಧಿಸುತ್ತದೆ. ಆದರೆ ಈ ಧೋರಣೆಯನ್ನು ಇತರ ಬಣಗಳು ಬೆಂಬಲಿಸುವುದಿಲ್ಲ. ಆದ್ದರಿಂದ ಕೂಟ ಹೆಚ್ಚಾಗಿ ಈ ವಿಷಯಗಳ ಬಗ್ಗೆ ಏಕಾಂಗಿಯಾಗಿ ಹೋರಾಡಬೇಕಾಗುತ್ತದೆ. ಪರಿಸರ ನೀತಿ, ಹವಾಮಾನ ಬದಲಾವಣೆ, ತಾಳಿಕೊಳ್ಳುವ ಹಸಿರು ಬೆಳವಣಿಗೆಯ ಕೆಲವು ವಿಷಯಗಳಲ್ಲಿ ಮಾತ್ರ ಗ್ರೀನ್ ಕೂಟ ಎಡ ಕೂಟದೊಂದಿಗೆ ಸಹಕರಿಸುತ್ತದೆ. ಎಡ ಕೂಟದಲ್ಲಿ ಜರ್ಮನಿ, ಗ್ರೀಸ್, ಫ್ರಾನ್ಸ್ ಮತ್ತು ಸ್ಪೈನ್ ಎಡಪಕ್ಷಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಲುಗಳ ನಡುವೆ ಭಿನ್ನಾಭಿಪ್ರಾಯಗಳು ಸಹ ಕೂಟದ ಕೆಲಸದ ಮೇಲೆ ಪರಿಣಾಮ ಬೀರುತ್ತದೆ.

ಆದರೆ ಇಲ್ಲೊಂದು ವಿಷಯವನ್ನು ಸ್ಪಷ್ಟ ಪಡಿಸಬೇಕು. ಯುರೋ ಪಾರ್ಲಿಮೆಂಟಿನ ಪಾತ್ರ ರಾಷ್ಟ್ರೀಯ ಪಾರ್ಲಿಮೆಂಟುಗಳಿಗೆ ಹೋಲಿಸಿದರೆ ನಗಣ್ಯ. ಅದಕ್ಕೆ ಯುರೋಪಿಗೆ ಕಾನೂನು ಪ್ರಸ್ತಾವಿಸುವ ಅಧಿಕಾರವಿಲ್ಲ. ಯುರೋ ಕೂಟದ ಕಾರ್ಯಾಂಗ ಅದಕ್ಕೆ ಜವಾಬ್ದಾರನೂ ಅಲ್ಲ. ಯುರೋ ಕಮಿಶನ್ ತಯಾರಿಸಿದ ಕಾನೂನುಗಳಿಗೆ ಮಂಜೂರಾತಿ ಅಥವಾ ತಿದ್ದುಪಡಿ ಸೂಚಿಸಲು ಮಾತ್ರ ಅದಕ್ಕೆ ಅಧಿಕಾರವಿದೆ. ಯುರೋ ಕಮಿಶನ್ ರಚನೆಯಲ್ಲೂ ಪಾರ್ಲಿಮೆಂಟಿಗೆ ಹೆಚ್ಚಿನ ಪಾತ್ರವಿಲ್ಲ. ಅದೊಂದು ಅಧಿಕಾರಶಾಹಿ. ಅದರ ಅಧ್ಯಕ್ಷರನ್ನು ಮಾತ್ರ ಪಾರ್ಲಿಮೆಂಟು ನೇಮಿಸುತ್ತದೆ. ಯುರೋ ಆಡಳಿತದ ಇನ್ನೊಂದು ಅಂಗವಾದ ಯುರೋ ಮಂಡಳಿ ರಾಷ್ಟ್ರೀಯ ಅಧಿಕಾರಿಗಳಿಂದ ರಚಿತವಾಗುತ್ತದೆ. ಪಾರ್ಲಿಮೆಂಟು ಮಂಜೂರು ಮಾಡಿದ ನಿರ್ಣಯಗಳು ರಾಷ್ಟ್ರೀಯ ಸರಕಾರಗಳು ಜಾರಿ ಮಾಡಲು ಬಾಧ್ಯವಲ್ಲ. ಯುರೋ ಕೂಟದ ವಿದೇಶ ನೀತಿಯಲ್ಲಿ ಸಹ ಪಾರ್ಲಿಮೆಂಟಿನ ಪಾತ್ರ ಯುರೋ ಕೂಟ ಇಡಿಯಾಗಿ ಇತರ ದೇಶಗಳ ಜತೆ ಮಾಡಿಕೊಳ್ಳುವ ಒಪ್ಪಂದವನ್ನು (ಆದರೆ ರಾಷ್ಟ್ರೀಯ ಸರಕಾರಗಳು ತಮ್ಮದೇ ಒಪ್ಪಂದ ಮಾಡಿಕೊಳ್ಳಲು ಸ್ವತಂತ್ರವಾಗಿರುತ್ತವೆ) ಮತ್ತು ಮೂರನೇ ಜಗತ್ತಿಗೆ ನೆರವು ನೀತಿಗಳನ್ನು ಮಂಜೂರು ಮಾಡುವುದಕ್ಕೆ ಅದರ ಪಾತ್ರ ಸೀಮಿತವಾಗಿರುತ್ತದೆ. ಯುರೋ ಕೂಟದ ನಾಗರಿಕರ ಜೀವನವನ್ನು ಯುರೋ ಪಾರ್ಲಿಮೆಂಟು ಹೆಚ್ಚು ತಟ್ಟುವುದಿಲ್ಲ. ಆದ್ದರಿಂದಲೇ ಯುರೋ ಪಾರ್ಲಿಮೆಂಟಿನ ಚುನಾವಣೆಗಳಲ್ಲಿ ಮತದಾನದ ಪ್ರಮಾಣ 1979ರ ನಂತರ ಪ್ರತಿ ಚುನಾವಣೆಯಲ್ಲಿ ಕಡಿಮೆಯಾಗುತ್ತಾ ಬಂದಿದೆ. 2014ರ ಚುನಾವಣೆಯಲ್ಲಿ ಮತದಾನದ ಪ್ರಮಾಣ ಕೇವಲ 42% ಇತ್ತು.

ಇದರರ್ಥ ಯುರೋ ಕೂಟ ದುರ್ಬಲ ಕೇಂದ್ರವೆಂದಲ್ಲ. ಆರ್ಥಿಕ ನೀತಿ, ಹಣಕಾಸು, ಇನ್ನೂ ಹಲವು ನೀತಿಗಳನ್ನು ಯುರೋ ಕೂಟ ನಿರ್ದೇಶಿಸುತ್ತದೆ. ಅದನ್ನು ಕಟ್ಟುನಿಟ್ಟಾಗಿ ರಾಷ್ಟ್ರೀಯ ಸರಕಾರಗಳು ಪಾಲಿಸಬೇಕು. ಅದನ್ನು ಯುರೋಪಿಯನ್ ಕಮಿಶನ್, ಯುರೋಪಿಯನ್ ಕೇಂದ್ರೀಯ ಬ್ಯಾಂಕ್ ನಿರ್ದೇಶಿಸುತ್ತದೆ. ಇಲ್ಲಿ ಗ್ರೀಸ್ ಆರ್ಥಿಕ ಬಿಕ್ಕಟ್ಟಿನಲ್ಲಿ ಯುರೋಪಿಯನ್ ಕಮಿಶನ್ ಜನ–ವಿರೋಧಿ ಮಿತವ್ಯಯ ಮತ್ತು ಇತರ ಹಣಕಾಸು ನೀತಿಗಳನ್ನು ಜನತೆಯ ಮೇಲೆ ಹೊರಿಸುವಲ್ಲಿ ಗ್ರೀಕ್ ಸರಕಾರದ ಜತೆ ಅದು ಕಠೋರವಾಗಿ ನಡೆದುಕೊಂಡ ರೀತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಆದರೆ ಈ ಯಾವ ನೀತಿ ನಿರ್ದೇಶನಗಳಲ್ಲೂ ಯುರೋ ಪಾರ್ಲಿಮೆಂಟಿಗೆ ಹೆಚ್ಚಿನ ಪಾತ್ರವಿಲ್ಲ ಎಂದು ಗಮನಿಸಬೇಕು. ಯುರೋಪಿನ ದೇಶಗಳ ಆರ್ಥಿಕ, ವಾಣಿಜ್ಯ ಮತ್ತು ಹಣಕಾಸು ನೀತಿಗಳನ್ನು ಜನತೆಯ ಸಾರ್ವಭೌಮತ್ವದಿಂದ ಕಿತ್ತುಕೊಂಡು ಬಹುರಾಷ್ಟ್ರೀಯ ಕಾರ್ಪೊರೇಟುಗಳ ನಿಯಂತ್ರಣದಲ್ಲಿರುವ ಅಧಿಕಾರಶಾಹಿಗೆ ಕೊಡಲೆಂದೇ, ಯುರೋ ಕೂಟದ ಸಂಸ್ಥೆಗಳನ್ನು ವಿನ್ಯಾಸಗೊಳಿಸಲಾಗಿದೆ ಎಂಬುದು ವಾಸ್ತವ. ಆದ್ದರಿಂದಲೇ ಜನತೆಯ ದೇಶಗಳ ಆರ್ಥಿಕ ಸಾರ್ವಭೌಮತ್ವಕ್ಕೆ ಭಂಗ ತರುವ ಯುರೋ ಕೂಟದ ವಿರುದ್ಧ ತೀವ್ರ ಪ್ರತಿರೋಧ ವ್ಯಕ್ತ ಪಡುತ್ತಿದೆ. ಎಡ ಕೂಟ ಸಹ ಇದನ್ನು ಅಭಿವ್ಯಕ್ತಿಸುತ್ತಾ ಬಂದಿದೆ. ಈಗಿನ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಈ ಕೂಗು ಜೋರಾಗಿದ್ದು ಯುರೋ ಕೂಟದಿಂದ ಹೊರ ನಡೆಯಲು ಚಳುವಳಿಗಳಿಂದ, ಸಂಘಟನೆಗಳಿಂದ, ರಾಜಕೀಯ ಪಕ್ಷಗಳಿಂದ (ಎಡಪಂಥೀಯ ಮತ್ತು ಉಗ್ರ ಬಲಪಂಥೀಯ ಎರಡರಿಂದಲೂ) ಒತ್ತಡ ಬರುತ್ತಿದೆ. ಫ್ರಾನ್ಸಿನ 'ಹಳದಿ ನಿಲುವಂಗಿ'ಗಳ ಚಳುವಳಿಯ ಒಂದು ವಿಭಾಗ ಇದನ್ನು ಒತ್ತಾಯಿಸುತ್ತಿದೆ. ಈ ಬಗ್ಗೆ ಎಡ ಕೂಟ ಒಂದು ನಿಲುವು ತೆಗೆದುಕೊಂಡು ಈ ಅವಕಾಶವನ್ನು ಯುರೋ ಕೂಟದ ಪ್ರಜಾಸತ್ತೀಕರಣಕ್ಕೆ ಬಳಸಬೇಕಾಗಿದೆ.

ಸ್ಪೇನ್ : ಎಡ ಪಂಥೀಯ ಬೆಂಬಲಿತ ಸರಕಾರ ರಚನೆಗೆ ಸಿದ್ದತೆ

ಇತ್ತೀಚಿಗೆ ಸ್ಪೇನಿನ ಪಾರ್ಲಿಮೆಂಟಿನ ಕೆಳಸದನ (ಡೆಪ್ಯೂಟೀಸ್ ಕಾಂಗ್ರೆಸ್) ನಡೆದ ಅಂತಿಮ ಚುನಾವಣೆಯಲ್ಲಿ "ಸ್ಪಾನಿಷ್ ವರ್ಕರ್ಸ್ ಪಾರ್ಟಿ" (ಪಿ.ಎಸ್.ಒ.ಇ), ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಇದು ತನ್ನ ಹಿಂದಿನ ಸ್ಥಾನಗಳನ್ನು 85 ರಿಂದ 123 ಕ್ಕೆ ಹೆಚ್ಚಿಸಿ ಕೊಂಡಿದೆ. 350ಸ್ಥಾನ ಗಳ 'ಡೆಪ್ಯೂಟೀಸ್ ಕಾಂಗ್ರೆಸ್'ನಲ್ಲಿ ಸರಳ ಬಹುಮತ ಪಡೆಯುವಲ್ಲಿ ಪಿ.ಎಸ್.ಒ.ಇ. ಗೆ 52 ಸ್ಥಾನ ಗಳ ಕೊರತೆಯಿದೆ. 135 ಸ್ಥಾನ ಗಳನ್ನು ಹೊಂದಿದ್ದ ಸಂಪ್ರದಾಯ ವಾದಿ ಪೀಪಲ್ಸ್ ಪಾರ್ಟಿ (ಪಿಪಿ) 69 ಸ್ಥಾನ ಗಳಿಂದ 66 ಕ್ಕೆ ಸೀಮಿತಗೊಂಡು ಹಿನ್ನಡೆಯನ್ನು ಅನುಭವಿಸಿದೆ. ಉಗ್ರ ರಾಷ್ಟ್ರೀಯತಾವಾದಿ ವೊಕ್ಸ್ ಪಕ್ಷವು 24 ಸೀಟುಗಳನ್ನು ಗಳಿಸಿಕೊಂಡಿದೆ. ಸ್ಪಾನಿಷ್ ಸಂಸತ್ತಿನಲ್ಲಿ, 1975 ರಲ್ಲಿ ಕೊನೆಗೊಂಡ ಸರ್ವಾಧಿಕಾರಿ ಜನರಲ್ ಫ್ರಾಂಕೊ ಅವರ ಆಡಳಿತದ ನಂತರ, ಉಗ್ರ ಬಲಪಂಥಿಯ ಪಕ್ಷವೊಂದು ಸಂಸತ್ತಿಗೆ ಮರುಪ್ರವೇಶ ಮಾಡಿದೆ.

ಪಿ.ಎಸ್.ಒ.ಇ.ನ ನಾಯಕ ಮತ್ತು ಅದರ ಅಧ್ಯಕ್ಷ ರಾಗಿರುವ ಪೆಡ್ರೊ ಸ್ಯಾಂಚೆಝ್, ಜನಪ್ರಿಯ ವಾದ ಎಡಪಂಥೀಯ ಕೂಟ ಪೋಡೆಮೊಸ್ ಬೆಂಬಲ ಪಡೆದು ಸರಕಾರ ರಚಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಿದ್ದಾರೆ. ಪೋಡೆಮೊಸ್ 42 ಸ್ಥಾನಗಳನ್ನು ಪಡೆದಿದೆ. ಜೊತೆಗೆ, ಎಡ ರಿಪಬ್ಲಿಕ್‌ನ್ ಮತ್ತು ಸೊವರಿನಿಸ್ಟ್ ಕ್ಯಾಟಲೋನಿಯನ್ ಒಕ್ಕೂಟವು 15 ಸೀಟುಗಳನ್ನು ಗೆದ್ದುಕೊಂಡಿದೆ. ಅದೂ ಸೇರಿ, ಪಿ.ಎಸ್.ಒ.ಇ ಸರಕಾರ ರಚಿಸಲು ಪ್ರಯತ್ನಿಸುತ್ತಿದೆ. ಒಟ್ಟಾರೆಯಾಗಿ ಎಡಪಂಥೀಯ ಬಲ ಸ್ಪಾನಿಷ್ ಪಾರ್ಲಿಮೆಂಟ್ ನಲ್ಲಿ ಹೆಚ್ಚಾಗಿ ರುವುದು ಪ್ರಮುಖ ಬೆಳವಣಿಗೆಯಾಗಿದೆ. ಬಲ–ನಡು ಪಂಥೀಯ ಸಿಯುಡಾಡಾನೋಸ್ 57 ಸೀಟುಗಳೊಂದಿಗೆ ಚುನಾಯಿತವಾದ ಇನ್ನೊಂದು ಪ್ರಮುಖ ಪಕ್ಷ.



ಎಡ ಒಕ್ಕೂಟದ ಪೋಡೆಮೊಸ್ ನ ಪ್ರಮುಖ ಭಾಗವಾದ, ಸ್ಪೈನ್ ಕಮ್ಯೂನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಎನ್ರಿಕ್ ಸ್ಯಾಂಟಿಯಾಗೊ ಅವರು, ಬಲಪಂಥಿಯ ತ್ರಿವಳಿ ಕೂಟ (ಪಿಪಿ, ಸಿಯದದನೋಸ್ ಮತ್ತು ವೋಕ್ಸ್) ವನ್ನು ಸೋಲಿಸಿ ಅವರ ಕೂಟದ ರಚನೆಯಾಗದಂತೆ ಆಗಿರುವುದು ಸಕಾರಾತ್ಮಕ ಬೆಳವಣಿಗೆ ಎಂದಿದ್ದಾರೆ. ಕಾರ್ಮಿಕ ವರ್ಗದ ಉನ್ನತಿಗಾಗಿ ಎಡಪಂಥೀಯ ಪರ್ಯಾಯ ವನ್ನು ರಚಿಸುವ ಸಾಧ್ಯತೆಯ ಬಗ್ಗೆ ಸುಳಿವು ನೀಡಿ, ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲು ಸಿದ್ದತೆ ನಡೆಸಿದ್ದಾರೆ. ಉಗ್ರ ಬಲ ಪಂಥೀಯ ವೋಕ್ಸ್, ಪಿಪಿ ಸಿಯುಡಾಡಾನೋಸ್ ನಡುವೆ 2018 ಜನವರಿಯಲ್ಲಿ ಪ್ರಾಂತೀಯ ಚುನಾವಣಾ ಸಂದರ್ಭದಲ್ಲಿ ರಚಿಸಿಕೊಂಡಿದ್ದ ಒಕ್ಕೂಟದ ವಿರುದ್ಧ, ಸ್ಪಾನಿಷ್ ಪ್ರಗತಿಶೀಲರ ಆತಂಕ ಮತ್ತು ಟೀಕೆಗೆ ಕಾರಣವಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. .

ಈ ಹಿನ್ನೆಲೆಯಲ್ಲಿ, ಎಡಪಂಥೀಯ ಒಕ್ಕೂಟ ಪೋಡೆಮೋಸ್ ಸ್ಪೇನ್ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ರಚನೆಗೊಂಡು ಕಾರ್ಮಿಕರ ಪ್ರಗತಿಗಾಗಿ ಶ್ರಮಿಸುತ್ತಿತ್ತು. ಅದರ ಫಲ ಈ ಸಂಸತ್ತಿನ ಚುನಾವಣೆಯಲ್ಲಿ ಎಡಪಂಥೀಯರ ಬಲ ಹೆಚ್ಚಳಕ್ಕೆ ಕಾರಣವಾಗಿದೆ. ಪಿ.ಎಸ್.ಒ.ಇ ಮತ್ತು ಎಡಪಂಥೀಯರು ಒಂದಾಗಿ ಕಾಂಗ್ರೆಸ್ ನಲ್ಲಿ ಬಹುಮತ ಸಾಬೀತು ಪಡಿಸಲು ಕಣ ಸಿದ್ದವಾಗುತ್ತಿದೆ.

JANASHAKTHI KANNADA VARA PATRIKE MAY 27 - JUNE 2, 2019 Price: Rs. 10/- Date of Publication: 24 MAY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ವಾಸುದೇವ ಉಚ್ಚಿಲ್

'ಸಂವಿಧಾನದ ಕಾಲಾಳು' ಪುಸ್ತಕದ ಬಿಡುಗಡೆ ಹಾಗೂ "ಪ್ರಜಾಪ್ರಭುತ್ವದ ರಕ್ಷಣೆಯಲ್ಲಿ ನಾವು-ನೀವು" ಮತ್ತು "ಜಾತ್ಯತೀತತೆಯ ರಕ್ಷಣೆಯಲ್ಲಿ ನಾವು-ನೀವು" ವಿಚಾರ ಸಂಕಿರಣಗಳು, ಮೇ 18 ರಂದು ಬೆಂಗಳೂರಿನ ಸೈಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಮತ್ತು ಮೇ 19 ರಂದು ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಯಶಸ್ವಿಯಾಗಿ ನಡೆದವು. ಅವುಗಳು ಬಗ್ಗೆ ಎರಡು ವರದಿಗಳು



ಸರಕಾರಕ್ಕೆ ಬೇಕಾಗಿಲ್ಲದೆ ಕೋಮುಗಲಭೆ 24 ಗಂಟೆಗಳಿಗಿಂತ ಹೆಚ್ಚು ಕಾಲ ನಡೆಯಲು ಸಾಧ್ಯವಿಲ್ಲ : ತೀಸ್ತಾ

"ಸರ್ಕಾರಕ್ಕೆ ಬೇಕಾಗಿಲ್ಲದೆ ಯಾವುದೇ ಕೋಮುಗಲಭೆ 24 ಗಂಟೆಗಳಿಗಿಂತ ಹೆಚ್ಚು ಕಾಲ ನಡೆಯುವುದು ಸಾಧ್ಯವಿಲ್ಲ." ಅಂದರೆ ಅಂದಿನ ಸರಕಾರಕ್ಕೂ ಬೇಕಿರುವುದರಿಂದಲೇ ಕೋಮುಗಲಭೆಗಳು, ನರಮೇಧಗಳು ನಡೆಯುತ್ತವೆ ಎಂದ ಹಾಗಾಯಿತು. ಇದು ಬಹುಶಃ ಶಾಕ್ ಕೊಡುವ ಒಂದು ಹೇಳಿಕೆ. ಹೀಗೆ ಹೇಳಿದವರು ಪ್ರಸಿದ್ಧ ಪತ್ರಕರ್ತರು, ಕೋಮು ಹಿಂಸಾಚಾರದ ಸಂತ್ರಸ್ತರ ಹೋರಾಟಗಾರರಾದ ತೀಸ್ತಾ ಸೆತಲ್ವಾಡ್ ಅವರು. ಕ್ರಿಯಾ ಮಾಧ್ಯಮ, ಮಂಗಳೂರು ಸೈಂಟ್ ಎಲೋಶಿಯಸ್ ಕಾಲೇಜು ಸಮುದಾಯ ಮಂಗಳೂರು ವತಿಯಿಂದ ಸೈಂಟ್ ಎಲೋಶಿಯಸ್ ಕಾಲೇಜು ಸಭಾಂಗಣದಲ್ಲಿ ಭಾನುವಾರ ನಡೆದ ತೀಸ್ತಾ ಅವರ ಪುಸ್ತಕದ ಕನ್ನಡ ಅನುವಾದ 'ಸಂವಿಧಾನದ ಕಾಲಾಳು' ಪುಸ್ತಕ ಬಿಡುಗಡೆ ಸಂದರ್ಭ "ಜಾತ್ಯತೀತತೆಯ ರಕ್ಷಣೆ" ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಬಹುಸಂಖ್ಯಾತರ ಕೋಮುವಾದವು ಸಮಾಜದ ಏಳಿಗೆಗೆ ಅಪಾಯಕಾರಿ ಎಂಬುದರಲ್ಲಿ ಎರಡು ಮಾತಿಲ್ಲ. ಅದೇ ವೇಳೆಗೆ ಜಾತ್ಯತೀತತೆಯ ಪರ ಇರುವವರೆಲ್ಲರೂ ಅಲ್ಪಸಂಖ್ಯಾತ ಕೋಮುವಾದವನ್ನು ಖಂಡತುಂಡವಾಗಿ ವಿರೋಧಿಸಲೇಬೇಕಾಗುತ್ತದೆ ಎಂದು ಅವರು ಹೇಳಿದರು. ಪೊಲೀಸ್ ವ್ಯವಸ್ಥೆಯಲ್ಲಿಯೂ ಕೋಮುವಾದ ಸೇರಿಕೊಂಡಿರುವುದರಿಂದ ಕೋಮುಗಲಭೆ ಮತ್ತಷ್ಟು ಬಿಗಡಾಯಿಸುತ್ತದೆ. ಪೊಲೀಸರ ಮೇಲೆ ರಾಜಕೀಯ ಒತ್ತಡಕ್ಕೆ ಬದಲಾಗಿ ಸಜ್ಜನರು ಜಾತ್ಯತೀತವಾದಿಗಳು ಶಾಂತಿಗಾಗಿ ಒತ್ತಡ ಹಾಕಿದಲ್ಲಿ ಸಮಾಜದಲ್ಲಿ ಶಾಂತಿ ನೆಲೆಸುವಂತೆ ಮಾಡುವುದು ಸುಲಭವಾಗುತ್ತದೆಯಲ್ಲವೇ ಎಂದು ಅವರು ಪ್ರಶ್ನಿಸಿದರು.

'ಪ್ರಾದೇಶಿಕ ಮಟ್ಟದಲ್ಲಿ ಭಾಷೆ, ಸಂಸ್ಕೃತಿಯ, ಸಾಹಿತ್ಯದ ಮೂಲಕ ಕೆಲಸ ಮಾಡುತ್ತಾ ಜಾತ್ಯತೀತತೆಗೆ ಶಕ್ತಿಯನ್ನು ತುಂಬಬೇಕು. ನಮ್ಮ ಸಂವಿಧಾನದ ಮಹತ್ವದ ಕುರಿತು ಚರ್ಚೆ ನಡೆಯಲು ಸಾಧ್ಯವಾಗಬೇಕು. ದೂರದೃಷ್ಟಿಯುಳ್ಳ ಯುವಜನತೆ ಮೌಲ್ಯಗಳಿಗೆ ಬದ್ಧರಾಗಿ ಚರ್ಚೆ ನಡೆಸಲು ವೇದಿಕೆಗಳನ್ನು ಕಲ್ಪಿಸಬೇಕಾಗಿದೆ. ನಮ್ಮ ಇತಿಹಾಸದಲ್ಲಿ ಅನೇಕ ಬಾರಿ ಹೀಗೆ ಚರ್ಚೆ ನಡೆದ ಉದಾಹರಣೆಗಳಿವೆ. ಹಿಂದ್-ತುರ್ಕ್ ಸಂವಾದ, ಶ್ರಮಣ ಮತ್ತು ಬ್ರಾಹ್ಮಣರ ನಡುವೆ ನಡೆದ ಸಂವಾದ, ಕಾಶಿಯಲ್ಲಿ ಬೌದ್ಧ ವಿಚಾರಗಳ ಕುರಿತು ನಡೆದ ಸಂವಾದಗಳಲ್ಲಿ ಪ್ರಶ್ನೆಗಳಿಗೆ, ಭಿನ್ನಾಭಿಪ್ರಾಯಗಳಿಗೆ ಅವಕಾಶವಿದ್ದವು. ಬಹಿಷ್ಕಾರ ಇರಲಿಲ್ಲ. ಇಂತಹುದೇ ಗಂಭೀರ ಚರ್ಚೆ ಮತ್ತು ಅಧ್ಯಯನದ ಮೂಲಕ ನಮ್ಮ ಹಿರಿಯರು ಸಂವಿಧಾನವನ್ನು ರಚಿಸಿದ್ದಾರೆ. ಅದರ ಮೌಲ್ಯಗಳ ರಕ್ಷಣೆ ಇಂದಿನ ತುರ್ತು' ಎಂದು ಅವರು ಹೇಳಿದರು.

'ಜಾತ್ಯತೀತತೆಯ ಪರವಾಗಿ ಇರುವುದೆಂದರೆ ನಮ್ಮ ಇತಿಹಾಸವನ್ನು ಗೌರವಿಸುವುದು. ನಮ್ಮ ಸಾರ್ವಜನಿಕ ಚರ್ಚೆಗಳು 50 ವರ್ಷ ಹಿಂದಕ್ಕೆ ಹೋಗಿವೆ. ಏಕರೀತಿಯ ಋಣಾತ್ಮಕ ಚರ್ಚೆಗಳು ನಡೆಯುತ್ತವೆ. ಅವುಗಳಲ್ಲಿ ಬಹುತ್ವ ಮತ್ತು ವೈವಿಧ್ಯವನ್ನು ತುಂಬುವ ನಿಟ್ಟಿನಲ್ಲಿ ನಾವು ಜಾತ್ಯತೀತತೆಯನ್ನು ಬೆಂಬಲಿಸುವ ಪ್ರಾದೇಶಿಕ ಹೋರಾಟಗಳನ್ನು ಬೆಂಬಲಿಸಬೇಕು. ಸರ್ಕಾರ, ಕುಟುಂಬ, ಸಮಾಜ ಸೇರಿದಂತೆ ಎಲ್ಲ ಹಂತಗಳಲ್ಲಿ ಜಾತ್ಯತೀತತೆಯ ಅಗತ್ಯವನ್ನು ಕಾಣಬೇಕು ಎಂದು ಅವರು ವಿವರಿಸಿದರು. ಜಾತ್ಯತೀತತೆಗಾಗಿ ಹೋರಾಟ ಹಾಗೂ ಮತೀಯವಾದವನ್ನು ಹಿಮ್ಮೆಟ್ಟಿಸುವ ಸಂದರ್ಭದಲ್ಲಿ ನಾವು ದ್ವೇಷವನ್ನು ಶಾಂತಿಯ ಮೂಲಕ ಗೆಲ್ಲುವುದು ಅತ್ಯಗತ್ಯವಾಗಿದೆ. ಇಂದು ದ್ವೇಷಪೂರಿತ ಭಾಷಣಗಳ ಮೂಲಕ ಅಮಾಯಕರನ್ನು ಸೆಳೆಯುವ ಕೆಲಸ ನಡೆಯುತ್ತಿದೆ. ಆ ದ್ವೇಷಪೂರಿತ ಮಾತುಗಳನ್ನು ಶಾಂತಿಯ ಸಂದೇಶದ ಮೂಲಕ ಅಳಿಸಿಹಾಕುವ ಪ್ರಯತ್ನ ಆಗಬೇಕಾಗಿದೆ ಎಂದು ತೀಸ್ತಾ ಹೇಳಿದರು.

ಸಂವಿಧಾನದ ಕಾಲಾಳು ಕೃತಿ ತೀಸ್ತಾ ಸ್ವಗತ: ಜಿ. ರಾಜಶೇಖರ

ಗುಜರಾತ್ ಹಿಂಸೆಯ ಬಗ್ಗೆ ತೀಸ್ತಾ ವರ್ಣನೆ, ಅನೇಕ ಕೋಮು ಹಿಂಸೆಯ ಘಟನೆಗಳು ಮಾತಿಗೆ ಮೀರಿದವು. ಅನ್ಯಾಯದ ವಿರುದ್ಧ ನಾವು ಮೌನವಾಗಿರದೆ ಧ್ವನಿ ಎತ್ತುವ ಅನಿವಾರ್ಯತೆಯನ್ನು ತೀಸ್ತಾ ಅವರು ಸ್ಪಷ್ಟಪಡಿಸಿದ್ದು, ಕೃತಿಯನ್ನು 'ತೀಸ್ತಾ ಸ್ವಗತ' ಎಂದು ತಾನು ಕರೆಯುವುದಾಗಿ ಹಿರಿಯ ಲೇಖಕ, ಚಿಂತಕ ಜಿ.ರಾಜಶೇಖರ್ ಅಭಿಪ್ರಾಯಿಸಿದ್ದಾರೆ. ಅವರು ಪತ್ರಕರ್ತೆ ಸತ್ಯಾ ಎಸ್. ಅವರು ಅನುವಾದಿಸಿರುವ 'ಸಂವಿಧಾನದ ಕಾಲಾಳು ತೀಸ್ತಾ ಸೆಟಲ್ವಾಡರ ನೆನಪುಗಳು' ಕೃತಿ ಪರಿಚಯ ನೀಡಿ ಮಾತನಾಡಿದರು.

ತೀಸ್ತಾ ಸೆಟಲ್ವಾಡರ ನೆನಪುಗಳನ್ನು ಒಳಗೊಂಡ ಕೃತಿ ಸಂವಿಧಾನದ ಕಾಲಾಳು ಪುಸ್ತಕವು ಅನಂತ ಮೂರ್ತಿಯವರ 'ಮಾತು ಸೋತ ಭಾರತ' ಕೃತಿಯನ್ನು ನೆನಪಿಸುತ್ತದೆ ಎಂದವರು ಹೇಳಿದರು.

ತೀಸ್ತಾ ಅವರು ತಮ್ಮ ಆತ್ಮ ಚರಿತ್ರೆಯಲ್ಲಿ ತಮ್ಮನ್ನು ಇಲ್ಲವಾಗಿಸಿಕೊಂಡಿದ್ದಾರೆ. ಹಾಗಾಗಿ ಕೃತಿಯಲ್ಲಿ ನಮಗೆ ಕಾಣಿಸುವುದು ಕೋಮುವಾದದ ವಿವಿಧ ಮುಖಗಳೇ ಹೊರತು ತೀಸ್ತಾರಲ್ಲ. 'ನಾನು ಈ ಕಾಲದ ಒಂದು ಬಾಗ. ನಾನೂ ಜವಾಬ್ದಾರ' ಎಂಬುದನ್ನು ತಮ್ಮ ಇಡೀ ಕೃತಿಯಲ್ಲಿ ಪ್ರಸ್ತುತಪಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಹಾಲಿ ಕೇಂದ್ರ ಸರಕಾರ ಅವರನ್ನು ರಾಷ್ಟ್ರವಿರೋಧಿ ಎಂಬುದಾಗಿ ಬಿಂಬಿಸಿದೆ. ಅವರ ಬಗ್ಗೆ ಹಾಲಿ ಸರಕಾರ ಚರಿತ್ರೆಯ ಯಾವುದೇ ಅರಿವಿಲ್ಲದೆ ಅವರನ್ನು ದೇಶದ್ರೋಹಿ, ಅಪರಾಧಿ ಎಂಬ ರೀತಿಯಾಗಿ ಚಿತ್ರಿಸುತ್ತಿರುವುದು ವಿಷಾದದ ಸಂಗತಿ ಎಂದು ರಾಜಶೇಖರ್ ಹೇಳಿದರು.

ಕಾನೂನು ಮತ್ತು ಸಂವಿಧಾನದ ಮೌಲ್ಯಗಳನ್ನು ತಮ್ಮ ಜೀವನದ ಉಸಿರು ಮಾಡಿಕೊಂಡ ಕುಟುಂಬ ತನ್ನದು. ತುರ್ತು ಪರಿಸ್ಥಿತಿ ಸಂದರ್ಭ ತಮ್ಮ ಮನೆ ಪ್ರತಿಭಟನೆಯ ಕೇಂದ್ರವಾಗಿತ್ತು ಎಂಬುದನ್ನು ತಮ್ಮ ಕೃತಿಯಲ್ಲಿ ನಿರೂಪಿಸಿದ್ದಾರೆ ಎಂದು ಕೃತಿ ಬಗ್ಗೆ ರಾಜಶೇಖರ್ ವಿವರಿಸಿದರು.

2002ರ ಗುಜರಾತ್ ಗಲಭೆಯನ್ನು ವಿರೋಧಿಸುವವರು 1984ರ ಸಿಖ್ ನರಮೇಧವನ್ನು ವಿರೋಧಿಸಿದ್ದರು. ಆದರೆ ಹಿಂದುತ್ವವಾದಿಗಳು ಆ ಸತ್ಯವನ್ನು ಮರೆಮಾಚುತ್ತಿದ್ದಾರೆ. ನಾವು ಅವರ ಈ ಕುತಂತ್ರವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಸಿಖ್ ನರಮೇಧವನ್ನು ಗುಜರಾತ್ ಹಿಂಸೆಗೆ ಉತ್ತರವಾಗಿ, ಪ್ರತಿಯಾಗಿ ಮಾತನಾಡುವವರು ಅಸ್ಸಾಂನಲ್ಲಿ ನಡೆದ ಘಟನೆಯನ್ನು ಯಾಕೆ ಪ್ರಸ್ತಾಪಿಸುವುದಿಲ್ಲ ಎಂದು ತೀಸ್ತಾ ಅವರು ಪ್ರಶ್ನಿಸಿದ್ದಾರೆ.

ರಾಜೀವ್ ಗಾಂಧಿ ಪ್ರಧಾನಿಯಾಗಿದ್ದಾಗ ಬಾಬ್ರಿ ಮಸೀದಿ ಬಾಗಿಲು ತೆಗೆದು ಪೂಜೆಗೆ ಅವಕಾಶ ಕಲ್ಪಿಸಿದರು. ಬಳಿಕ ಮುಸ್ಲಿಮರನ್ನು ಒಲಿಸಿಕೊಳ್ಳುವ ನಿಟ್ಟಿನಲ್ಲಿ ಶಾಬಾನು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪನ್ನು ತಿರುಚಿ ಕಾನೂನು ರಚಿಸಿದರು. ಜೊತೆಗೆ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ಎಂಬ ಆರ್ಥಿಕ ಲೂಟಿಯು ಸುಧಾರಣೆಯ ಹೆಸರಿನಲ್ಲಿ

ಪುಟ 14 ಕ್ಕೆ



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**